
ಎಪ್ರಿಲ್ 2011

₹ 10/-

# ಯುಗರಶ್ಮಿ

ತ್ರೈಮಾಸಿಕ



- ❖ ಇಸ್ಲಾಮ್ ಧರ್ಮ ಪ್ರತಿಪಾದಿಸುವ ಜಿಹಾದ್
- ❖ ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ
- ❖ ಕರುಣೆಯ ಪ್ರವಾದಿಯ ನಾಮದಲ್ಲಿ ಕ್ರೂರತೆ
- ❖ ಪ್ರಕೃತಿ ಕ್ಷೋಭೆಯೋ ದೈವಿಕ ಶಿಕ್ಷೆಯೋ?

"ನಾಡುಗಳನ್ನು, ಅಲ್ಲಿ ನೆಲೆಸಿರುವವರು ಸಜ್ಜನರಾಗಿದ್ದರೆ, ನಿನ್ನ ಪ್ರಭು ಅನ್ಯಾಯವಾಗಿ ನಾಶಪಡಿಸಲಾರ."
ಪವಿತ್ರ ಖುರ್‌ಆನ್ (11:118)

**ಬಿಡಿ ಪ್ರತಿ : ರೂ. 10/-   ವಾರ್ಷಿಕ ಚಂದಾ : ರೂ. 40/-   ಅಂಚೆ ಮೂಲಕ : ರೂ. 50/-**

## ವಿಷಯ ಸೂಚಿಕೆ

| | ಪುಟ |
|---|---|
| ☆ ಭೂಕಂಪಗಳೂ ಜಲಪ್ರಳಯಗಳೂ | 1 |
| ☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ☆ ಇಸ್ಲಾಮ್ ಧರ್ಮ ಪ್ರತಿಪಾದಿಸುವ ಜಿಹಾದ್ | 3 |
| ☆ ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ | 8 |
| ☆ ಕರುಣೆಯ ಪ್ರವಾದಿಯ ನಾಮದಲ್ಲಿ ಕ್ರೂರತೆ | 19 |
| ☆ ಪ್ರಕೃತಿ ಕ್ಷೋಭೆಯೋ ದೈವಿಕ ಶಿಕ್ಷೆಯೋ? | 22 |
| ☆ ಆರೋಗ್ಯ : ಹೃದ್ರೋಗ ನಿಯಂತ್ರಿಸಲು ಪ್ರತಿದಿನ ಎರಡು ಸಾರಿ ಹಲ್ಲುಜ್ಜುವುದು ಪ್ರಯೋಜನಕರ | 26 |
| ☆ ಹಿಂದೆ ಸಂಭವಿಸಿದ ಘಟನೆಗಳಿಂದ ಪಾಠ ಕಲಿಯಿರಿ | 27 |
| ☆ ಇಸ್ಲಾಮಿನ ಪ್ರಾಥಮಿಕ ಪಾಠಗಳು | 29 |
| ☆ ಅಹ್ಲು ಸುನ್ನತ್ ವಲ್‌ಜಮಾಅತ್ ಯಾರು? | 31 |
| ☆ ಓದಿದ್ದು : | |
| ☆ ತಸ್ಲೀರ್ ಅಂತ್ಯಕ್ರಿಯೆ ನೇತೃತ್ವ : ಇಮಾಮರ ನಕಾರ ☆ ಪಾಕ್ : ಶೆರ್ರಿ ಹತ್ಯೆಗೆ ಫತ್ವಾ | |
| ☆ ದಾಡಿಗೆ ಕತ್ತರಿ; ಅಮಾನತು | 33 |
| ☆ ಧರ್ಮನಿಂದೆ ಕಾನೂನು ರದ್ಧತಿಗೆ ಪೋಪ್ ಆಗ್ರಹ ☆ ತಸ್ಲೀರ್ ಹಂತಕ ತಪ್ಪೊಪ್ಪಿಗೆ ☆ ಉಗ್ರರ ಜತೆ ಜರ್ದಾರಿ | |
| ☆ 2030ಕ್ಕೆ ಭಾರತದಲ್ಲಿ ಮುಸ್ಲಿಮರ ಸಂಖ್ಯೆ ಶೇ.1 ರಷ್ಟು ಹೆಚ್ಚಳ | 34 |
| ☆ 'ಮಕ್ಕರ ವಿಳಕ್ಕ್' ಮಾನವ ಸೃಷ್ಟಿ : ಟಿಡಿಬಿ ☆ ಮಕ್ಕಳಿಗೆ ಲೈಂಗಿಕ ಕಿರುಕುಳ 21 ಪಾದ್ರಿಗಳ ಅಮಾನತು | |
| ☆ ಲೈಂಗಿಕ ಕಿರುಕುಳ ಹಿಂದೂ ಗುರುವಿಗೆ ಜೈಲು ☆ ಹಿಂದೂ – ಭೀತಿವಾದ ನಂಟು ಸಲ್ಲದು | 35 |
| ☆ ಪಾಕ್ : ಅಲ್ಪಸಂಖ್ಯಾಕ ಸಚಿವ ಭಟ್ಟಿ ಹತ್ಯೆ ☆ ಮೆದುಳಿನ ಆರೋಗ್ಯಕ್ಕೆ ಪದಬಂಧ? ☆ 2030ರ ವೇಳೆಗೆ ಶೇ. 20 ತರುಣರಿಗೆ ಬಾಳಸಂಗಾತಿ ಸಿಗುವ ಸಂಭವ ವಿರಳ ☆ ಚೀನ : ಒಂದೇ ಮಗು ನೀತಿ ಸಡಿಲ? | 36 |
| ☆ ಪಾಕ್ ಅಪಾಯಕಾರಿ ರಾಷ್ಟ್ರ : ಮುಶ್ ☆ ಹಿಟ್ಲರ್ ಮತ್ತು ಅಹ್ಮದಿಯಾ ಜಮಾಅತ್ | 37 |
| ☆ ವಾರ್ತೆಗಳು : | |
| ☆ ಅಹ್ಮದಿಯಾ ವಾರ್ಷಿಕ ಸಮ್ಮೇಳನ ☆ ಮುಸ್ಲಿಮರು ಶಾಂತಿಗೋಸ್ಕರ | 38 |
| ☆ ಬ್ರಿಟನಿನಲ್ಲಿ ಇಸ್ಲಾಮಿಕ ಮುನ್ನಡೆ ☆ ಅಹ್ಮದಿಗೆ ಲಾರ್ಡ್‌ಶಿಪ್ ☆ ಅಹ್ಮದಿಯರ ಹಕ್ಕುಗಳನ್ನು ಸಂರಕ್ಷಿಸಿರಿ | 39 |
| ☆ ಸ್ವಾಮಿ ಅಗ್ನಿವೇಶ್‌ಗೆ ಮುಲ್ಲಾ ಛೀಮಾರಿ ☆ ಉಚಿತ ಆರೋಗ್ಯ ತಪಾಸಣಾ ಶಿಬಿರ | 40 |
| ☆ ಸರ್ವಧರ್ಮ ಶಾಂತಿ ಸಮ್ಮೇಳನ | 41 |
| ☆ ಸತ್ಯ ಸಂಘ | 42 |
| ☆ ಸಂಪಾದಕರಿಗೆ ಪತ್ರ | 43 |

ಮುಖಪುಟ ಚಿತ್ರ : ಮಿನಾರತುಲ್ ಮಸೀಹ್ ಮತ್ತು ಮಸ್ಜಿದ್ ಮುಬಾರಕ್, ಖಾದಿಯಾನ್

ವಿಳಾಸ :– 10-23-1008/1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ನಿಗಾವಣೆ : ಮುಹಮ್ಮದ್ ಶಫೀಉಲ್ಲಾಹ್
ಸೌತ್ ಝೋನಲ್ ಅಮೀರ್,
ಅಹ್ಮದಿಯಾ ಮುಸ್ಲಿಂ ಜಮಾಅತ್,
ಕರ್ನಾಟಕ.

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 28 | ಎಪ್ರಿಲ್ 2011 | ಶಹಾದತ್ 1390 | ಸಂಚಿಕೆ : 1 |
|---|---|---|---|---|

## ಭೂಕಂಪಗಳೂ ಜಲಪ್ರಳಯಗಳೂ

"ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಘಟಿಸಲಿವೆಯೆಂಬ ಸೂಚನೆಯನ್ನು ದೇವನು ನನಗೆ ಅರುಹಿದ್ದಾನೆ. ನಾನು ಮುಂಚಿತವಾಗಿಯೇ ಹೇಳಿದ್ದಂತೆ, ಅಮೇರಿಕ ಮತ್ತು ಯುರೋಪು ಭೂಕಂಪಗಳಿಗೆ ಗುರಿಯಾಗಿವೆ. ಹಾಗೆಯೇ ಏಷ್ಯಾ ಸಹ ಈಡಾಗುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು.

"ಮನುಷ್ಯನುಂಟಾದ ಕಾಲದಿಂದ ಇಷ್ಟರವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಬರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು.... 'ಓರ್ವ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ (17 : 16) ಹೇಳಿರುವನು.

"ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ಯಾರಿಗಾದರೂ ಅಲ್ಲಾಹು ಒಳಿತು ಮಾಡಲು ಬಯಸಿದರೆ ಅವನನ್ನು ಕಠಿಣ ಪರೀಕ್ಷೆಗೆ ಗುರಿಪಡಿಸುವನು. (ಬುಖಾರಿ)

❖ ಆಪತ್ತಿಗೆ ಒಳಪಟ್ಟರೆ ನೀವು ಯಾರೂ ಮರಣವನ್ನು ಬಯಸಬಾರದು. ಗತ್ಯಂತರವಿಲ್ಲದಿದ್ದರೆ ಅವನು ಹೀಗೆ ಪ್ರಾರ್ಥಿಸಲಿ: ಪ್ರಭೂ, ನಾನು ಬದುಕುವುದು ಉತ್ತಮವೆಂದಾದರೆ ನನ್ನನ್ನು ಬದುಕಿಸು, ಮರಣ ಗುಣಕರವೆಂದಾದರೆ ನನ್ನನ್ನು ಮೃತಪಡಿಸು.

❖ ಗುರುತರವಾದ ಪರೀಕ್ಷೆಗಳನ್ನು ಗೆದ್ದರೆ ಅತಿ ಮಹತ್ತರವಾದ ಪ್ರತಿಫಲ ಲಭಿಸುತ್ತದೆ. ಖಂಡಿತವಾಗಿಯೂ ಅಲ್ಲಾಹು ಸಂಪ್ರೀತರಾದವರನ್ನು ಕಠಿಣ ಪರೀಕ್ಷೆಗಳಿಗೆ ಗುರಿಪಡಿಸುವನು. (ಸಹನ ಶಕ್ತಿಯೊಂದಿಗೆ) ಅದನ್ನು ಯಾರಾದರೂ ಇಷ್ಟಪಟ್ಟರೆ ಅಲ್ಲಾಹು ಅವನನ್ನು ಇಷ್ಟಪಡುವನು. ಇಷ್ಟಪಡದಿದ್ದರೆ ಅಲ್ಲಾಹು ಅವನನ್ನು ಇಷ್ಟಪಡಲಾರ.

❖ ಸತ್ಯವಿಶ್ವಾಸಿಗೆ ತನ್ನ ಶರೀರ, ಸಂತಾನಗಳು ಮತ್ತು ಸಂಪತ್ತಿನಿಂದ ಪರೀಕ್ಷೆಗಳು ಉಂಟಾಗುತ್ತಿರುತ್ತವೆ. ಕೊನೆಗೆ ಅವನು ಪಾಪರಹಿತನಾಗಿ ಸ್ವರ್ಗದಲ್ಲಿ ಪ್ರವೇಶಿಸುವನು.

❖ ಸಂಶಯವುಳ್ಳದ್ದನ್ನು ಬಿಟ್ಟುಬಿಡಬೇಕು. ಖಚಿತವಾದುದನ್ನು ಮಾತ್ರ ಸ್ವೀಕರಿಸಬೇಕು. ಖಂಡಿತವಾಗಿಯೂ ಸತ್ಯವು ಮನಃಸಮಾಧಾನವನ್ನು ಮತ್ತು ಸುಳ್ಳು ಪರಿಭ್ರಮೆಯನ್ನು ಉಂಟುಮಾಡುತ್ತದೆ. (ತಿರ್ಮಿದಿ)

❖ ಸದ್ವರ್ತನೆಯೊಂದಿಗೆ ದೀರ್ಘಾಯುಷ್ಯ ಪಡೆದವನು ಮನುಷ್ಯರಲ್ಲಿ ಉತ್ತಮನು. (ತಿರ್ಮಿದಿ)

❖ ಸತ್ಪಥದೆಡೆಗೆ ಕರೆಯುವವನಿಗೆ ಅವನನ್ನು ಅನುಸರಿಸಿ ವರ್ತಿಸಿದವನ ತುಲ್ಯ ಪ್ರತಿಫಲ ಲಭಿಸುವುದು. ಅವರಿಗೆ ಪ್ರತಿಫಲದಲ್ಲಿ ಏನೂ ಕೊರತೆಯಾಗದು. ಅನಾಚಾರದೆಡೆಗೆ ಕರೆಯುವವನಿಗೆ ಅದನ್ನು ಅನುಕರಿಸಿದವನ ತುಲ್ಯ ಶಿಕ್ಷೆ ದೊರಕುವುದು. ಶಿಕ್ಷೆಯಲ್ಲಿ ಅವರಿಗೆ ಏನೂ ಕೊರತೆಯಾಗದು. (ಮುಸ್ಲಿಂ)

❖ ನೀವು ಒಳಿತನ್ನು ಉಪದೇಶಿಸಬೇಕು. ಕೆಟ್ಟದ್ದನ್ನು ನಿರೋಧಿಸಬೇಕು. ಇಲ್ಲವಾದರೆ ಅಲ್ಲಾಹು ನಿಮ್ಮ ಮೇಲೆ ಕಠಿಣ ಶಿಕ್ಷೆ ಇಳಿಸುವನು. ನೀವು ಪ್ರಾರ್ಥಿಸಿದರೆ ಉತ್ತರ ಲಭಿಸಲಿಕ್ಕಿಲ್ಲ. (ತಿರ್ಮಿದಿ)

❖ ಧಿಕ್ಕಾರಿಯಾದ ರಾಜನ ಮುಂದೆ ನ್ಯಾಯ ಹೇಳುವುದು ಅತಿ ಶ್ರೇಷ್ಠವಾದ ಜಿಹಾದ್ ಆಗಿದೆ. (ಅಬೂದಾವೂದ್, ತಿರ್ಮಿದಿ)

❖ ಪುಣ್ಯಕರ್ಮಗಳಲ್ಲಿ ಯಾವುದನ್ನೂ ನೀನು ನಿರ್ಲಕ್ಷಿಸಬೇಡ; ನಿನ್ನ ಸಹೋದರನನ್ನು ಮುಖ ಪ್ರಸನ್ನತೆಯಿಂದ ಭೇಟಿಯಾಗುವುದಾದರೂ. (ಮುಸ್ಲಿಂ)

---

ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವರ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ* ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು** ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವರನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು." (ಹಖೀಖತುಲ್ ವಹ್ಯ್ 1907 ಪುಟ : 256-257)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು

* ಭಯಂಕರ ಜಲಪ್ರಳಯ

** ಭೀಕರ ಭೂಕಂಪ

# ಇಸ್ಲಾಮ್ ಧರ್ಮ ಪ್ರತಿಪಾದಿಸುವ ಜಿಹಾದ್



(ಜರ್ಮನಿಯಲ್ಲಿ ಸಮಾವೇಶಗೊಂಡ ಅಹ್ಮದಿಯಾ ಸಂಘಟನೆಯ ವಾರ್ಷಿಕ ಸಮ್ಮೇಳನದ ದ್ವಿತೀಯ ದಿವಸ 2008 ಆಗಸ್ಟ್ ತಿಂಗಳ 23ನೇ ದಿನಾಂಕ ಅಹ್ಮದಿಯಾ ಸಂಘಟನೆಯ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ ಅಹ್ಮದಿಯೇತರರಾದ ಅತಿಥಿಗಳನ್ನು ಸಂಬೋಧಿಸಿ ಮಾಡಿದ ಭಾಷಣ)

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಉಚ್ಚರಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಹೀಗೆ ಹೇಳಿದರು:

ನಮ್ಮ ಎಲ್ಲಾ ಪ್ರಿಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನಿಂದ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲೆ ಸುರಿಯಲ್ಪಡಲಿ.

ಜರ್ಮನಿಯ ನಮ್ಮ ಸಂಘಟನೆಯ ಅಮೀರ್ (ಅಧ್ಯಕ್ಷರು) ನನ್ನೊಂದಿಗೆ ಹೇಳಿದರು – ನೀವೆಲ್ಲರೂ ಇಲ್ಲಿ ಒಂದು ಗಂಟೆಯ ಕಾಲದಿಂದ ಕುಳಿತಿರುವಿರಿ ಎಂದು. ನೀವು ಪ್ರಾಯಶಃ ಕುಳಿತು ಬಳಲಿರ ಬಹುದು. ಆದರೆ ನನ್ನೊಂದಿಗೆ ಅಮೀರರು ಆವಶ್ಯಪಟ್ಟಿರುವ ವಿಷಯವು ಸಂಕ್ಷಿಪ್ತವಾಗಿ ವಿವರಿಸಲು ಸಾಧ್ಯವಿಲ್ಲ. ಮೂವತ್ತು ಮೂವತ್ತೈದು ನಿಮಿಷಗಳ ಸಮಯ ಅದನ್ನು ಪ್ರತಿಪಾದಿಸಲು ಆವಶ್ಯಕವಾಗಿದೆ. ಅತಿಥಿಗಳ ಇಂತಹ ಸಮಾವೇಶಗಳನ್ನು ಇದರ ಮೊದಲು ಸಹ ಇಲ್ಲಿ ಜರುಗಿಸಲಾಗಿದ್ದರೂ ಅವುಗಳಲ್ಲಿ ಭಾಗವಹಿಸಲು ನನಗೆ ಸಂದರ್ಭ ದೊರೆತಿರಲಿಲ್ಲ.

ಇಂದು ನಾನು ಪ್ರತಿಪಾದಿಸುವ ವಿಷಯ ಜಿಹಾದ್ ಆಗಿದೆ. ಲೋಕದ ಶ್ರದ್ಧೆಯನ್ನು ಈ ವಿಷಯವು ಆಕರ್ಷಿಸುತ್ತಿದೆ. ಮುಸ್ಲಿಮೇತರ ಲೋಕವು ಜಿಹಾದ್ ಬಗ್ಗೆ ತಪ್ಪುಗ್ರಹಿಕೆ ಹೊಂದಿದ ಕಾರಣ ಇಸ್ಲಾಮ್ ಧರ್ಮವನ್ನು ಉಗ್ರವಾದಿ ಮತ್ತು ಭೀಕರವಾದಿ ಎಂದು ನಂಬುತ್ತಾ ಇದೆ.

ಇಸ್ಲಾಮ್ ಭಯೋತ್ಪಾದನೆ ಮೂಲಕ ವಿಶ್ವದ ಶಾಂತಿಯನ್ನು ಕೆಡಿಸುತ್ತದೆ ಎಂದು ಕೆಲವರು ಘೋಷಿಸುತ್ತಾರೆ. ಇಸ್ಲಾಮ್ ಧರ್ಮದ ಬಗ್ಗೆ ಅಜ್ಞಾನಿಗಳಾದ ಜನರ ಒಂದು ಗುಂಪು ಜಿಹಾದ್ ಬಗ್ಗೆ ತಪ್ಪು ನಿಲುವುಗಳ ಜ್ವಾಲೆಗೆ ಗಾಳಿ ಹಾಕುತ್ತಾ ಇರುವುದು ಅತ್ಯಂತ ದುರದೃಷ್ಟಕರವಾಗಿದೆ. ಮುಸ್ಲಿಮ್ ಉಗ್ರವಾದಿಗಳು, ಭಯೋತ್ಪಾದಕರು ಮತ್ತು ಆತ್ಮಹತ್ಯಾ ಬಾಂಬ್ ದಾಳಿ ನಡೆಸುವವರು ಆತ್ಮಹತ್ಯಾದಾಳಿ ಮೂಲಕ ಸ್ವರ್ಗಕ್ಕೆ ಸಮೀಪದ ದಾರಿ ಕಂಡುಕೊಳ್ಳುವ ನಂಬಿಕೆ ಹೊಂದಿದ್ದಾರೆ ಎಂದು ವಿದ್ಯಾವಂತರಾದ ಕೆಲವು ಮುಸ್ಲಿಮೇತರರು ಪ್ರತಿಪಾದಿಸುತ್ತಾರೆ.

ಸ್ವರ್ಗ ಪ್ರವೇಶ ಮಾಡಬಹುದೆಂಬ ವಿಧಿನಿರ್ಣಯಿತ ವಿಶ್ವಾಸದಲ್ಲಿ ನಂಬುಗೆ ಇರಿಸಿರುವವರು ಜಿಹಾದ್ ಬಗ್ಗೆ ವಿಚಿತ್ರ ನಿಲುವನ್ನು ಹೊಂದಿ ದೇವನಿಗೋಸ್ಕರ ಸಾಯುವ ಕಲ್ಪನೆಯನ್ನು ಅವಲಂಬಿಸಿ ಖಡ್ಗ ಎತ್ತಿಕೊಂಡು ಲೋಕದಲ್ಲಿ ಅಶಾಂತಿಯನ್ನು ಹಬ್ಬಿಸಲು ಕಾರಣೀಭೂತ ರಾಗಿದ್ದಾರೆ. ಇಂದಿನ ಕಾಲದ ಭಯೋತ್ಪಾದಕ ಗುಂಪುಗಳು ಜಿಹಾದ್ ಬಗ್ಗೆ ಅವರಿಗಿರುವ ತಪ್ಪು ನಂಬಿಕೆಗಳ ಉಪಉತ್ಪನ್ನಗಳಾಗಿವೆ.

ಕೆಲವು ಅಜ್ಞಾನಿಗಳಾದ ಮತ್ತು ಅಮಿತೋತ್ಸಾಹಭರಿತ ಮುಸ್ಲಿಮ್ ಗುಂಪುಗಳು ಇಸ್ಲಾಮ್ ಧರ್ಮದ ಬಗ್ಗೆ ಸಂಪೂರ್ಣವಾಗಿ ತಪ್ಪು ಅಭಿಪ್ರಾಯಗಳು ಮುಸ್ಲಿಮೇತರರಲ್ಲಿ ಮೂಡಿಸುವ ಕೃತ್ಯಗಳನ್ನು ಮಾಡಿವೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅದರೊಂದಿಗೆ ಇನ್ನೊಂದು ವಿಷಯವನ್ನು ಸಹ ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇಸ್ಲಾಮಿನ ಬಗ್ಗೆ ಸರಿಯಾಗಿ ಮನವರಿಕೆ ಮಾಡಿಕೊಳ್ಳದೆ ಇಸ್ಲಾಮಿನ ವಿರುದ್ಧ ರಚಿಸಲಾದ ಸಾಹಿತ್ಯಗಳಲ್ಲಿ ಜಿಹಾದ್ ಬಗ್ಗೆ ಇದೇ ರೀತಿಯ ತಪ್ಪು ವಿವರಣೆಯನ್ನು ನೀಡಲಾಗಿದೆ.

ಪವಿತ್ರ ಖುರ್‌ಆನ್, ಹಝ್ರತ್ ಪೈಗಂಬರರ(ಸ) ವಚನಗಳು ಮತ್ತು ನಡೆವಳಿಕೆಗಳು ಹಾಗೂ ಇಸ್ಲಾಮಿನ ಚರಿತ್ರೆಯನ್ನು ಆಧಾರವಾಗಿಟ್ಟು ಕೊಂಡು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರಾದ ಮತ್ತು ವಾಗ್ದತ್ತ ಮಸೀಹರೆಂದು ನಾವು ನಂಬುವ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು(ಅ) ಜಿಹಾದ್ ಬಗ್ಗೆ ಇಸ್ಲಾಮಿನ ನೈಜ ನಿಲುವನ್ನು ಪ್ರತಿಪಾದಿಸಿದ್ದಾರೆ. ಅದರ ಬಗ್ಗೆ ವಿವರಿಸಲು ನಾನು ಬಯಸುತ್ತೇನೆ.

ಮೊದಲನೆಯದಾಗಿ, ನಾನು ಈ ಕಾಲದ ಮಸೀಹರಾಗಿ ಆಗಮಿಸಿದ ಮಹಾನುಭಾವರ ವಚನಗಳ ಮೂಲಕ ನಿಜವಾದ ಜಿಹಾದ್ ಏನೆಂದು ವಿವರಿಸುವೆನು. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ನಿಧನ ಹೊಂದಿ ಒಂದು ನೂರು ವರ್ಷಗಳು ದಾಟಿ ಹೋದುವು. ಆದುದರಿಂದ ಇಂದಿನ ಕಾಲದಲ್ಲಿ ಇಸ್ಲಾಮ್ ಧರ್ಮದ ಬಗ್ಗೆ ಉಂಟುಮಾಡಲಾದ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಲು ಅಹ್ಮದಿಯಾ ಮುಸ್ಲಿಮ್ ಸಂಘಟನೆ ಯಾವುದೋ ಉತ್ತರವನ್ನು ಊಹಿಸಿ ಹೇಳುತ್ತದೆ ಎಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ನಾವು ಪ್ರತಿಪಾದಿಸುವ ತತ್ವಗಳು ಪವಿತ್ರ ಖುರ್‌ಆನ್ ವಿವರಿಸಿರುವ ಪ್ರಕಾರವೇ ಆಗಿವೆ.

ವಾಗ್ದತ್ತ ಮಸೀಹ್ ಹೇಳಿದರು:

"ಇಂದಿನ ಕಾಲದ ಮುಸ್ಲಿಮರು ಅನ್ಯ ಧರ್ಮದ ಜನರನ್ನು ಆಕ್ರಮಣ ಮಾಡುವುದನ್ನು 'ಜಿಹಾದ್' ಎಂದು ಕರೆಯುವುದು ಸರಿಯಲ್ಲ. ಅದು ಧರ್ಮಬದ್ಧವಲ್ಲ. ಅದು ಅಲ್ಲಾಹನ ಆಜ್ಞೆಗಳಿಗೆ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆಜ್ಞೆಗಳಿಗೆ ವಿರುದ್ಧವೂ ಘೋರ ಪಾಪದಾಯಕವೂ ಆಗಿದೆ." (ಬ್ರಿಟಿಷ್ ಸರಕಾರ ಮತ್ತು ಜಿಹಾದ್)

ವಾಗ್ದತ್ತ ಮಸೀಹರು ಪ್ರತಿಪಾದಿಸುವ "ಧರ್ಮಬದ್ಧ ಜಿಹಾದ್" ಎಂದರೇನೆಂದು ಪರಿಶೀಲಿಸೋಣ. ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಪ್ರವಾದಿತ್ವವನ್ನು ಘೋಷಿಸಿ ಜನರನ್ನು ಇಸ್ಲಾಮಿನ ಕಡೆಗೆ ಕರೆದ ಕಾಲದ ಪರಿಸ್ಥಿತಿಯ ಕಡೆಗೆ ಸಂಕ್ಷಿಪ್ತವಾಗಿ ದೃಷ್ಟಿ ಹಾಯಿಸುವುದು ಆವಶ್ಯಕವಾಗಿದೆ. ಆ ಕಾಲದಲ್ಲಿ ಅರಬ್ ದೇಶದ ಜನರು ನಿರಕ್ಷರಿಗಳೂ ಅಪರಿಷ್ಕೃತರೂ ಆಗಿದ್ದರು. ಚಿಕ್ಕ ಪುಟ್ಟ ಕಾರಣಗಳಿಂದ ತಲೆದೋರುವ ಶತ್ರುತ್ವದ ಕಾರಣದಿಂದ ವಿರೋಧಿ ಗೋತ್ರಗಳು ವರ್ಷಗಟ್ಟಲೆ ಕಾಲ ಪರಸ್ಪರ ಕೊಲ್ಲುತ್ತಾ ಇದ್ದುವು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತಾನು ಪ್ರವಾದಿ ಎಂದು

ಘೋಷಿಸಿ ಅರಬ್ ದೇಶದ ಜನರನ್ನು ಏಕದೇವನ ಕಡೆಗೆ ಕರೆದಾಗ ಅವರಲ್ಲಿ ಬುದ್ಧಿಶಾಲಿಗಳಾದ ಅವರ ಸಂಬಂಧಿಕರು, ಬಡವರು ಮತ್ತು ಗುಲಾಮರು ಅವರ ಕರೆಗೆ ಓಗೊಟ್ಟು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು.

ಹಝ್ರತ್ ಪೈಗಂಬರರ(ಸ) ಅನುಯಾಯಿಗಳ ಸಂಖ್ಯೆ ವರ್ಧಿಸುತ್ತಾ ಇದ್ದಾಗ ಮಕ್ಕದ ಜನರು ಅವರ ವಿರುದ್ಧ ನಡೆಸಲಾಗುತ್ತಿದ್ದ ಹಿಂಸಾಚಾರವನ್ನು ವರ್ಧಿಸಿದರು. ಅವರ ಹಿಂಸಾಚಾರ ಎಷ್ಟು ಕಠಿಣವಾಗಿತ್ತೆಂದರೆ ಕೆಲವು ವಿಶ್ವಾಸಿಗಳನ್ನು ಅರಬ್ ದೇಶದ ಬಿಸಿಲಿನಿಂದ ಸುಡುತ್ತಿರುವ ಮರಳಿನ ಮೇಲೆ ಮಲಗಿಸಲಾಗುತ್ತಿತ್ತು. ಬಿಸಿಯಾದ ಕಲ್ಲುಗಳನ್ನು ಅವರ ಎದೆಯ ಮೇಲೆ ಇರಿಸಿ ವಿಶ್ವಾಸಿಗಳಿಗೆ ಹೊಡೆಯಲಾಗುತ್ತಿತ್ತು. ಕೆಲವರ ಒಂದೊಂದು ಕಾಲುಗಳನ್ನು ಒಂದೊಂದು ಒಂಟೆಗಳಿಗೆ ಕಟ್ಟಿ ಒಂಟೆಗಳನ್ನು ವಿರುದ್ಧ ದಿಕ್ಕುಗಳಿಗೆ ಓಡಿಸುವಾಗ ದೇಹಗಳು ಎರಡು ಭಾಗಗಳಾಗಿ ಸೀಳಲ್ಪಡುತ್ತಿದ್ದವು.

ಹಝ್ರತ್ ಪೈಗಂಬರರನ್ನೂ(ಸ) ಅವರ ಶಿಷ್ಯರನ್ನೂ ಒಂದು ಕಣಿವೆ ಪ್ರದೇಶದಲ್ಲಿ ದಿಗ್ಬಂಧನದಲ್ಲಿ ಇರಿಸಿ ಅವರಿಗೆ ಆಹಾರ ಮತ್ತು ನೀರು ಪೂರೈಕೆ ಮಾಡುವುದನ್ನು ತಡೆಗಟ್ಟಲಾಯಿತು. ಹಝ್ರತ್ ಪೈಗಂಬರರ(ಸ) ಶಿಷ್ಯರು ಆಗ ಹೇಳುತ್ತಿದ್ದರು: ನಾವು ಇಂತಹ ಸ್ಥಿತಿಯಲ್ಲಿ ಮೃತರಾಗುವುದು ಸಂಭಾವ್ಯವಾಗಿರುವಾಗ ನಾವೇಕೆ ಶತ್ರುಗಳ ವಿರುದ್ಧ ಹೋರಾಡಿ ಸಾಯಬಾರದು? ಈ ಮುಸ್ಲಿಮರು ಎಂತಹ ಸಮುದಾಯದಿಂದ ಬಂದವರಾಗಿದ್ದರೆಂದರೆ ಅವರು ಅತ್ಯಂತ ಕ್ಷುಲ್ಲಕವಾದ ವಿಷಯದ ಬಗ್ಗೆ ಕೊಲ್ಲಲು ಮತ್ತು ರಕ್ತಪಾತ ಮಾಡಲು ಯಾವಾಗಲೂ ಸನ್ನದ್ಧರಾಗಿರುತ್ತಿದ್ದರು. ಆದರೆ ಯಾರಾದರೊಬ್ಬ ಶಿಷ್ಯ ಹಝ್ರತ್ ಪೈಗಂಬರರೊಂದಿಗೆ, "ಯುದ್ಧ ಮಾಡಲು ನಮಗೆ ಅನುಮತಿ ನೀಡಿರಿ" ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: "ಯುದ್ಧ ಮಾಡಲು ನನಗೆ ಅಲ್ಲಾಹನ ಆಜ್ಞೆ ದೊರೆತಿಲ್ಲ. ನೀವು ಸಹನೆದೋರಿರಿ."

ಹಝ್ರತ್ ಪೈಗಂಬರ್(ಸ) ಮತ್ತು ಶಿಷ್ಯರು ತೋರಿಸಿದ ಸಹನೆ ಅವರ ಬಲಹೀನತೆಯ ಕಾರಣದಿಂದಾಗಿರಲಿಲ್ಲ; ಕೆಲವು ನೂರು ಸತ್ಯ ವಿಶ್ವಾಸಿಗಳು ಸಾವಿರಾರು ಸಂಖ್ಯೆಯ ಶತ್ರು ಸೈನಿಕರನ್ನು ಸೋಲಿಸಿದುದು ಅನಂತರ ಚರಿತ್ರೆಯಿಂದ ಸಾಬೀತಾಗಿದೆ. ಹಝ್ರತ್ ಪೈಗಂಬರರಿಗೆ(ಸ) ಯುದ್ಧ ಮಾಡಲು ಸರ್ವಶಕ್ತನಾದ ಅಲ್ಲಾಹನು ಅನುಮತಿ ನೀಡದುದರಿಂದ ಅವರು ಸಹನೆದೋರಿದರು. ಹಿಂಸಾಚಾರ ವರ್ಧಿಸಿದಾಗ ಹಝ್ರತ್ ಪೈಗಂಬರ್(ಸ) ಶಿಷ್ಯರಿಗೆ ವಿದೇಶಕ್ಕೆ ವಲಸೆ ಹೋಗಲು ಅನುಮತಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಸ್ವತಃ ಮದೀನಕ್ಕೆ ವಲಸೆಹೋದರು. ಅಷ್ಟರೊಳಗೆ ಮದೀನದ ನಿವಾಸಿಗಳಲ್ಲಿ ಕೆಲವರು ಮುಸ್ಲಿಮರಾಗಿದ್ದರು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಆಗಮಿಸಿದ ನಂತರ ಮದೀನದಲ್ಲಿ ಬಹಳ ದೊಡ್ಡ ಸಂಖ್ಯೆಯ ಜನರು ಇಸ್ಲಾಮ್ ಧರ್ಮಾವಲಂಬಿಗಳಾದರು.

ಹಝ್ರತ್ ಪೈಗಂಬರ್(ಸ) ಮದೀನದ ಮುಸ್ಲಿಮೇತರ ನಿವಾಸಿಗಳಾದ ಗೋತ್ರಗಳೊಂದಿಗೂ ಅನ್ಯ ಮತವಿಶ್ವಾಸಿಗಳೊಂದಿಗೂ ಒಡಂಬಡಿಕೆ ಮಾಡಿಕೊಂಡರು. ಅಂತಹ ಜನರಲ್ಲಿ ಯಹೂದಿಯರೂ ಸೇರಿದ್ದರು.

ಈ ಒಡಂಬಡಿಕೆ ಮೂಲಕ ಹಝ್ರತ್ ಪೈಗಂಬರ್(ಸ) ಒಂದು ಸಂವಿಧಾನವನ್ನು ಸ್ಥಾಪಿಸಿದರು. ಎಲ್ಲಾ ಪ್ರಜೆಗಳಿಗೂ ಸಮಾನಾಧಿಕಾರವುಳ್ಳ ಒಂದು ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಯಾರಾದರೂ ಅಪರಾಧ ಮಾಡಿದರೆ ಆ ಅಪರಾಧಿಗೆ ನೀಡಲ್ಪಡುವ ಶಿಕ್ಷೆ ಆತನ ಧರ್ಮ ಅಥವಾ ಧರ್ಮಶಾಸ್ತ್ರ ಪ್ರಕಾರವಾಗಿ ನಿಶ್ಚಯಿಸಲ್ಪಟ್ಟಿತು. ಎಲ್ಲಾ ಪ್ರಜೆಗಳಿಗೂ ಸಮಾನ ನಾಗರಿಕ ಹಕ್ಕುಗಳು ನೀಡಲ್ಪಟ್ಟವು.

ಒಂದು ಸಂದರ್ಭದಲ್ಲಿ ಮದೀನದ ಒಂದು ಯಹೂದಿ ಗೋತ್ರವನ್ನು ಒಡಂಬಡಿಕೆಯ ಉಲ್ಲಂಘನೆಯ ಕಾರಣದಿಂದ ಮದೀನದಿಂದ ಗಡಿಪಾರು ಮಾಡಲಾಯಿತು. ಆಗ ಮದೀನದಲ್ಲಿ ಜಾರಿಯಲ್ಲಿದ್ದ ಸಂಪ್ರದಾಯ ಪ್ರಕಾರ ಮದೀನದ ಮುಸ್ಲಿಮರು ತಾವು ಮುಸ್ಲಿಮರಾಗುವ ಮೊದಲು, ತಮಗೆ ಹುಟ್ಟಲಿರುವ ಮಗುವನ್ನು ಯಹೂದಿಗಳಿಗೆ ಪಾಲನೆ ಪೋಷಣೆಗೆ ವಹಿಸಿಕೊಡಲಾಗುವುದು ಎಂದು ಪ್ರತಿಜ್ಞೆ ಮಾಡಿದ್ದರು. ಅವರ ಪ್ರತಿಜ್ಞೆ ಪ್ರಕಾರ ಆ ಮಕ್ಕಳನ್ನು ಯಹೂದಿಗಳಿಗೆ ಕೊಡಲಾಗಿತ್ತು. ಯಹೂದಿ ಗೋತ್ರವನ್ನು ಗಡಿಪಾರು ಮಾಡುವಾಗ ಹೀಗೆ ವಹಿಸಿಕೊಡಲಾದ ಮಕ್ಕಳು ಸಹ ಅವರ ಜೊತೆಗಿದ್ದರು. ಹೊಸದಾಗಿ ಮುಸ್ಲಿಮರಾದ ಮದೀನದ ನಿವಾಸಿಗಳು ಆ ಮಕ್ಕಳನ್ನು ತಡೆದಿಡಲು ಬಯಸಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಧರ್ಮದ ವಿಷಯದಲ್ಲಿ ಯಾವುದೇ ಬಲಾತ್ಕಾರವಿಲ್ಲ. ನೀವು ಅವರನ್ನು ತಡೆಯಬಾರದು."

ಹಝ್ರತ್ ಪೈಗಂಬರರು(ಸ) ಜನರ ಹಕ್ಕುಗಳನ್ನು ಸಂರಕ್ಷಿಸಿದುದು ಈ ಮೇಲಿನ ರೀತಿಯಲ್ಲಾಗಿತ್ತು. ಹೀಗಿದ್ದರೂ ಹಝ್ರತ್ ಪೈಗಂಬರ್(ಸ) ಭಯೋತ್ಪಾದನೆಗೆ ಚಾಲನೆ ನೀಡಿದರೆಂದು ಆಕ್ಷೇಪಿಸಲಾಗುತ್ತಿದೆ. (ಇಂತಹ ಆಕ್ಷೇಪದಿಂದ ನಮ್ಮನ್ನು ಅಲ್ಲಾಹನು ರಕ್ಷಿಸಲಿ.) ಮುಸ್ಲಿಮರು ನಿಸ್ಸಹಾಯಕ ಸ್ಥಿತಿಯಲ್ಲಿದ್ದರೆಂದೂ ಅವರನ್ನು ಕ್ರೂರವಾಗಿ ಹಿಂಸಾಚಾರಕ್ಕೆ ಗುರಿಪಡಿಸಲಾಗಿತ್ತೆಂದೂ ಮನವರಿಕೆ ಆಗಿರುವಾಗ ಹಝ್ರತ್ ಪೈಗಂಬರರ(ಸ) ವಿರುದ್ಧ ಮತ್ತು ಮುಸ್ಲಿಮರ ವಿರುದ್ಧ ಇಂತಹ ಆಕ್ಷೇಪ ಮಾಡುವುದೇಕೆಂಬುದು ಗಮನಾರ್ಹವಾದ ಪ್ರಶ್ನೆಯಾಗಿದೆ.

ಇಸ್ಲಾಮ್ ಧರ್ಮದ ಆರಂಭಧ ಕಾಲದಲ್ಲಿ ಅರಬ್ ದೇಶದ ಸ್ಥಿತಿಯನ್ನು ನಾನು ಸಂಕ್ಷಿಪ್ತವಾಗಿ ವಿವರಿಸಿರುವೆನು. ಇಂತಹ ಪರಿಸ್ಥಿತಿಯಲ್ಲಿ ಮುಸ್ಲಿಮರು ಮದೀನಕ್ಕೆ ವಲಸೆ ಹೋಗಿ ಅಲ್ಲಿ ಮೊದಲಿಗಿಂತ ಶಾಂತ ಪರಿಸ್ಥಿತಿಯಲ್ಲಿ ಜೀವಿಸಲು ತೊಡಗಿದಾಗ ಮುಸ್ಲಿಮರನ್ನು ಅಲ್ಲಿಯೂ ಬೆನ್ನಟ್ಟಲಾಯಿತು. ಅವರನ್ನು ಆಕ್ರಮಣಕ್ಕೆ ಗುರಿಪಡಿಸಲಾಯಿತು. ಆಗ ನಡೆದ ಪ್ರಥಮ ಯುದ್ಧವನ್ನು ಬದ್ರ್ ಯುದ್ಧವೆಂದು ಕರೆಯಲಾಗುತ್ತದೆ. ಆಗ ಮುಸ್ಲಿಮರ ಕೈಯಲ್ಲಿ ಸಾಕಷ್ಟು ಯುದ್ಧಸಾಮಗ್ರಿಗಳಾಗಲಿ ಸಾಮಾನು ಸರಂಜಾಮುಗಳಾಗಲಿ ಇರಲಿಲ್ಲ. ಆದರೆ ಅವರನ್ನು ಎದುರಿಸಿದುದು ಸಂಪೂರ್ಣವಾಗಿ ಸುಸಜ್ಜಿತವಾದ ಸೈನಿಕವಾಗಿತ್ತು.

ಈ ವಾಸ್ತವಿಕ ಘಟನೆಗಳು ಎಲ್ಲರಿಗೂ ತಿಳಿದಿರುವ ಚಾರಿತ್ರಿಕ ದಾಖಲೆಗಳಾಗಿವೆ. ಕೌಶಲ್ಯರಹಿತರೂ ಅನುಭವ ಹೀನರೂ ಆಗಿದ್ದ ಆ ಸತ್ಯವಿಶ್ವಾಸಿಗಳು ಏನು ತಾನೆ ಮಾಡಲು ಸಾಧ್ಯವಿತ್ತು? ಅವರಲ್ಲಿ ಕೆಲವರು ಇನ್ನೂ ಹದಿಹರೆಯದ ಬಾಲಕರಾಗಿದ್ದರು.

ಶತ್ರುಗಳು ಮುಸ್ಲಿಮರನ್ನು ನಾಶಮಾಡಲು ಬಯಸಿದಾಗ ಸರ್ವಶಕ್ತನಾದ ಅಲ್ಲಾಹನು ಶತ್ರುಗಳ ವಿರುದ್ಧ ಹೋರಾಡಲು ಮುಸ್ಲಿಮರಿಗೆ ಆಜ್ಞಾಪಿಸಿದನು. ನಾನು ಉಲ್ಲೇಖಿಸಲಿರುವ ಪವಿತ್ರ ಖುರ್‌ಆನಿನ ವಚನ ಆ ಸಂದರ್ಭದಲ್ಲಿ ಅವತೀರ್ಣಗೊಂಡಿತು. ಇದು ಯುದ್ಧ ಮಾಡಲು ಅನುಮತಿ ನೀಡಲಾದ ಪ್ರಥಮ ವಚನವೆಂದು ಚರಿತ್ರೆಗಾರರು ಬರೆದಿದ್ದಾರೆ. ನೀವು ಈ ವಚನದ ಸೌಂದರ್ಯ ಮತ್ತು ಯುದ್ಧ ಮಾಡಲು ಏಕೆ ಅನುಮತಿ ನೀಡಲಾಯಿತು ಎಂಬುದರ ಕಡೆಗೆ ಗಮನ ಹರಿಸಲು ನಿಮ್ಮನ್ನು ಆಮಂತ್ರಿಸುತ್ತೇನೆ. ಅಲ್ಲಾಹನು ಹೇಳುತ್ತಾನೆ:

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.**

'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ದೇವನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (ಪವಿತ್ರ ಖುರ್‌ಆನ್ 22:40, 41)

ಈ ವಚನದಲ್ಲಿ ಅಲ್ಲಾಹನು, ಪ್ರತಿರೋಧಕ ಯುದ್ಧಮಾಡಲು ಅನುಮತಿ ನೀಡದಿರುತ್ತಿದ್ದರೆ ಸಮಾಜದ ಶಾಂತಿಯು ಭಂಗವಾಗುತ್ತಿತ್ತು ಎಂದು ಹೇಳುತ್ತಾನೆ. ಇಂದು ಸಹ ವಿವೇಕಿಯಾದ ಯಾವುದೇ ವ್ಯಕ್ತಿ, ಅವನು ಯಾವ ಧರ್ಮಾವಲಂಬಿಯಾದರೂ ಯುದ್ಧ ಮಾಡಲು ಅನುಮತಿಸಲಾದ ಕಾರಣವು ಸಮಂಜಸವೂ ನ್ಯಾಯಬದ್ಧವೂ ಆಗಿದೆ ಎಂದು ಒಪ್ಪಿಕೊಳ್ಳುವನು.

ಮೊದಲನೆಯದಾಗಿ ನೀಡಿದ ಕಾರಣ, ಯಾರಾದರೂ ಆಕ್ರಮಿಸಲ್ಪಟ್ಟರೆ ಅವನಿಗೆ ತನ್ನನ್ನು ರಕ್ಷಿಸಿಕೊಳ್ಳಲು ಹೋರಾಡುವ ಅನುಮತಿ ಇದೆ.

ಎರಡನೆಯದಾಗಿ, ಹಿಂಸಾಚಾರ ಮತ್ತು ಕ್ರೂರತೆಯ ಕಾರಣ ಒಂದು ಸಮುದಾಯದವರು ತಮ್ಮ ಮನೆ ಮಠಗಳನ್ನು ತ್ಯಜಿಸಿಹೋಗಲು ನಿರ್ಬಂಧಿತರಾದರೆ ಅಥವಾ ಅವರನ್ನು ಅನ್ಯಾಯದಿಂದ ತಮ್ಮ ಮನೆಗಳಿಂದ ಹೊರಗಟ್ಟಲಾದರೆ ಮತ್ತು ಅನಂತರ ಸಹ ಅವರನ್ನು ಬೆನ್ನಟ್ಟಿ ಹಿಂಸೆಗೆ ಗುರಿಪಡಿಸುವುದಾದರೆ, ಅಂತಹ ಪರಿಸ್ಥಿತಿಯಲ್ಲಿ ದೌರ್ಜನ್ಯಪೀಡಿತರು ತಮಗೆದುರಾಗಿ ಮಾಡಲಾದ ಹಿಂಸಾಚಾರಕ್ಕೆ ಪ್ರತೀಕಾರ ಮಾಡಲು ಅನುಮತಿಸುವುದು ನ್ಯಾಯೋಚಿತವಾಗಿದೆ.

ಮೂರನೆಯದಾಗಿ, ಯುದ್ಧಕ್ಕೆ ಅನುಮತಿ ನೀಡಲು ಕಾರಣ ವೇನೆಂದರೆ, ದೌರ್ಜನ್ಯಗಾರರು ತಮ್ಮ ಆಕ್ರಮಣವನ್ನು ತಮ್ಮ ಪ್ರಥಮ ಗುರಿಗೆ ಸೀಮಿತಗೊಳಿಸಲಾರರು. ಅವರ ದುರಾಸೆಗಳು ವರ್ಧಿಸುವುವು. ಜನರು ಯಾವ ಧರ್ಮವನ್ನು ಅವಲಂಬಿಸುತ್ತಿದ್ದಾರೆ ಎಂಬುದನ್ನು ನಿರ್ಲಕ್ಷಿಸಿ ಅವರು ಎಲ್ಲರನ್ನೂ ಸ್ವಾಧೀನಕ್ಕೊಳಪಡಿಸಲು ಪಟ್ಟಣಗಳನ್ನೂ ನಗರಗಳನ್ನೂ ದೇಶಗಳನ್ನೂ ಆಕ್ರಮಣ ಮಾಡುವರು. ಆದುದರಿಂದ ಆಕ್ರಮಣಗಾರರನ್ನು ಆರಂಭದಲ್ಲಿಯೇ ತಡೆಯುವುದು ಆವಶ್ಯಕವಾಗಿದೆ. ಆಕ್ರಮಣಗಾರರನ್ನು ಮೊಳಕೆಯಲ್ಲಿಯೇ ಚಿವುಟಿಬಿಡಬೇಕಾಗಿದೆ.

ಯುದ್ಧ ಮಾಡಲು ಈ ಅನುಮತಿ ನೀಡಿದುದು ಪ್ರತಿರೋಧಕ್ಕಾಗಿ ಮತ್ತು ಸಾಮಾಜಿಕ ಶಾಂತಿಯನ್ನು ಸ್ಥಾಪಿಸಲಿಕ್ಕಾಗಿತ್ತು.

ಯಾರ ವಿರುದ್ಧ ಯುದ್ಧ ಹೂಡಲಾಗುತ್ತಿದೆಯೋ ಅವರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗ ದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ."** (2:191)

ಈ ವಚನದಲ್ಲಿ ಹೀಗೆ ಹೇಳಲಾಗಿದೆ: ಧರ್ಮಕ್ಕೆ ಸಂಬಂಧಿಸಿ ಯುದ್ಧಮಾಡಿ ಖಡ್ಗ ಪ್ರಯೋಗಿಸಿ ಧರ್ಮತ್ಯಾಗ ಮಾಡಲು ಮಕ್ಕದ ಅವಿಶ್ವಾಸಿಗಳು ಸತ್ಯವಿಶ್ವಾಸಿಗಳನ್ನು ಬಲಾತ್ಕಾರ ಮಾಡಲು ಪ್ರಯತ್ನಿಸಿದ ಹಾಗೆ ಶತ್ರುಗಳು ಪ್ರಯತ್ನಿಸುವಾಗ ಅಂತಹ ಜನರ ವಿರುದ್ಧ ಮಾತ್ರ ಯುದ್ಧ ಮಾಡಲು ಎಂದರೆ ಜಿಹಾದ್ ಮಾಡಲು ಅನುಮತಿ ನೀಡಲಾಗಿದೆ.

ಇಸ್ಲಾಮ್ ಧರ್ಮವು ಸ್ವರ್ಗದ ಬಗ್ಗೆ ನೀಡಿರುವ ವಿವರಣೆಯು ಮುಸ್ಲಿಮರನ್ನು ಮುಸ್ಲಿಮೇತರರ ವಿರುದ್ಧ ದ್ವೇಷಭರಿತರನ್ನಾಗಿಯೂ ದೌರ್ಜನ್ಯಗಾರರನ್ನಾಗಿಯೂ ಮಾಡಿ ಅವರನ್ನು ಜಿಹಾದ್ ಮಾಡಲು ಉತ್ತೇಜಿಸಿದೆ ಎಂದು ಮಾಡಲಾಗುವ ಆಕ್ಷೇಪವು ಸಹ ಅನ್ಯಾಯಕರ ವಾಗಿದೆ.

ನಾನು ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನದಲ್ಲಿ ಸರ್ವ ಶಕ್ತನಾದ ಅಲ್ಲಾಹನು ಅತಿಕ್ರಮಣ ಮಾಡುವವರನ್ನು ಪ್ರೀತಿಸುವುದಿಲ್ಲ ಎಂದು ಹೇಳಿದ್ದಾನೆ. ಒಬ್ಬನನ್ನು ಅಲ್ಲಾಹನು ಇಷ್ಟಪಡುವುದಿಲ್ಲವಾದರೆ ಅಂತಹ ವ್ಯಕ್ತಿ ಸ್ವರ್ಗವನ್ನು ಪ್ರವೇಶಿಸುವ ಪ್ರಶ್ನೆಯೇ ಉದಿಸಲಾರದು. ಆಗ ಉದ್ಭವಿಸುವ ಪ್ರಶ್ನೆ ಅತಿಕ್ರಮಣಗಾರರೊಂದಿಗೆ ವರ್ತಿಸುವ ಮಾನದಂಡವೇನು? ಎಂದಾಗಿದೆ.

ಇಸ್ಲಾಮಿನಲ್ಲಿ ಇರುವ ಅದ್ವಿತೀಯವಾದ ಒಂದು ಉಪದೇಶ ಹೀಗಿದೆ: ಒಬ್ಬ ಮನುಷ್ಯನು ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವನ್ನು ನಂಬಿ ಅವನ ಬಗ್ಗೆ ಹೃದಯದಲ್ಲಿ ಭಯಭಕ್ತಿಹೊಂದುವ ತನಕ ಆಧ್ಯಾತ್ಮಿಕ ಉನ್ನತಸ್ಥಾನವನ್ನು ಗಳಿಸಲಾರನು. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**"ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವ ರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವ ಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯವಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲಾ ಬಲ್ಲವನಾಗಿದ್ದಾನೆ."** (5:9)

ಈ ವಚನ ಹೇಳುವುದೇನೆಂದರೆ, ನೀವು ಸತ್ಯವಿಶ್ವಾಸಿಗಳಾಗಿದ್ದರೆ ನೀವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾಗಿರಿ. ನೀವು ನ್ಯಾಯಪಾಲನೆ ಮಾಡುವವರೂ ಅದರಲ್ಲಿ ಸ್ಥಿರವಾಗಿರುವವರೂ ಆಗಿರಿ. ನ್ಯಾಯಪಾಲನೆಗೆ ಆವಶ್ಯಕತೆಗಳೇನು? ನೀವು ನಿಮ್ಮ ಕೃತ್ಯಗಳನ್ನು ಇಸ್ಲಾಮಿನ ಆಜ್ಞೆಗಳಿಗನುಸಾರವಾಗಿ ಅನುಷ್ಠಿಸಬೇಕು. ನೀವು ಅನ್ಯರಿಗೆ ಮಾದರಿಯಾಗಬೇಕು.

ಒಬ್ಬ ಭಯೋತ್ಪಾದಕ ಅನ್ಯರಿಗೆ ಮಾದರಿಯಾಗಲು ಸಾಧ್ಯವೇ? ಈ ಕಾಲದಲ್ಲಿ ಮುಸ್ಲಿಮೇತರರು ಮಾತ್ರವಲ್ಲ, ಮುಸ್ಲಿಮರಲ್ಲಿ ಬಹುತೇಕ ಜನರು ಭಯೋತ್ಪಾದಕರನ್ನೂ ಆತ್ಮಹತ್ಯಾ ಬಾಂಬರ್‌ಗಳನ್ನೂ ಇಷ್ಟಪಡುವುದಿಲ್ಲ. ಆದುದರಿಂದ ಒಳ್ಳೆಯ ಕೆಲಸಗಳು ಮಾತ್ರ ಅನ್ಯರನ್ನು ಆಕರ್ಷಿಸುವುದೇ ಹೊರತು ಕೆಟ್ಟ ಕೆಲಸಗಳಲ್ಲ.

ಮುಸ್ಲಿಮರು ಮಾಡಬೇಕೆಂದು ಆಜ್ಞಾಪಿಸಲ್ಪಟ್ಟ ಒಳ್ಳೆಯ ಕೆಲಸಗಳ ಪೈಕಿ ಒಂದು ಒಳ್ಳೆಯ ಕೆಲಸದ ಬಗ್ಗೆ ಈ ವಚನದಲ್ಲಿ ಉಪದೇಶಿಸಲಾಗಿದೆ. ನಮ್ಮ ಶತ್ರುಗಳೊಂದಿಗೆ ಸಹ ನ್ಯಾಯೋಚಿತವಾಗಿ ವರ್ತಿಸುವ ಬಗ್ಗೆ ಆದೇಶಿಸಲಾಗಿದೆ.

ಹಝ್ರತ್ ಪೈಗಂಬರರು[ಸ] ಮದೀನಕ್ಕೆ ವಲಸೆ ಹೋಗುವ ಮೊದಲು ಸತ್ಯವಿಶ್ವಾಸಿಗಳ ಸ್ಥಿತಿ ಮತ್ತು ಅನಂತರ ಅವರ ಸ್ಥಿತಿಯ ಬಗ್ಗೆ ನಾನು ಸಂಕ್ಷಿಪ್ತವಾಗಿ ವಿವರಿಸಿದೆನು. ಇಂತಹ ಪರಿಸ್ಥಿತಿಯಲ್ಲಿ ಸತ್ಯವಿಶ್ವಾಸಿಗಳಿಗೆ ನೀಡಲಾದ ಆಜ್ಞೆಯನ್ನು ಪರಿಶೀಲಿಸಿರಿ. ಒಂದು ಜನಾಂಗದ ಶತ್ರುತ್ವವು ಅವರ ವಿರುದ್ಧ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸಬಾರದು ಎಂದು ಆಜ್ಞಾಪಿಸಲಾಗಿದೆ. ಇದರಿಂದ

ತಿಳಿಯುವುದೇನೆಂದರೆ ಇಸ್ಲಾಮಿನ ತತ್ವಗಳು ನ್ಯಾಯವನ್ನು ಸ್ಥಾಪಿಸಲಿಕ್ಕಾಗಿವೆ.

ಯುದ್ಧಗಳು ನಡೆಯುವುದಾದರೆ ಅವುಗಳನ್ನು ನ್ಯಾಯಬದ್ಧವಾಗಿ ನಡೆಸಬೇಕು. ಉದಾಹರಣೆಗೆ, ಯುದ್ಧದಲ್ಲಿ ವಿರೋಧಿ ಸೈನಿಕರನ್ನು ಸೆರೆಹಿಡಿಯುವುದಾದರೆ ಅವರೊಂದಿಗೆ ದಯೆಯಿಂದ ವರ್ತಿಸಬೇಕು. ಶತ್ರುಗಳು ಆಯುಧಗಳನ್ನು ಕೆಳಗಿಟ್ಟು ಸೋಲನ್ನು ಒಪ್ಪಿಕೊಳ್ಳುವುದಾದರೆ ನ್ಯಾಯ ಆವಶ್ಯಪಡುವುದೇನೆಂದರೆ ಕೂಡಲೇ ಯುದ್ಧವನ್ನು ನಿಲ್ಲಿಸಬೇಕು.

ಇದಕ್ಕೆ ವಿರುದ್ಧವಾಗಿ ಇಂದಿನ ನಾಗರಿಕ ಕಾಲಘಟ್ಟದಲ್ಲಿ ನಾವು ಹೀಗೆ ಕಾಣುತ್ತೇವೆ: ಎರಡು ಹೋರಾಡುವ ಪಕ್ಷಗಳು ಹೋರಾಟ ನಿಲ್ಲಿಸಲು ಭೇಟಿಯಾಗುವುದಾದರೆ, ಕೊನೆಯ ಘಟ್ಟದಲ್ಲಿ ಬಲಿಷ್ಠ ಪಕ್ಷವು ನಿರಂತರ ಬಾಂಬ್ ದಾಳಿಯ ಮೂಲಕ ವಿರೋಧ ಪಕ್ಷದ ಹೃದಯದಲ್ಲಿ ಭೀತಿ ಉಂಟುಮಾಡಿ ಬಲಹೀನ ಪಕ್ಷಕ್ಕೆ ಸೇರಿದವರು ಬಲಿಷ್ಠ ಪಕ್ಷದ ಎಲ್ಲಾ ನಿಬಂಧನೆಗಳಿಗೆ ಒಪ್ಪಿಗೆ ನೀಡುವಂತೆ ಮಾಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಹೀಗೆ ಮಾರ್ಗದರ್ಶನ ನೀಡಿದ್ದಾನೆ:

**"ಅವರು ಶಾಂತಿಯೆಡೆಗೆ ವಾಲಿದರೆ ನೀನು ಸಹ ಅದಕ್ಕೆ ಒಪ್ಪು. ಅಲ್ಲಾಹನ ಮೇಲೆ ಭರವಸೆಯನ್ನಿಡು. ಖಂಡಿತವಾಗಿಯೂ ಅವನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ."**

(ಪವಿತ್ರ ಖುರ್‌ಆನ್ 8:62)

ಇಸ್ಲಾಮಿನ ಉಪದೇಶವೇನೆಂದರೆ ಶತ್ರು ಪಕ್ಷವು ಶಾಂತಿಯನ್ನು ಬಯಸುವುದಾದರೆ ನೀವು ಸಹ ಅದರ ಕಡೆಗೆ ವಾಲಬೇಕು.

ಈ ವಚನದಲ್ಲಿ ಅಲ್ಲಾಹನ ಮೇಲೆ ಭರವಸೆ ಇಡಲು ಹೇಳಲಾಗಿದೆ. ಶತ್ರುವು ಶಾಂತಿ ಸಂಧಾನವನ್ನು ಬಯಸುವುದು ತನ್ನ ಶಕ್ತಿಯನ್ನು ವರ್ಧಿಸಲಿಕ್ಕೂ ಆಗಿರಬಹುದು. ಅವನಿಗೆ ಒಳ್ಳೆಯ ಉದ್ದೇಶವಿಲ್ಲದಿರಲೂ ಸಾಧ್ಯವಿದೆ. ಹೀಗಿದ್ದರೂ ಸತ್ಯವಿಶ್ವಾಸಿಗಳು ಶಾಂತಿ ಸ್ಥಾಪನೆ ಕಡೆಗೆ ಕೈಚಾಚಬೇಕು ಮತ್ತು ಅಲ್ಲಾಹನ ಮೇಲೆ ಭರವಸೆ ಇಟ್ಟುಕೊಂಡು ಕೂಡಲೇ ಯುದ್ಧವನ್ನು ನಿಲ್ಲಿಸಬೇಕು. ಸತ್ಯವಿಶ್ವಾಸಿಗಳು ಸೈನಿಕ ತಂತ್ರಗಾರಿಕೆಗೆ ಆದ್ಯತೆ ನೀಡಬಾರದು.

ಇದೇ ಕಾರಣದಿಂದ ಹುದೈಬಿಯಾ ಸಂಧಿಗೆ ಸಹಿ ಹಾಕಲಾಯಿತು. ಮುಸ್ಲಿಮರು ಹಝ್ರತ್ ಪೈಗಂಬರರ(ಸ) ನೇತೃತ್ವದಲ್ಲಿ ಹಜ್ಜ್‌ಮಾಡಲು ಹೊರಟಿದ್ದರು. ಆಗ ಮಕ್ಕದ ಜನರು ಅವರನ್ನು ತಡೆಗಟ್ಟಿ ಒಂದು ಒಪ್ಪಂದ ಮಾಡಿಕೊಂಡರು. ಆ ಸಮಯದಲ್ಲಿ ಮುಸ್ಲಿಮರು ಬಲಶಾಲಿಗಳಾಗಿದ್ದರೂ ಶಿಷ್ಯರು ಹಜ್ಜ್‌ಮಾಡಲು ಆಗ್ರಹಪಡಿಸುತ್ತಾ ಇದ್ದರೂ ಹಝ್ರತ್ ಪೈಗಂಬರರು(ಸ) ಮಕ್ಕದ ಜನರ ನಿಬಂಧನೆಗಳನ್ನು ಒಪ್ಪಿಕೊಂಡರು. ಮಕ್ಕ ನಗರವನ್ನು ಅನಂತರ ಹಝ್ರತ್ ಪೈಗಂಬರರು ವಶಪಡಿಸಿಕೊಂಡದ್ದು ಈ ಒಪ್ಪಂದವನ್ನು ಮಕ್ಕದ ಜನರು ಭಂಗಪಡಿಸಿದ ಕಾರಣದಿಂದಾಗಿತ್ತು. ಮಕ್ಕವನ್ನು ವಶಪಡಿಸಿಕೊಂಡ ನಂತರ ಮುಸ್ಲಿಮರು ಗೆದ್ದವರಾಗಿದ್ದರೂ ಅವರ ವಿರುದ್ಧ ಆಯುಧವೆತ್ತದ ಜನರನ್ನು ಅವಿಶ್ವಾಸಿಯಾಗಿಯೇ ಶಾಂತಿಯಿಂದ ಜೀವಿಸಲು ಅನುಮತಿಸಲಾಯಿತು. ಅತ್ಯಂತ ಕಠಿಣ ಶತ್ರುಗಳನ್ನೂ ಕ್ಷಮಿಸಲಾಯಿತು. ಇವುಗಳೆಲ್ಲಾ ಬಚ್ಚಿಡಲಾದ ಘಟನೆಗಳಲ್ಲ. ಚರಿತ್ರೆಯು ಈ ಬಗ್ಗೆ ಸಾಕ್ಷ್ಯ ನೀಡಿದೆ. ಅನೇಕ ಪಾಶ್ಚಿಮಾತ್ಯ ಓರಿಯಂಟಲಿಸ್ಟರು ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ.

ವಾಸ್ತವಿಕ ವಿಷಯ ಹೀಗಿದ್ದರೂ ದುಃಖಕರವಾದ ಸಂಗತಿ ಏನೆಂದರೆ, ಕೆಲವು ಪಾಶ್ಚಿಮಾತ್ಯ ಸಂಪರ್ಕ ಮಾಧ್ಯಮಗಳು ಮತ್ತು ರಾಜಕಾರಣಿಗಳು ಇಸ್ಲಾಮ್, ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರನ್ನು ತಮ್ಮ ಆಕ್ಷೇಪಗಳಿಗೆ ಗುರಿಪಡಿಸುತ್ತಾ ಇದ್ದಾರೆ. ಕೆಲವು ಪತ್ರಿಕೆಗಳಲ್ಲಿ ಹಝ್ರತ್ ಪೈಗಂಬರರನ್ನು(ಸ) ನಿಂದಿಸುವ ಕಾರ್ಟೂನುಗಳನ್ನು ಪ್ರಕಟಿಸಲಾಗಿದೆ. ಹಾಲೆಂಡಿನ ಒಬ್ಬ ಪಾರ್ಲಿಮೆಂಟ್ ಸದಸ್ಯ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರನ್ನು ನಿಂದಿಸುವ ಚಲನಚಿತ್ರ ನಿರ್ಮಿಸಿರುವರಲ್ಲದೆ ಹೇಳಿಕೆಗಳನ್ನೂ ನೀಡಿರುತ್ತಾನೆ.

ಮುಸ್ಲಿಮರು ಯಾವುದೇ ಧಾರ್ಮಿಕ ಗ್ರಂಥದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರವಾದಿಯನ್ನು ಸತ್ಯ ಪ್ರವಾದಿ ಎಂದು ನಂಬುತ್ತಾರೆ. ಆದುದರಿಂದ ಯಾವುದೇ ಮುಸ್ಲಿಮ್ ಮತ್ತು ವಿಶಿಷ್ಟವಾಗಿ ಈ ಕಾಲಘಟ್ಟದ ವಾಗ್ದತ್ತ ಮಸೀಹರನ್ನು ನಂಬುವ ಅಹ್ಮದೀ ಮುಸ್ಲಿಮ್ ಯಾವುದೇ ಪ್ರವಾದಿಯನ್ನು ನಿಂದಿಸಲು ಮತ್ತು ಅಪಮಾನಿಸಲು ಮುಂದಾಗಲಾರ. ಪವಿತ್ರ ಖುರ್‌ಆನ್‌ನಲ್ಲಿ ಎಲ್ಲಾ ಪ್ರವಾದಿಗಳು ಸಮಾನರಾಗಿದ್ದಾರೆ ಎಂದು ಹೇಳಲಾಗಿದೆ. ಅಲ್ಲಾಹನು ಹೇಳಿದ್ದಾನೆ: **"ನಾನು ಎಲ್ಲಾ ಜನಾಂಗಗಳಿಗೆ ಪ್ರವಾದಿಗಳನ್ನು ಕಳುಹಿಸಿದ್ದೇನೆ."**

ಆದುದರಿಂದ ಯಾವುದೇ ಜನಾಂಗವು ತನಗೊಬ್ಬ ಪ್ರವಾದಿ ಆಗಮಿಸಿದ್ದಾರೆಂದು ಹೇಳುವುದಾದರೆ, ನಾವು ನಿಸ್ಸಂಕೋಚವಾಗಿ ಅಂಗೀಕರಿಸುತ್ತೇವೆ. ನಮ್ಮ ಅಭಿಪ್ರಾಯ ಪ್ರಕಾರ, ಲೋಕದಲ್ಲಿ ಶಾಂತಿ ಸ್ಥಾಪಿತವಾಗಲು ಇರುವ ಏಕಮಾತ್ರ ದಾರಿ ಇದಾಗಿದೆ. ಎಲ್ಲಾ ಜನಾಂಗಗಳ ಭಾವನೆಗಳನ್ನೂ ಸಂವೇದನೆಗಳನ್ನೂ ನಾವು ಗೌರವಿಸಬೇಕಾಗಿದೆ.

ಯಾವ ಸಂದರ್ಭದಲ್ಲಿ ಯಾವ ಪರಿಸ್ಥಿತಿಗೆ ಅನುಸಾರವಾಗಿ ಯುದ್ಧ ಮಾಡುವುದು ಅನುಮತಿಸಲಾಯಿತೆಂದು ನಾನು ಇಷ್ಟರಲ್ಲಿಯೇ ವಿವರಿಸಿದ್ದೇನೆ. ಈಗ ಇರುವ ಪ್ರಶ್ನೆ ಏನೆಂದರೆ, ಇಂದಿನ ಕಾಲದಲ್ಲಿ ಅಂತಹ ಧಾರ್ಮಿಕ ಯುದ್ಧಗಳನ್ನು ಅನುಮತಿಸಲಾಗಿದೆಯೋ? ಅನುಮತಿಸಲಾಗಿಲ್ಲವಾದರೆ 'ಜಿಹಾದ್' ಸೂಚಿಸುವುದು ಏನನ್ನು? ಅಹ್ಮದೀ ಮುಸ್ಲಿಮರು ಜಿಹಾದ್‌ಗೆ ನೀಡುವ ವ್ಯಾಖ್ಯಾನವೇನು?

ಈ ಪ್ರಶ್ನೆಗಳಿಗೆ ಉತ್ತರ ನೀಡುವ ಮೊದಲು ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ: ಇತ್ತೀಚೆಗಿನ ಕೆಲವು ಶತಮಾನಗಳಲ್ಲಿ ನಡೆಸಲಾದ ಯುದ್ಧಗಳು ರಾಜಕೀಯ ಕಾರಣದಿಂದಲೂ ಭೌಗೋಳಿಕ ಕಾರಣದಿಂದಲೂ ನಡೆಸಲ್ಪಟ್ಟವುಗಳಾಗಿದ್ದವು. ಧಾರ್ಮಿಕ ಕಾರಣಗಳಿಂದ ಬಹಳ ಅಪೂರ್ವವಾಗಿ ಯುದ್ಧಗಳನ್ನು ನಡೆಸಲಾಗಿದೆ. ಕಳೆದ ಇಪ್ಪತ್ತನೆಯ ಶತಮಾನದಲ್ಲಿ ನಡೆದ ಎರಡು ಲೋಕ ಮಹಾಯುದ್ಧಗಳಲ್ಲಿ ಮುಸ್ಲಿಮರು ಪ್ರಮುಖ ಪಾತ್ರವನ್ನು ವಹಿಸಿರಲಿಲ್ಲ. ಅವುಗಳು ರಾಜಕೀಯ ಹಿತಾಸಕ್ತಿಗಳಿಗೋಸ್ಕರ ನಡೆಸಲಾದ ಯುದ್ಧಗಳಾಗಿದ್ದುವು.

ಇಸ್ಲಾಮನ್ನು ಭಯೋತ್ಪಾದಕ ಧರ್ಮವೆಂದು ಆಕ್ಷೇಪಿಸುವವರು ಕಳೆದ ಶತಮಾನದಲ್ಲಿ ನಡೆಸಲಾದ ಎರಡು ಲೋಕ ಮಹಾಯುದ್ಧಗಳ ಕಾರಣಗಳನ್ನು ಪರಿಶೀಲಿಸಬೇಕಾದುದು ನ್ಯಾಯಬದ್ಧ ತುಲನಾತ್ಮಕ ಪರಿಶೀಲನೆಗೆ ಆವಶ್ಯಕವಾಗಿದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಜಿಹಾದ್ ಎಂದರೇನೆಂದು ಮತ್ತು ಇಂದಿನ ಕಾಲಘಟ್ಟದಲ್ಲಿ ಜಿಹಾದ್ ಮಾಡುವ ಬಗೆ ಹೇಗೆಂದು ವಿವರಿಸಿರುವರು. ಅದನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸುವೆನು.

ಇಂದಿನ ಪ್ರಗತಿಹೊಂದಿದ ವಿಶ್ವದಲ್ಲಿ ಪ್ರತಿಯೊಬ್ಬನು ಅವನಿಷ್ಟಪಡುವ ಧರ್ಮವನ್ನು ನಂಬುವ, ಅನುಷ್ಠಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಹೊಂದಿಕೊಂಡಿರುತ್ತಾನೆ. ಹೀಗಿರುವಾಗ ನಾನು ಇದರ ಮೊದಲು ವಿವರಿಸಿದಂತೆ [redacted] ಯುದ್ಧ ಮಾಡುವ ಪರಿಸ್ಥಿತಿ ಈಗ ಇರುವುದಿಲ್ಲ. ಹೀಗಿರುವಾಗ ಜಿಹಾದ್ ಬಗ್ಗೆ ಇರುವ ಬೊಬ್ಬೆಗೆ ಕಾರಣವೇನು?

ಇಂದಿನ ಕಾಲಘಟ್ಟಕ್ಕೆ ಹೊಂದಿಕೆಯಾಗುವ ಯಾವ ಜಿಹಾದಿನ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಂಬಿಕೆ ಹೊಂದಿದೆಯೋ ಅದರ ಬಗ್ಗೆ ವಿವರಿಸಲು ನಾನು ಬಯಸುತ್ತೇನೆ. ಒಂದು ನೂರು ವರ್ಷಗಳ ಹಿಂದೆ ಜಿಹಾದ್ ಬಗ್ಗೆ ಮಾಡಿದ ಆಕ್ಷೇಪಕ್ಕೆ ಉತ್ತರವಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿದರು:

"ಇಸ್ಲಾಮ್ ಪ್ರತಿಪಾದಿಸುವ ಜಿಹಾದ್ ಬಗ್ಗೆ ವಿಮರ್ಶಕನು, ಪವಿತ್ರ ಖುರ್‌ಆನ್ ಯಾವುದೇ ನಿಬಂಧನೆಗಳಿಗೆ ಒಳಗಾಗದೆ ಜಿಹಾದ್ ಮಾಡಲು ಉತ್ತೇಜಿಸುತ್ತದೆಂದು ಭಾವಿಸುತ್ತಾನೆ. ಇದಕ್ಕಿಂತ ದೊಡ್ಡ ತಪ್ಪು ದೋಷಾರೋಪ ಬೇರೆ ಇಲ್ಲ. ದೇವನನ್ನು ನಂಬಿ ಅವನ ಧರ್ಮದಲ್ಲಿ ಪ್ರವೇಶಿಸಿ ಅವನ ಆಜ್ಞೆಗಳನ್ನು ಪಾಲಿಸಿ ಅವನನ್ನು ಆರಾಧಿಸುವುದನ್ನು ತಡೆಯುವವರ ವಿರುದ್ಧ ಮಾತ್ರ ಯುದ್ಧ ಮಾಡಲು ಅನುಮತಿ ನೀಡಲಾಗಿದೆ. ಮುಸ್ಲಿಮರ ವಿರುದ್ಧ ವಿನಾಕಾರಣ ಯುದ್ಧ ಹೂಡುವವರೊಡನೆ, ಮುಸ್ಲಿಮರನ್ನು ತಮ್ಮ ಮನೆಗಳಿಂದ ಮತ್ತು ನಾಡಿನಿಂದ ಹೊರಗೆ ದಬ್ಬಿದವರ ವಿರುದ್ಧ, ಮುಸ್ಲಿಮರ ಧರ್ಮ ಪರಿವರ್ತನೆ ಮಾಡಿಸಿ ಇಸ್ಲಾಮಿನ ನಾಶಕ್ಕೆ ಪ್ರಯತ್ನಿಸುವವರ ವಿರುದ್ಧ ಮತ್ತು ಮುಸ್ಲಿಮರಾಗುವುದನ್ನು ತಡೆಯುವವರ ವಿರುದ್ಧ ಮಾತ್ರ ಯುದ್ಧ ಮಾಡುವುದನ್ನು ಅನುಮತಿಸಲಾಗಿದೆ."

(ನೂರುಲ್ ಹಖ್: ಭಾಗ 1 – ರೂಹಾನಿ ಖಝಾಯಿನ್ ಸಂಪುಟ 8, ಪುಟ 62)

ಅವಿಭಜಿತ ಭಾರತದಲ್ಲಿ ಬ್ರಿಟಿಷ್ ಸರಕಾರದ ಬಗ್ಗೆ ವಾಗ್ದತ್ತ ಮಸೀಹ್[ಅ] ಹೀಗೆ ಹೇಳುತ್ತಾರೆ:

"ಈ ಸರಕಾರವು ಇಸ್ಲಾಮ್ ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅದು ಧಾರ್ಮಿಕ ಆಚಾರಗಳಲ್ಲಿ ಸಹ ಹಸ್ತಕ್ಷೇಪ ಮಾಡುವುದಿಲ್ಲ. ಅದು ತನ್ನ ಧರ್ಮ ಪ್ರಚಾರಕ್ಕಾಗಿ ಖಡ್ಗವನ್ನು ಬಳಸುವುದಿಲ್ಲ. ಇಂತಹ ಸರಕಾರ ಯಾವುದೇ ಧಾರ್ಮಿಕ ಯುದ್ಧವನ್ನು ಮಾಡದ ಕಾರಣ ಇಂತಹ ಸರಕಾರದ ವಿರುದ್ಧ ಯುದ್ಧ ಮಾಡುವುದು ಪವಿತ್ರ ಖುರ್‌ಆನ್ ಪ್ರಕಾರ ನಿಷಿದ್ಧವಾಗಿದೆ."

(ಕಿಶ್ತಿ ನೂಹ್ – ರೂಹಾನಿ ಖಝಾಯಿನ್ ಸಂಪುಟ 19, ಪುಟ 75)

ಅಹ್ಮದಿಯಾ ಜಮಾಅತಿನ ಸ್ಥಾಪಕರು ಬೇರೆ ಒಂದು ಕಡೆ ಹೀಗೆ ಹೇಳುತ್ತಾರೆ:

"ಕೆಲವು ಅನಾಗರಿಕ ಅಪರಿಷ್ಕೃತ ಮುಸ್ಲಿಮರು ಕ್ರೂರ ರಕ್ತಪಾತವನ್ನು ಜಿಹಾದ್ ಎಂದು ಹೆಸರಿಸುತ್ತಾರೆ. ನ್ಯಾಯನಿಷ್ಠ ದೊರೆಯನ್ನು ಎದುರಿಸುವುದು ವಿದ್ರೋಹವಾಗಿದೆ; ಅದು ಜಿಹಾದ್ ಅಲ್ಲ ಎಂದು ಅವರಿಗೆ ತಿಳಿದಿಲ್ಲ. ವಾಗ್ದಾನಕ್ಕೆ ಭಂಗ ಉಂಟು ಮಾಡುವವನು, ಒಳಿತನ್ನು ಮಾಡುವುದಕ್ಕೆ ಬದಲಾಗಿ ಕೆಡುಕನ್ನು ಮಾಡುವವನು, ನಿರಪರಾಧಿಗಳನ್ನು ಶಿಕ್ಷಿಸುವವನು ನಿರಂಕುಶ ಕ್ರೂರಿಯೇ ಹೊರತು ಜಯಶಾಲಿ ಸೇನಾಧಿಪತಿ ಅಲ್ಲ."

(ತುಹ್‌ಫಯೇ ಖೈಸರಿಯ್ಯ – ರೂಹಾನಿ ಖಝಾಯಿನ್ ಸಂಪುಟ 12, ಪುಟ 280)

ಇದು ಇಂದಿನ ಕಾಲಘಟ್ಟದಲ್ಲಿ ಆಗಮಿಸಿದ ವಾಗ್ದತ್ತ ಮಸೀಹರು ವಿವರಿಸಿದ ನೈಜ ಇಸ್ಲಾಮಿಕ ತತ್ವವಾಗಿದೆ. ಅವರು ಲೋಕದಲ್ಲಿ ಭದ್ರ ಬುನಾದಿಯ ಮೇಲೆ ಶಾಂತಿಯನ್ನು ಸ್ಥಾಪಿಸಲು, ಲೋಕದಲ್ಲಿ ಪ್ರೀತಿ ಮತ್ತು ವಾತ್ಸಲ್ಯದ ವಾತಾವರಣವನ್ನು ಹಬ್ಬಿಸಲು ಆಗಮಿಸಿದರು.

ಇಂದು 'ಜಿಹಾದಿ'ಗಳೆಂದು ಕರೆಯಲ್ಪಡುವ ಆತ್ಮಹತ್ಯಾ ದಾಳಿಕೋರರು ಶತ್ರು ಸೈನಿಕರನ್ನು ಮಾತ್ರವಲ್ಲ, ಮುಸ್ಲಿಮರನ್ನು ಸಹ ಕೊಲ್ಲುತ್ತಿದ್ದಾರೆ. ಇದು ತಪ್ಪು ಕೆಲಸವಾಗಿದೆ. ಶಾಂತಿ ಸ್ಥಾಪನೆ ಮಾಡುವುದು ಸರಕಾರಗಳ ಕರ್ತವ್ಯವಾಗಿದೆ. ಸೈನಿಕನಲ್ಲದ ಒಬ್ಬನು ಮಾಡುವ ಕೆಲಸ ಜಿಹಾದ್ ಆಗಲಾರದು. ಅದು ವಿದ್ರೋಹವಾಗಿದೆ.

ನಾನು ಕೇಳಿದ ಪ್ರಶ್ನೆ ಜಿಹಾದ್ ಎಂದರೇನು? ಅದರ ಉತ್ತರವೇನೆಂದರೆ, ಈ ಕಾಲದಲ್ಲಿ ಅಹ್ಮದಿಯಾ ಮುಸ್ಲಿಂ ಸಂಘಟನೆ ಅಂಗೀಕರಿಸುವ ಅರ್ಥ ಆತ್ಮಪರಿಷ್ಕರಣೆ ಎಂದಾಗಿದೆ.

ಇದು ಹೊಸ ಅಭಿಪ್ರಾಯವೇನೂ ಅಲ್ಲ. 1400 ವರ್ಷಗಳ ಮೊದಲು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಇದೇ ಅರ್ಥ ಹೇಳಿದ್ದರು: ಒಂದು ಯುದ್ಧ ಕ್ಷೇತ್ರದಿಂದ ಮರಳಿ ಬರುವಾಗ ಹಝ್ರತ್ ಪೈಗಂಬರ್ ಹೇಳಿದರು: "ನಾವು ಚಿಕ್ಕ ಜಿಹಾದ್‌ನಿಂದ ದೊಡ್ಡ ಜಿಹಾದ್ ಕಡೆಗೆ ಹೋಗುತ್ತಿದ್ದೇವೆ." ಆತ್ಮದ ಸುಧಾರಣೆ ಮಾಡುವುದೇ ದೊಡ್ಡ ಜಿಹಾದ್ ಆಗಿದೆ. ಅದು ಎಂದೂ ಕೊನೆಗೊಳ್ಳದ ಕ್ರಿಯೆಯಾಗಿದೆ. ಆದರೆ ಯುದ್ಧವು ನಿರಂತರವಾಗಿ ಮುಂದುವರಿಯದು.

ಶಾಂತಿ ಮತ್ತು ಸುಖದ ಕಾಲದಲ್ಲಿ ತಲೆದೋರುವ ಕೆಡುಕುಗಳನ್ನು ದೂರ ಸರಿಸುವುದೇ ನಿಜವಾದ ಜಿಹಾದ್ ಆಗಿದೆ. ಮಾನವರ ಸೇವೆ ಮಾಡುವುದು ಸಹ ನಿಜವಾದ ಜಿಹಾದ್ ಆಗಿದೆ. 120 ವರ್ಷಗಳ ಅಹ್ಮದಿಯಾ ಸಂಘಟನೆಯ ಚರಿತ್ರೆ ಇದಕ್ಕೆ ಸಾಕ್ಷ್ಯ ನೀಡುತ್ತದೆ. ನಾವೆಲ್ಲರೂ ಈ ಜಿಹಾದ್ ಮಾಡುತ್ತಾ ಇದ್ದೇವೆ.

ನಾವು ಜನರನ್ನು ತಮ್ಮ ಸೃಷ್ಟಿಕರ್ತನ ಸಮೀಪಕ್ಕೆ ತರಲು ಪ್ರಯತ್ನಿಸುತ್ತಾ ಇದ್ದೇವೆ. ನಮ್ಮ ಶಾಲೆಗಳು ಮತ್ತು ಆಸ್ಪತ್ರೆಗಳು, ಆಫ್ರಿಕಾ ಮತ್ತು ಏಶಿಯಾದ ಬಡದೇಶಗಳಲ್ಲಿ ಮತ್ತು ವಿಶ್ವದ ಇತರ ಕೆಲವು ದೇಶಗಳಲ್ಲಿ ನೀರು ಸರಬರಾಜಿಗೆ ಮಾಡುವ ನಮ್ಮ ಯೋಜನೆಗಳು ಮುಂದುವರಿಯುತ್ತಾ ಇವೆ. ನೈಸರ್ಗಿಕ ದುರಂತಗಳಿಂದ ಸಂತ್ರಸ್ತರಾಗುವವರಿಗೂ ನಾವು ಸಹಾಯ ಮಾಡುತ್ತಿದ್ದೇವೆ. ಇಲ್ಲಿ ಜರ್ಮನಿಯ "ಹ್ಯುಮೇನಿಟಿ ಫಸ್ಟ್" ಎಂಬ ನಮ್ಮ ಸಂತ್ರಸ್ತ ಪರಿಹಾರ ಸಂಸ್ಥೆ ಬಹಳ ಆಶ್ಚರ್ಯಕರವಾಗಿ ಕೆಲಸಮಾಡಿದೆ. ಬಡವರಿಗೂ ಅನಾಥರಿಗೂ ಸಹಾಯ ನೀಡಿದೆ. ಬಾವಿಗಳನ್ನು ನಿರ್ಮಿಸುವ ಮತ್ತು ವಿದ್ಯುಚ್ಛಕ್ತಿ ಒದಗಿಸುವ ಕೆಲಸ ಮಾಡಿದೆ. ನಮಗೆ ಮಾರ್ಗದರ್ಶನ ನೀಡುತ್ತಾ ಅಹ್ಮದಿಯಾ ಜಮಾಆತಿನ ಸ್ಥಾಪಕರು ಹೀಗೆ ಹೇಳಿರುತ್ತಾರೆ:

"ನನ್ನನ್ನು ವಾಗ್ದತ್ತ ಮಸೀಹ್ ಎಂದು ಅಂಗೀಕರಿಸುವ ನನ್ನ ಜಮಾಅತಿಗೆ ಸೇರಿದವರು ಕೆಟ್ಟ ನಡೆವಳಿಕೆಗಳಿಂದ ಯಾವಾಗಲೂ ದೂರಸರಿಯಬೇಕು. ಅಲ್ಲಾಹನು ನನ್ನನ್ನು ವಾಗ್ದತ್ತ ಮಸೀಹ್ ಮಾಡಿ ಮರ್ಯಮ್ ಸುತ ಮಸೀಹರ ಪೋಷಾಕನ್ನು ನನಗೆ ತೊಡಿಸಿದ್ದಾನೆ.

ನಾನು ನಿಮಗೆ ಉಪದೇಶಿಸುತ್ತೇನೆ:

ನೀವು ಕೆಡುಕಿನಿಂದ ದೂರ ಸರಿಯಿರಿ, ಮಾನವರಿಗೆ ನಿಜವಾಗಿ ದಯೆದೋರಿರಿ. ದ್ವೇಷ ಅಸೂಯೆಗಳಿಂದ ನಿಮ್ಮ ಹೃದಯಗಳನ್ನು ಮುಕ್ತಿಗೊಳಿಸಿರಿ. ನೀವು ಹಿಗೆ ಮಾಡಿದರೆ ದೇವ ದೂತರ ಹಾಗೆ ಆಗುವಿರಿ. ಮನುಷ್ಯರ ಬಗ್ಗೆ ಸಹಾನುಭೂತಿಯಿಲ್ಲದ ಧರ್ಮವು ಕೊಳಕು ಮತ್ತು ಅಪವಿತ್ರವಾಗಿದೆ. ಸ್ವಾರ್ಥ ಆಶಾಭಿಲಾಷೆಗಳ ಮೇಲೆ ಅಸ್ತಿಭಾರ ಹೊಂದಿದ ದ್ವೇಷದ ಮಾರ್ಗವು ಮಾಲಿನ್ಯಭರಿತವಾಗಿದೆ................ ಅಲ್ಲಾಹನಿಗೋಸ್ಕರ ಎಲ್ಲಾ ಜನರ ಮೇಲೆ ದಯೆದೋರುವವರಾಗಿರಿ. ಹಾಗೆ ಮಾಡಿದರೆ

# ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ

**ಅಮೇರಿಕದ ಫ್ಲೋರಿಡಾದ ಡವ್ (DOVE) ಚರ್ಚ್ ಪಾದರಿ ಟೆರ್ರಿ ಜೋನ್ಸ್ ಪವಿತ್ರ ಖುರ್‌ಆನ್ ವಿರುದ್ಧ ಎತ್ತಿದ ಹತ್ತು ಆಕ್ಷೇಪಗಳಿಗೆ ಉತ್ತರಗಳನ್ನು ನಾವು ಸರಣಿಯಲ್ಲಿ ಪ್ರಕಟಿಸುತ್ತಿದ್ದೇವೆ.**

**– ಸಂಪಾದಕ**

### ಟೆರ್ರಿ ಜೋನ್ಸ್ ಆಕ್ಷೇಪ ಸಂಖ್ಯೆ - 1

ಪವಿತ್ರ ಖುರ್‌ಆನ್ ಪ್ರಕಾರ ಯೇಸು ಮಸ್ಸೆಯ ದೇವಪುತ್ರನಲ್ಲ. ಶಿಲುಬೆಯಲ್ಲಿ ಅವರು ಮೃತರಾಗಲಿಲ್ಲ. ಆದರೆ ಇದು ಒಂದು ಚಾರಿತ್ರಿಕ ಸತ್ಯವಾಗಿದ್ದರೂ ಇಸ್ಲಾಮ್ ಅದನ್ನು ಅಲ್ಲಗಳೆಯುತ್ತದೆ. ಮುಸ್ಲಿಮರು ಹೀಗೆ ನಂಬುವುದರಿಂದ ಶಾಶ್ವತ ಸ್ವರ್ಗದಿಂದ ವಂಚಿತರಾಗಿರುವರು. ಅವರು ಪಶ್ಚಾತ್ತಾಪಗೊಂಡು ತಮ್ಮ ಈ ನಂಬಿಕೆಯನ್ನು ಕೈ ಬಿಡದಿದ್ದರೆ ಶಾಶ್ವತ ನರಕಕ್ಕೆ ಗುರಿಯಾಗುವರು.

### ಪ್ರಥಮ ಆಕ್ಷೇಪಕ್ಕೆ ಉತ್ತರ

*ಲೇಖಕ: ಮೌಲಾನ ಮುಹಮ್ಮದ್ ಉಮರ್ ಸಾಹೆಬ್, ನಾಇಬ್, ನಾಝಿರ್ ಅಅ್‌ಲಾ, ಖಾದಿಯಾನ್.*

ಪಾದರಿಯ ಈ ಆಕ್ಷೇಪದಲ್ಲಿ ಎರಡು ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ:

1. ಪವಿತ್ರ ಖುರ್‌ಆನ್ ಪ್ರಕಾರ ಯೇಸು ಮಸೀಹ್ (ಮಸ್ಸೆಯ) ದೇವನ ಪುತ್ರ ಅಲ್ಲ.
2. ಪವಿತ್ರ ಖುರ್‌ಆನ್ ಪ್ರಕಾರ ಯೇಸು ಮಸೀಹ್ ಶಿಲುಬೆಯಲ್ಲಿ ಮೃತರಾಗಲಿಲ್ಲ.

ಈ ಆಕ್ಷೇಪಗಳ ಬಗ್ಗೆ ಚಿಂತಿಸುವುದಾದರೆ ಇವುಗಳಿಗೆ ಉತ್ತರ ಬೈಬಲ್ ಸ್ವತಃ ನೀಡುತ್ತದೆ. ಆದುದರಿಂದ ಪವಿತ್ರ ಖುರ್‌ಆನನ್ನು ಈ ಆಕ್ಷೇಪಗಳಿಗೆ ಗುರಿಪಡಿಸಲು ಸಾಧ್ಯವಿಲ್ಲ.

---

ನೀವು ಪರಲೋಕದಲ್ಲಿ ಅಲ್ಲಾಹನ ದಯೆಗೆ ಪಾತ್ರರಾಗುವಿರಿ. ನೀವು ಬನ್ನಿರಿ. ಎಲ್ಲಾ ಪ್ರಕಾಶಗಳಿಗಿಂತಲೂ ನಿಮ್ಮ ಪ್ರಕಾಶ ಹೊಳಪನ್ನು ಹೊಂದುವ ಮಾರ್ಗವನ್ನು ನಾನು ತೋರಿಸಿ ಕೊಡುವೆನು. ನೀವು ಎಲ್ಲಾ ವಿಧಗಳ ದ್ವೇಷ ಅಸೂಯೆಗಳನ್ನು ತ್ಯಜಿಸಿರಿ. ಮಾನವರಿಗೆ ದಯೆದೋರುವವರಾಗಿರಿ. ನೀವು ಅಲ್ಲಾಹನಿಗೆ ನಿಮ್ಮನ್ನು ಅರ್ಪಿಸಿಕೊಳ್ಳಿರಿ.

"ನಾನು ಒಂದು ಅಜ್ಞೆಯೊಂದಿಗೆ ಆಗಮಿಸಿದ್ದೇನೆ: ಇನ್ನು ಮುಂದೆ ಖಡ್ಗದ ಮೂಲಕ ಮಾಡುವ ಜಿಹಾದನ್ನು ಕೊನೆಗೊಳಿಸಲಾಗಿದೆ. ಆದರೆ ಆತ್ಮ ಶುದ್ಧೀಕರಣದ ಜಿಹಾದ್ ಮುಂದುವರಿಯುವುದು. ನಾನು ಈ ಮಾತನ್ನು ನನ್ನ ಸ್ವಂತ ಇಷ್ಟ ಪ್ರಕಾರ ಹೇಳುತ್ತಾ ಇಲ್ಲ. ಇದು ನಿಶ್ಚಯವಾಗಿಯೂ ದೇವನ ನಿರ್ಧಾರವಾಗಿದೆ."

ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ಹೇಳಿದ್ದಾರೆ:

"ವಾಗ್ದತ್ತ ಮಸೀಹ್ ಆಗಮಿಸುವಾಗ ಧಾರ್ಮಿಕ ಯುದ್ಧವನ್ನು ಅವರು ಕೊನೆಗೊಳಿಸುವರು."

"ಆದುದರಿಂದ ನನ್ನ ಜಮಾಅತಿಗೆ ಸೇರಿದವರಿಗೆ ನಾನು ಆಜ್ಞಾಪಿಸುತ್ತೇನೆ: ಅವರು ತಮ್ಮ ಹೃದಯಗಳನ್ನು ಶುದ್ಧೀಕರಿಸಬೇಕು. ಅವರು ಸಹಾನುಭೂತಿ ತೋರಿಸುವವರೂ ಕಷ್ಟ ಪಡುವವರಿಗೆ ದಯೆದೋರುವವರೂ ಆಗಬೇಕು. ಅವರು ಲೋಕದಲ್ಲಿ ಶಾಂತಿಯನ್ನು ಹರಡಬೇಕು. ಏಕೆಂದರೆ ಅದರ ಫಲಸ್ವರೂಪವಾಗಿ ಅವರ ಧರ್ಮ ಹರಡುವುದು."

(ಬ್ರಿಟಿಷ್ ಸರಕಾರ ಮತ್ತು ಜಿಹಾದ್)

ನಾವು ಈ ಜಿಹಾದನ್ನು ಯಾವುದೇ ಅಡ್ಡಿ ಆತಂಕಗಳಿಗೆ ಗುರಿಯಾಗದೆ ಮುಂದುವರಿಸಿಕೊಂಡು ಹೋಗುವುದು ನಾವೆಲ್ಲರೂ ಒಂದು ಆಧ್ಯಾತ್ಮಿಕ ಸರಪಳಿಯಲ್ಲಿ ಈ ಕಾಲದ ವಾಗ್ದತ್ತ ಮಸೀಹರ ಖಿಲಾಫತ್ ಮೂಲಕ ಜೋಡಿಸಲ್ಪಟ್ಟದ್ದರಿಂದಾಗಿದೆ. ಖಿಲಾಫತ್‌ನೊಂದಿಗೆ ಅಹ್ಮದಿಯಾ ಜಮಾಅತಿಗೆ ಇರುವ ಸಂಬಂಧವು ಹಝ್‌ರತ್ ಮುಹಮ್ಮದ್ ಪೈಗಂಬರರ,[ಸ] ವಾಗ್ದತ್ತ ಮಸೀಹರು ನೀಡಿದ ಉಪದೇಶಗಳನ್ನು ಪಾಲಿಸಲು ನಮ್ಮನ್ನು ನಿರ್ಬಂಧಿಸುತ್ತದೆ.

ವಾಗ್ದತ್ತ ಮಸೀಹರ ಉಪದೇಶ, ದೇವನಿಗೆ ಸಂಬಂಧಿಸಿದ ನಮ್ಮ ಕರ್ತವ್ಯಗಳನ್ನು ಗೌರವಪೂರ್ವಕವಾಗಿ ಪಾಲಿಸುವುದು ಮತ್ತು ದೇವನ ಸೃಷ್ಟಿಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಗೌರವಪೂರ್ವಕವಾಗಿ ಪಾಲಿಸುವುದಾಗಿದೆ. ದ್ವೇಷದ ಗೋಡೆಗಳನ್ನು ಕೆಡವಿ ಪ್ರೀತಿ ವಾತ್ಸಲ್ಯದ ಸುವಾಸನೆಯನ್ನು ಹರಡುವುದಾಗಿದೆ.

ನಾನು ನಿಮ್ಮ ಮುಂದೆ ಓದಿ ಹೇಳಿದ ಉಲ್ಲೇಖಗಳ ಮೂಲಕ ನನ್ನ ಮುಂದೆ ಕುಳಿತಿರುವ ವಿದ್ಯಾಸಂಪನ್ನರಾದ ನೀವು ಇಸ್ಲಾಮಿನ ನೈಜ ಸಂದೇಶವನ್ನು ತಕ್ಕ ಮಟ್ಟಿಗೆ ಮನವರಿಕೆ ಮಾಡಿಕೊಂಡಿರಬಹುದೆಂದು ನಾನು ಭಾವಿಸುತ್ತೇನೆ. ಇಸ್ಲಾಮ್ ಶಾಂತಿ ಮತ್ತು ಭದ್ರತೆಯನ್ನೋ ಅಥವಾ ಭಯೋತ್ಪಾದನೆಯನ್ನೋ ಕಲಿಸುತ್ತಿರುವುದು ಎಂದು ನೀವು ಸ್ವತಃ ನಿರ್ಧರಿಸಬಹುದಾಗಿದೆ. ಒಂದು ಗುಂಪು ಅಥವಾ ಕೆಲವು ಜನರು ಮಾಡುವ ಕೆಟ್ಟಕೆಲಸಗಳ ಕಾರಣ ಒಂದು ಧರ್ಮವನ್ನು ನಿಂದಿಸುವುದು ಸರಿಯಾದ ಕೆಲಸವಲ್ಲ.

ಆದುದರಿಂದ ನೀವು ನಿಮ್ಮ ಕ್ಷೇತ್ರಗಳಲ್ಲಿ ನ್ಯಾಯಪಾಲನೆ ಬಗ್ಗೆ ಮಾತನಾಡಬೇಕೆಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ಅದು ನೀವು ನಡೆಸುವ ನಿಜವಾದ ಜಿಹಾದ್ ಆಗುವುದು. ಆದರೆ ಆ ಮೂಲಕ ನೀವು ಯಾವುದೇ ಜಿಹಾದಿ ಸಂಘದ ಸದಸ್ಯರಾಗಲಾರಿರಿ.

ನನ್ನ ಮಾತುಗಳನ್ನು ಆಲಿಸಿದುದಕ್ಕೋಸ್ಕರ ಧನ್ಯವಾದಗಳು.

**(The Review of Religions - October 2010 ಸಂಚಿಕೆಯಿಂದ. ಭಾಷಾಂತರ : ಎಂ. ಉಬೈದುಲ್ಲಾ)**

ದೇವನ ಮಗ ಎಂಬ ಪದವು ಬೈಬಲಿನಲ್ಲಿ ಕೇವಲ ಯೇಸು ಮಸೀಹರಿಗೆ ಸೀಮಿತಗೊಳಿಸಿ ಪ್ರಯೋಗಿಸಲ್ಪಡುವುದಿಲ್ಲ. ಬೈಬಲ್‌ನಲ್ಲಿ ಈ ಪದವು ನೂರಾರು ಅಲ್ಲ, ಸಾವಿರಾರು ಜನರ ಬಗ್ಗೆ ಪ್ರಯೋಗಿಸಲಾಗಿದೆ.

ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ:

1. "ಇಸ್ರಾಯೇಲ್ ಜನವು ನನಗೆ ಚೊಚ್ಚಲ ಮಗನಂತೆ ಇದೆ." (ವಿಮೋಚನ ಕಾಂಡ 4:22)
2. ದಾವೀದನ ಬಗ್ಗೆ ಹೀಗೆ ಹೇಳಲಾಗಿದೆ:
   "ನಾನಾದರೋ ಅವನನ್ನು ಜ್ಯೇಷ್ಠಪುತ್ರನನ್ನೂ ಭೂರಾಜರಲ್ಲಿ ಉನ್ನತನನ್ನೂ ಮಾಡಿಕೊಳ್ಳುವೆನು." (ಕೀರ್ತನೆಗಳು 89:27)
3. ಸೊಲೋಮೋನನ ಬಗ್ಗೆ ಹೀಗೆ ಬರೆದಿದೆ:
   "ಅವನು ನನಗೆ ಮಗನಾಗಿರುವನು. ನಾನು ಅವನಿಗೆ ತಂದೆಯಾಗಿರುವೆನು." (ಪೂರ್ವಕಾಲ ವೃತ್ತಾಂತ 22:10)
4. ಯಹೂದಿ ಪಂಡಿತರ ಬಗ್ಗೆ ಹೀಗೆ ಹೇಳಲಾಗಿದೆ:
   "ಅವರು ಇಸ್ರಾಯೇಲಿನ ವಂಶದವರೂ ದೇವರು ಪುತ್ರರಾಗಿ ಸ್ವೀಕರಿಸಿದವರೂ ಆಗಿದ್ದಾರೆ." (ರೋಮಾ ಪುರದವರಿಗೆ 9:4)
5. "ಪರಿಶುದ್ಧ ಸ್ಥಾನದಲ್ಲಿರುವ ದೇವರು ದಿಕ್ಕಿಲ್ಲದವರಿಗೆ ತಂದೆಯೂ....... ಆಗಿದ್ದಾನೆ." (ಕೀರ್ತನೆಗಳು 68:5)
6. ಬೈಬಲಿನಲ್ಲಿ ಹೀಗೆ ಸಹ ಬರೆಯಲಾಗಿದೆ:
   "ಕರ್ತನು ಮಾತಾಡುತ್ತಿದ್ದಾನೆ: ನಾನು ಸಾಕಿ ಸಲುಹಿದ ಮಕ್ಕಳೇ ನನಗೆ ದ್ರೋಹ ಮಾಡಿದ್ದಾರೆ." (ಯೆಶಾಯ 1:2)

ಪಾದರಿಯ ಆಕ್ಷೇಪಕ್ಕೆ ಉತ್ತರವನ್ನು ನಾನು ಬೈಬಲಿನಿಂದ ನೀಡಿದ ಹಾಗಾಯಿತು.

ಕ್ರೈಸ್ತರು ಯೇಸು ಮಸೀಹರನ್ನು ದೇವನ ಮಗನೆಂದು ಪರಿಗಣಿಸುವುದಾದರೆ, ನಾವು ಅವರನ್ನು ಮನುಷ್ಯನೆಂದು ಗಣಿಸುವುದರಲ್ಲಿ ಸತ್ಯದ ಕಡೆಗೆ ಇದ್ದೇವೆ. ಏಕೆಂದರೆ ಯೇಸು ಮಸೀಹ್ ಸ್ವತಃ ತನ್ನನ್ನು ಹೊಸ ಒಡಂಬಡಿಕೆಯಲ್ಲಿ ಮನುಷ್ಯ ಕುಮಾರನೆಂದು ಹೇಳಿರುವರು. ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ:

1. "ಪಾಪಗಳನ್ನು ಕ್ಷಮಿಸಿಬಿಡುವುದಕ್ಕೆ ಮನುಷ್ಯ ಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂದು ನೀವು ತಿಳಿಯಬೇಕು." (ಮತ್ತಾಯ 9:6)
2. ಬೈಬಲಿನಲ್ಲಿ ಸತ್ಯವಂತರಿಗೂ ದೇವನ ಪ್ರೀತಿಗೆ ಪಾತ್ರರಾದವರಿಗೂ ದೇವನ ಪುತ್ರ ಎಂದು ಹೇಳಲಾಗಿದೆ. ಈ ಕೆಳಗಿನ ಉದಾಹರಣೆಗಳನ್ನು ನೋಡಿರಿ:

   "ಆತನು ನೀತಿವಂತನಾಗಿದ್ದಾನೆಂಬುದು ನಿಮಗೆ ಗೊತ್ತಾಗಿದ್ದರೆ ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನು ಆತನಿಂದ ಹುಟ್ಟಿದವನಾಗಿದ್ದನೆಂದು ನೀವು ತಿಳಿದಿದ್ದೀರಿ." (೧ ಯೋಹಾನನು 2:29)

   "ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ." (೧ ಯೋಹಾನನು 2:1)

   "ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹಾಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ." (ಮತ್ತಾಯ 5:44, 45)
3. "ಮನುಷ್ಯ ಕುಮಾರನು...... ಅನ್ನಪಾನಗಳನ್ನು ತೆಗೆದುಕೊಳ್ಳುವವನಾಗಿದ್ದಾನೆ." (ಮತ್ತಾಯ 11:19)
4. "ಯೋನನು ಹೇಗೆ ಮೂರು ದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯ ಕುಮಾರನು ಮೂರು ದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು." (ಮತ್ತಾಯ 12:40)

ಬೈಬಲ್ ನಮಗೆ ಹೇಳಿಕೊಡುವುದೇನೆಂದರೆ, ಯೇಸು ಮಸೀಹರು ಎಂದೂ ತನ್ನನ್ನು ದೇವನ ನಿಜವಾದ ಮಗನೆಂದು ಹೇಳಲಿಲ್ಲ. ಅವರು ತನ್ನನ್ನು ದೇವ ಕುಮಾರನೆಂದು ಸಾಮ್ಯರೂಪದಲ್ಲಿ ಹೇಳಿರುವರು. ಬೈಬಲಿನ ಹೊಸ ಒಡಂಬಡಿಕೆಯ ಈ ಕೆಳಗಿನ ಉಲ್ಲೇಖವನ್ನು ನೋಡಿರಿ:

"ಯೆಹೂದ್ಯರು ಆತನನ್ನು ಹೊಡೆದು ಕೊಲ್ಲಬೇಕೆಂದು ತಿರಿಗಿ ಕಲ್ಲುಗಳನ್ನು ತೆಗೆದುಕೊಂಡು ಬರಲು ಯೇಸು ಅವರನ್ನು - ತಂದೆಯ ಕಡೆಯಿಂದ ಅನೇಕ ಒಳ್ಳೇ ಕ್ರಿಯೆಗಳನ್ನು ನಿಮಗೆ ತೋರಿಸಿದೆನು; ಅವುಗಳಲ್ಲಿ ಯಾವ ಕ್ರಿಯೆಯ ದೆಸೆಯಿಂದ ನನ್ನ ಮೇಲೆ ಕಲ್ಲೆಸೆಯುತ್ತೀರಿ ಎಂದು ಕೇಳಿದ್ದಕ್ಕೆ ಯೆಹೂದ್ಯರು - ನಾವು ನಿನ್ನ ಮೇಲೆ ಕಲ್ಲೆಸೆಯುವುದು ಒಳ್ಳೇ ಕಾರ್ಯದ ದೆಸೆಯಿಂದಲ್ಲ, ದೇವದೂಷಣೆಯ ದೆಸೆಯಿಂದಲೂ ನೀನು ಮನುಷ್ಯನಾಗಿದ್ದು ನಿನ್ನನ್ನು ನೀನೇ ದೇವರನ್ನು ಮಾಡಿಕೊಳ್ಳುವದರ ದೆಸೆಯಿಂದಲೂ ನಿನ್ನ ಮೇಲೆ ಕಲ್ಲೆಸೆಯುತ್ತೇವೆ ಅಂದರು. ಅದಕ್ಕೆ ಯೇಸು-ನೀವು ದೇವರುಗಳೇ ಎಂದು ನಾನು ಹೇಳಿದೆನು ಎಂಬುದಾಗಿ ನಿಮ್ಮ ಧರ್ಮಶಾಸ್ತ್ರದಲ್ಲಿ ಬರೆದಿದೆಯಲ್ಲಾ; ಶಾಸ್ತ್ರವು ಸುಳ್ಳಾಗಲಾರದಷ್ಟೆ. ಹಾಗಾದರೆ ದೇವರ ವಾಕ್ಯವನ್ನು ಹೊಂದಿದವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ ತಂದೆಯು ಪ್ರತಿಷ್ಠೆ ಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನುತ್ತೀರೋ" (ಯೋಹಾನ 10:31-36)

ಇದರಿಂದ ಸ್ಪಷ್ಟವಾಗುವುದೇನೆಂದರೆ, ಯೇಸು ಮಸೀಹ್ ತನ್ನನ್ನು ದೇವನ ಮಗ ಎಂದು ಹೇಳಿದುದು ಹಿಂದಿನ ಧರ್ಮಶಾಸ್ತ್ರಗಳಲ್ಲಿ

ಯಾರಿಗೆ ದೇವನ ಸಂದೇಶ ವಾಕ್ಯಗಳು ಅವತೀರ್ಣವಾಗಿದ್ದವೋ ಅವರನ್ನು ದೇವರು ಎಂದು ಹೇಳಿದ ಅದೇ ಅರ್ಥದಲ್ಲಾಗಿದೆ. ಬೈಬಲಿನ ಕೀರ್ತನೆಗಳಲ್ಲಿ ಹೀಗೆ ಹೇಳಿದೆ:

"ನೀವು ದೇವರುಗಳು, ಎಲ್ಲರೂ ಪರಾತ್ಪರನ ಮಕ್ಕಳು ಎಂದು ನಾನು ಹೇಳಿದೆನು." (ಕೀರ್ತನೆಗಳು 82:6)

**ಆದುದರಿಂದ ಯೇಸು ಮಸೀಹರನ್ನು ದೇವಪುತ್ರನೆಂದು ನೈಜ ಅರ್ಥದಲ್ಲಿ ಹೇಳುವುದನ್ನು ಪವಿತ್ರ ಖುರ್‌ಆನ್ ನಿಷಿದ್ಧಗೊಳಿಸಿದುದಕ್ಕೆ ಬೈಬಲಿನ ವಚನಗಳು ಬೆಂಬಲ ನೀಡುತ್ತವೆ.**

ಪಾದರಿಯ ಆಕ್ಷೇಪದ ಇನ್ನೊಂದು ಭಾಗ ಹೀಗಿದೆ: ಯೇಸು ಮಸೀಹ್ ಶಿಲುಬೆಯಲ್ಲಿ ಮೃತನಾಗಲಿಲ್ಲ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ.

ಈ ಆಕ್ಷೇಪಕ್ಕೆ ಉತ್ತರವನ್ನು ಸಹ ಬೈಬಲಿನ ಹೊಸ ಒಡಂಬಡಿಕೆ ನೀಡುತ್ತದೆ. ಬೈಬಲಿನ ಅನೇಕ ಉಲ್ಲೇಖಗಳಿಂದ ತಿಳಿಯುವುದೇನೆಂದರೆ, ಯೇಸು ಮಸೀಹರು ಶಿಲುಬೆಯಲ್ಲಿ ಮೃತನಾಗುವುದನ್ನು ಇಚ್ಛಿಸುತ್ತಿರಲಿಲ್ಲ. ಅವರು ಸ್ವತಃ ಶಿಲುಬೆಯ ಮರಣದಿಂದ ರಕ್ಷಣೆ ಪಡೆಯಲು ದೇವರೊಂದಿಗೆ ಪ್ರಾರ್ಥಿಸುತ್ತಾ ಇದ್ದರಲ್ಲದೆ ತನ್ನ ಶಿಷ್ಯರೊಂದಿಗೆ ಸಹ ಈ ಮೃತ್ಯು ಪಾತ್ರೆ ದೂರಸರಿಯಲು ಪ್ರಾರ್ಥಿಸಬೇಕೆಂದು ಆಗ್ರಹಪಡಿಸುತ್ತಿದ್ದರು. ಸುವಾರ್ತೆಗಳ ಈ ಉಲ್ಲೇಖವನ್ನು ನೋಡಿರಿ:

"ತರುವಾಯ ಆತನು ಹೊರಟು ಪದ್ಧತಿ ಪ್ರಕಾರ ಎಣ್ಣೇಮರಗಳ ಗುಡ್ಡಕ್ಕೆ ಹೋದನು. ಶಿಷ್ಯರೂ ಆತನ ಹಿಂದೆ ಹೋದರು. ಆತನು ಕ್ಲುಪ್ತ ಸ್ಥಳಕ್ಕೆ ಬಂದಾಗ ಅವರಿಗೆ – ನೀವು ಶೋಧನೆಗೆ ಒಳಗಾಗದಂತೆ ದೇವರನ್ನು ಪ್ರಾರ್ಥಿಸಿರಿ ಎಂದು ಹೇಳಿದನು. ಆ ಮೇಲೆ ಆತನು ಅವರನ್ನು ಬಿಟ್ಟು ಕಲ್ಲೆಸುಗೆಯಷ್ಟು ದೂರ ಹೋಗಿ ಮೊಣಕಾಲೂರಿ – ತಂದೆಯೇ, ನಿನಗೆ ಇಷ್ಟವಿದ್ದರೆ ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಹೇಗೂ ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಆಗಲಿ ಎಂದನು. ಆಗ ಪರಲೋಕದಿಂದ ಬಂದ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು. ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು. ಆತನು ಪ್ರಾರ್ಥನೆ ಮಾಡಿ ಮುಗಿಸಿ ಎದ್ದು ಶಿಷ್ಯರ ಬಳಿಗೆ ಬಂದು ದುಃಖಭಾರದಿಂದ ಇವರಿಗೆ ನಿದ್ರೆಹತ್ತಿರುವುದನ್ನು ಕಂಡು ಅವರಿಗೆ – ನೀವು ನಿದ್ರೆ ಮಾಡುವುದೇನು? ಏಳಿರಿ, ಶೋಧನೆಗೆ ಒಳಗಾಗದಂತೆ ಪ್ರಾರ್ಥಿಸಿರಿ ಎಂದು ಹೇಳಿದನು." (ಲೂಕ 22:39-46)

ಇದೇ ರೀತಿಯ ವಿಷಯದ ನಿರೂಪಣೆಯ ವಾಕ್ಯಗಳು ಮತ್ತು ಮನೋವೇದನೆ ಭರಿತ ಪ್ರಾರ್ಥನೆಯ ಪ್ರಸ್ತಾಪಗಳು ಮತ್ತಾಯ ಅಧ್ಯಾಯ 26 ವಚನ 36ರಿಂದ 46ರಲ್ಲೂ ಮಾರ್ಕ ಅಧ್ಯಾಯ 14 ವಚನ 32ರಿಂದ 42ರಲ್ಲೂ ಕಾಣಬಹುದು.

ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುವುದೇನೆಂದರೆ, ಯೇಸು ಮಸೀಹರು ಶಿಲುಬೆಯಲ್ಲಿ ಸಾಯಲು ಬಯಸುತ್ತಿರಲಿಲ್ಲ. ಅವರು ಶಿಲುಬೆಯಲ್ಲಿ ಮೃತನಾಗುವುದರಿಂದ ರಕ್ಷಿಸಲ್ಪಡಲು ದೇವರನ್ನು ಮನನೊಂದು ಪ್ರಾರ್ಥಿಸುತ್ತಾ ಇದ್ದರು. ದೇವರು ಅವರ ಪ್ರಾರ್ಥನೆಗಳನ್ನು ಅಂಗೀಕರಿಸಿದನು. ಈ ಕೆಳಗಿನ ಸುವಾರ್ತೆಯ ಉಲ್ಲೇಖ ನೋಡಿರಿ:

"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡಲು ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು." (ಇಬ್ರಿಯರಿಗೆ 5:7)

ಯೇಸು ಮಸೀಹರು ಹೀಗೆ ಸಹ ಹೇಳಿದ್ದರು:

"ಭಕ್ತಿ ಹೀನರ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ. ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆಯನ್ನು ಕೇಳುತ್ತಾನೆಂದು ಬಲ್ಲೆವು." (ಯೋಹಾನ 9:31)

"ಆದಕಾರಣ ನೀವೂ ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ." (ಮಾರ್ಕ್ 11:24)

"ಸ್ವಾಮಿಯು – ಸಾಸಿವೆ ಕಾಳಷ್ಟು ನಂಬಿಕೆ ನಿಮಗಿದ್ದರೆ ಈ ಅತ್ತೀಮರಕ್ಕೆ – ನೀನು ಬೇರು ಸಹಿತ ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ನಾಟಿಕೋ ಎಂದು ಹೇಳಿದರೂ ಅದು ನಿಮ್ಮ ಮಾತನ್ನು ಕೇಳುವದು." (ಲೂಕ 17:6)

"ಯೇಸು ಕಣ್ಣೆತ್ತಿ ನೋಡಿ – ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ. ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ." (ಯೋಹಾನ 11:41, 42)

**ಮೇಲಿನ ಉಲ್ಲೇಖಗಳಿಂದ ಸಾಬೀತಾಗುವುದೇನೆಂದರೆ, ದೇವರು ಯೇಸು ಮಸೀಹರ ಪ್ರಾರ್ಥನೆಗಳನ್ನು ಅಂಗೀಕರಿಸಿ ಅವರನ್ನು ಶಿಲುಬೆಯಲ್ಲಿ ಮೃತನಾಗುವುದರಿಂದ ರಕ್ಷಿಸಿದನು.**

ಶಿಲುಬೆಗೆ ಸಂಬಂಧಿಸಿದ ಘಟನೆಯೊಂದಿಗೆ ನಡೆದ ಇತರ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ, ಯೇಸು ಮಸೀಹರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರು.

ಬೈಬಲ್‌ನಿಂದ ತಿಳಿಯುವುದೇನೆಂದರೆ, ಯಹೂದಿ ಪಂಡಿತರು ಮತ್ತು ಇತರ ಯಹೂದಿಯರಿಂದ ಒತ್ತಾಯಿಸಲ್ಪಟ್ಟು ಯೇಸು ಮಸೀಹರಿಗೆ ಶಿಲುಬೆಗೇರಿಸುವ ಶಿಕ್ಷೆ ವಿಧಿಸಿದ ಪಿಲಾತನು ಯೇಸು ಮಸೀಹರನ್ನು ಸತ್ಯವಂತರೆಂದು ಗ್ರಹಿಸಿದ್ದನು. ಅದಲ್ಲದೆ ಪಿಲಾತನ ಪತ್ನಿ ಕಂಡ ಒಂದು ಸ್ವಪ್ನದ ಪ್ರಕಾರ, ಯೇಸು ಮಸೀಹರಿಗೆ ಅನಿಷ್ಟ ಸಂಭವಿಸಿದರೆ ದೇಶದಲ್ಲಿ ನಾಶ ಉಂಟಾಗುವುದೆಂಬ

ಮುನ್ನೆಚ್ಚರಿಕೆ ಇದ್ದಿತು. ಆದುದರಿಂದ ಪಿಲಾತನು ಎಂತಹ ಉಪಾಯ ಕೈಗೊಂಡನೆಂದರೆ, ಯೇಸು ಮಸೀಹರು ಹೆಚ್ಚು ಹೊತ್ತು ಶಿಲುಬೆಯಲ್ಲಿ ಇರದ ಹಾಗೆ ಮಾಡಲು ಅವರನ್ನು ಶಿಲುಬೆಗೇರಿಸುವ ಸಮಯವನ್ನು ನಿಶ್ಚಯಿಸಿದನು. ಸುವಾರ್ತೆಯ ಉಲ್ಲೇಖಗಳನ್ನು ನೋಡಿರಿ:

"ಆತನನ್ನು ಶಿಲುಬೆಗೆ ಹಾಕುವಾಗ ಹೊತ್ತಾರೆ ಒಂಬತ್ತು ಗಂಟೆಯಾಗಿತ್ತು." (ಮಾರ್ಕ 15:25)

"ಮಧ್ಯಾಹ್ನ ಹನ್ನೆರಡು ಗಂಟೆಯಿಂದ ಮೂರು ಗಂಟೆಯವರೆಗೆ ಆ ದೇಶದ ಮೇಲೆಲ್ಲಾ ಕತ್ತಲೆ ಕವಿಯಿತು." (ಮತ್ತಾಯ 27:45)

"ಆ ಹೊತ್ತು ಸೌರಣೆ ದಿನವಾಗಿದ್ದರಿಂದ ಯೆಹೂದ್ಯರು – ಸಬ್ಬತ್ ದಿನದಲ್ಲಿ ಶವಗಳು ಶಿಲುಬೆಯ ಮೇಲೆ ಇರಬಾರದೆಂದು ಪಿಲಾತನನ್ನು ಕೇಳಿಕೊಂಡರು." (ಯೋಹಾನ 19:31)

"ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು. ತಿವಿದ ಕೂಡಲೆ ರಕ್ತವೂ ನೀರೂ ಹೊರಟಿತು." (ಯೋಹಾನ 19:34)

ಯೇಸು ಮಸೀಹರನ್ನು ಶಿಲುಬೆಯಿಂದ ಇಳಿಸಿದ ನಂತರ ಅವರ ದೇಹವನ್ನು ಅರಿಮಥಾಯದ ಯೋಸೇಫನಿಗೆ ನೀಡಲಾಯಿತು. (ಮಾರ್ಕ 15:45)

ಯೇಸು ಮಸೀಹರ ದೇಹವನ್ನು ಮೊದಲೇ ಸಿದ್ಧಪಡಿಸಲಾದ, ಬಂಡೆಯಲ್ಲಿ ತೋಡಿದ್ದ ಹೊಸ ಸಮಾಧಿಯಲ್ಲಿ ಇರಿಸಲಾಯಿತು. (ಮತ್ತಾಯ 24:60)

ಶಿಲುಬೆಗೇರಿಸಲ್ಪಡುವ ಮೊದಲು ಯೇಸು ಮಸೀಹರನ್ನು ಯಹೂದಿ ಮತಪಂಡಿತರು ಸೂಚಕಕಾರ್ಯ ತೋರಿಸಲು ಕೇಳಿದಾಗ ಅವರು ಹೀಗೆಂದರು:

"ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನೆಂಬ ಪ್ರವಾದಿಯಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವುದಿಲ್ಲ. ಅಂದರೆ ಯೋನನು ಹೇಗೆ ಮೂರು ದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯಕುಮಾರನು ಮೂರು ದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು." (ಮತ್ತಾಯ 12:39, 40)

ಚರಿತ್ರೆ ಮತ್ತು ಬೈಬಲಿನಿಂದ ತಿಳಿಯುವುದೇನೆಂದರೆ, ಹಝ್ರತ್ ಯೂನುಸ್ (ಯೋನಾ) ಪ್ರವಾದಿ ದೊಡ್ಡ ಮೀನಿನ ಹೊಟ್ಟೆಯೊಳಗೆ ಜೀವಂತವಾಗಿ ಹೋಗಿ ಜೀವಂತವಾಗಿ ಹೊರಗೆ ಬಂದಿದ್ದರು. ಇದೇ ರೀತಿ ಯೇಸು ಮಸೀಹರು ಜೀವಂತವಾಗಿ ಭೂಗರ್ಭದೊಳಗೆ ಪ್ರವೇಶಿಸಿ ಜೀವಂತವಾಗಿ ಹೊರಗೆ ಬರುವರೆಂದು ಈ ವಚನಗಳಲ್ಲಿ ಸೂಚಿಸಲಾಗಿತ್ತು. ಹಾಗೆಯೇ ಸಂಭವಿಸಿತು.

ಯೇಸು ಮಸೀಹರು ಶಿಲುಬೆಯಿಂದ ಇಳಿಸಲ್ಪಟ್ಟಾಗ ಜೀವಸಹಿತವಾಗಿಯೇ ಇಳಿಸಲ್ಪಟ್ಟಿದ್ದರೆಂದು ಸಾಬೀತಾಗಿದೆ. ಕೋಣೆಯ ಹಾಗಿದ್ದ ಸಮಾಧಿಯಿಂದ ಮೂರು ಹಗಲು ರಾತ್ರಿಯ ಬಳಿಕ ಆರೋಗ್ಯ ಹೊಂದಿ ಹೊರಗೆ ಬಂದಾಗ ಅವರು ತನ್ನ ಶಿಷ್ಯರ ಬಳಿಗೆ ಹೋದರು. ಆಗ ಶಿಷ್ಯರು ಯೇಸು ಮಸೀಹರ ಭೂತವನ್ನು ನೋಡುವುದಾಗಿ ಆಶ್ಚರ್ಯಗೊಂಡರು. ಆಗ ಯೇಸು ಮಸೀಹರು, "ಯಾಕೆ ಕಳವಳಗೊಳ್ಳುತ್ತೀರಿ? ನಿಮ್ಮ ಹೃದಯದಲ್ಲಿ ಅನುಮಾನಗಳು ಹುಟ್ಟುವುದೇಕೆ? ನನ್ನ ಕೈಗಳನ್ನೂ, ನನ್ನ ಕಾಲುಗಳನ್ನೂ ನೋಡಿರಿ. ನಾನೇ ಅಲ್ಲವೇ. ನನ್ನನ್ನು ಮುಟ್ಟಿ ನೋಡಿರಿ. ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು, ಅವು ಭೂತಕ್ಕಿಲ್ಲ" ಎಂದು ಹೇಳಿದರು. ಆ ಮೇಲೆ ಅವರು ತನ್ನ ಕೈಗಳನ್ನೂ ಕಾಲುಗಳನ್ನೂ ಅವರಿಗೆ ತೋರಿಸಿದರು. (ಲೂಕ 24:38-40)

"ಆದರೆ ಅವರು ಸಂತೋಷದ ದೆಸೆಯಿಂದ ಇನ್ನೂ ನಂಬದೆ ಆಶ್ಚರ್ಯಪಡುತ್ತಿರಲಾಗಿ ಆತನು – ತಿನ್ನತಕ್ಕ ಪದಾರ್ಥವೇನಾದರೂ ಇಲ್ಲಿ ನಿಮಗುಂಟೋ ಎಂದು ಅವರನ್ನು ಕೇಳಲು ಅವರು ಸುಟ್ಟ ಮೀನಿನ ಒಂದು ತುಂಡನ್ನು ಆತನಿಗೆ ಕೊಟ್ಟರು. ಆತನು ತಕ್ಕೊಂಡು ಅವರ ಮುಂದೆ ತಿಂದನು." (ಲೂಕ 24:41-43)

ಈ ಎಲ್ಲಾ ಘಟನೆಗಳು ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರೆಂಬುದನ್ನು ಸಾಬೀತುಗೊಳಿಸುತ್ತದೆ.

**ವಾಸ್ತವಿಕವಾಗಿ ಕ್ರೈಸ್ತ ಲೋಕವು ಪವಿತ್ರ ಖುರ್‌ಆನಿಗೆ ಕೃತಜ್ಞತೆ ತೋರಿಸಬೇಕಾಗಿದೆ. ಏಕೆಂದರೆ, ಯೇಸು ಮಸೀಹ್ ಮತ್ತು ಅವರ ಮಾತೆ ಮರ್ಯಮರ ವಿರುದ್ಧ ಯಹೂದಿಯರು ಮಾಡಿದ ಘೋರ ಅಶ್ಲೀಲ ಆರೋಪಗಳಿಂದ ಅವರಿಬ್ಬರನ್ನೂ ಪವಿತ್ರ ಖುರ್ ಆನ್ ಮುಕ್ತರನ್ನಾಗಿ ಮಾಡಿ ಅವರಿಬ್ಬರಿಗೂ ಗೌರವವನ್ನು ಪ್ರದಾನ ಮಾಡಿದೆ.**

ಯಹೂದಿಯರು ಮರ್ಯಮರ ವಿರುದ್ಧ, ಅವರು ವಿವಾಹೇತರ ಸಂಬಂಧದಿಂದ ಯೇಸು ಮಸೀಹರಿಗೆ ಜನ್ಮನೀಡಿದರೆಂದು ಆಕ್ಷೇಪಿಸುತ್ತಾ ಇದ್ದರು. ಅವರ ಅಭಿಪ್ರಾಯ ಪ್ರಕಾರ ಮರ್ಯಮ್ ಒಬ್ಬ ದುಶ್ಶೀಲೆಯಾದ ಮಹಿಳೆಯಾಗಿದ್ದರು (ನಊಝು ಬಿಲ್ಲಾಹ್ –. ಅಲ್ಲಾಹನು ಹೀಗೆ ಆಪಾದನೆ ಮಾಡುವುದರಿಂದ ನಮ್ಮನ್ನು ರಕ್ಷಿಸಲಿ). ಈ ಕಾರಣದಿಂದ ಹಝ್ರತ್ ಯೇಸು ಮಸೀಹರು ಅವರ ಮಾತಿನ ಪ್ರಕಾರ ಹಾದರಕ್ಕೆ ಹುಟ್ಟಿದವರಾಗಿದ್ದರು (ನಊಝು ಬಿಲ್ಲಾಹ್)

ಇವರಿಬ್ಬರನ್ನೂ ಈ ಘೋರ ಆಪಾದನೆಗಳಿಂದ ಪವಿತ್ರ ಖುರ್‌ಆನ್ ಮುಕ್ತರನ್ನಾಗಿ ಮಾಡಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ನೋಡಿರಿ:

"(ಅಷ್ಟೇ ಅಲ್ಲ) ಅವರ ಅವಿಶ್ವಾಸ ಮತ್ತು ಮರ್ಯಮಳ ಹೆಸರಿನಲ್ಲಿ ಗುರುತರವಾದ ಅಪವಾದ ಹೊರಿಸುವ ಕಾರಣದಿಂದಲೂ" (4:157)

ಯಹೂದಿಯರು ದೇವಕೋಪಕ್ಕೆ ಪಾತ್ರರಾದರೆಂದು ಈ ವಚನ ಹೇಳುತ್ತದೆ.

ಹಝ್ರತ್ ಮರ್ಯಮರ ಬಗ್ಗೆ ಪವಿತ್ರ ಖುರ್‌ಆನ್, ಯೇಸು ಮಸೀಹರ ತಾಯಿ ಸತ್ಯವಂತೆಯಾಗಿದ್ದಳು ಎಂದು ಹೇಳಿದೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:

"ದೇವದೂತರು (ಹೀಗೆ) ಹೇಳಿದ ಸಂದರ್ಭ: ಓ ಮರ್ಯಮ್, ನಿಶ್ಚಯವಾಗಿಯೂ ಅಲ್ಲಾಹನು ನಿನ್ನನ್ನು ಶ್ರೇಷ್ಠ ಹಾಗೂ ಪರಿಶುದ್ಧಗೊಳಿಸಿದ್ದಾನೆ. ಲೋಕದಲ್ಲಿರುವ ಸ್ತ್ರೀಯರೆಲ್ಲರಿಗಿಂತ ನಿನಗೆ ಉನ್ನತ ಸ್ಥಾನವನ್ನು ನೀಡಿ ಆಯ್ಕೆ ಮಾಡಿದ್ದಾನೆ." (3:43)

ಯೇಸು ಮಸೀಹರ ಮೇಲೆ ದುರಾರೋಪ ಮಾಡುತ್ತಿದ್ದ ಯಹೂದಿಯರನ್ನು ಖಂಡಿಸಿ ಪವಿತ್ರ ಖುರ್‌ಅನ್ ಹೀಗೆ ಹೇಳಿದೆ:

"ಅಲ್ಲಾಹನ ಸಂದೇಶವಾಹಕನಾದ ಮಸೀಹ್ ಈಸಬ್ನು ಮರ್ಯಮ್‌ನನ್ನು ದಿಟವಾಗಿಯೂ ನಾವು ವಧಿಸಿದ್ದೇವೆ ಎಂದು ಅವರು ಹೇಳುವ ಕಾರಣದಿಂದಲೂ (ಅವರು ಈ ಶಿಕ್ಷೆಗೆ ಈಡಾಗಿದ್ದಾರೆ)" (4:158)

ಯಹೂದಿಯರು ಹೀಗೆ ಹೇಳುವ ಕಾರಣ ಏನೆಂದರೆ ಶಿಲುಬೆಗೇರಿಸಲ್ಪಟ್ಟು ಸಾಯುವವನು ದೇವ ಶಾಪಕ್ಕೆ ಒಳಗಾದವನು ಎಂದು ಅವರ ನಂಬಿಕೆಯಾಗಿತ್ತು.

ಇದೇ ರೀತಿ ಹೊಸ ಒಡಂಬಡಿಕೆಯಲ್ಲಿ ಹೀಗೆ ಬರೆದಿದೆ:

"ಮರಕ್ಕೆ ತೂಗ ಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದಿದೆಯಲ್ಲಾ." (ಗಲಾತ್ಯದವರಿಗೆ 3:14)

ಯಹೂದಿಯರು ಯೇಸು ಮಸೀಹರನ್ನು ಅವರ ಜನ್ಮದ ದೃಷ್ಟಿಯಿಂದಲೂ ಅವರ ಮರಣದ ದೃಷ್ಟಿಯಿಂದಲೂ ಶಾಪಗ್ರಸ್ತನೆಂದು ಹೇಳುತ್ತಾರೆ. ಈ ಎರಡು ಅಪವಾದಗಳನ್ನು ಖಂಡಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ವಾಸ್ತವದಲ್ಲಿ ಅವರು ಅವರನ್ನು (ಮಸೀಹ್‌ರನ್ನು) ವಧಿಸಲಿಲ್ಲ. ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ." (4:158)

ಪವಿತ್ರ ಖುರ್‌ಆನ್‌ನಿನ ಈ ವಚನದ ಮುಂದಿನ ಭಾಗ ಹೀಗಿದೆ:

"ಆದರೆ ಅವರು ಹಾಗೆ (ಶಿಲುಬೆಯ ಮೇಲೆ ಮೃತಪಟ್ಟಂತೆ) ಅವರಿಗೆ ತೋರಿಸಲ್ಪಟ್ಟರು. ತತ್ಸಂಬಂಧ, ಭಿನ್ನಾಭಿಪ್ರಾಯವಿರುವವರು ಆ ವಿಚಾರದಲ್ಲಿ ಸಂಶಯದಲ್ಲಿಯೇ ಇದ್ದಾರೆ. ಅವರು ಊಹಾಪೋಹಗಳನ್ನು ಅವಲಂಬಿಸಿರುವರು ಹೊರತು ಅವರಿಗೆ ಆ ಬಗ್ಗೆ (ಸ್ಪಷ್ಟವಾದ) ಯಾವ ಅರಿವೂ ಇಲ್ಲ. ಖಂಡಿತವಾಗಿಯೂ ಅವರು ಅವರನ್ನು ವಧಿಸಲಿಲ್ಲ." (4:158)

ಪವಿತ್ರ ಖುರ್‌ಆನಿನ ಮುಂದಿನ ವಚನ ಹೀಗಿದೆ :

"ಬದಲಾಗಿ, ಅಲ್ಲಾಹನು ಅವರಿಗೆ ತನ್ನ ಸನ್ನಿಧಿಯಲ್ಲಿ ಗೌರವವನ್ನೂ ಉನ್ನತ ಪದವಿಯನ್ನೂ ನೀಡಿದನು. (4:159)

ಎಂದರೆ ಶಿಲುಬೆಯಲ್ಲಿ ಸಾಯಿಸಿ ಶಾಪಗ್ರಸ್ತನೆಂದು ಘೋಷಿಸುವುದರಲ್ಲಿ ಯಹೂದಿಯರು ಜಯಗಳಿಸಲಿಲ್ಲ.

ಯಹೂದಿಯರ ಘೋರ ಆರೋಪಗಳಿಗೆ ಉತ್ತರ ನೀಡಿ ಯೇಸು ಮಸೀಹ್ ಮತ್ತು ಅವರ ಗೌರವವನ್ನು ಕಾಪಾಡಿ ಪವಿತ್ರ ಖುರ್‌ಆನ್ ಕ್ರೈಸ್ತ ಧರ್ಮೀಯರಿಗೆ ಬಹಳ ದೊಡ್ಡ ಉಪಕಾರ ಮಾಡಿದೆ. ಆದುದರಿಂದ ಕ್ರೈಸ್ತ ಧರ್ಮಾವಲಂಬಿಗಳು ಪವಿತ್ರ ಖುರ್‌ಆನಿಗೆ ಕೃತಜ್ಞತೆ ಅರ್ಪಿಸುವವರಾಗಬೇಕು. ಅವರು ಪವಿತ್ರ ಖುರ್‌ಆನನ್ನು ಆಕ್ಷೇಪಕ್ಕೆ ಗುರಿಪಡಿಸಿ ಅದನ್ನು ಸುಡುವ ಚಳುವಳಿ ಪ್ರಾರಂಭಿಸಿ ಯಹೂದಿಯರಿಗೆ ಬೆಂಬಲ ನೀಡುವುದು ಹೇಗೆ ಸರಿಯಾಗಬಲ್ಲದು? ಈ ವಿಷಯ ಕ್ರೈಸ್ತ ವಿದ್ವಾಂಸರಿಗೆ ಚಿಂತಾರ್ಹವಾಗಿದೆ. ಅಲ್ಲಾಹನು ಎಲ್ಲರಿಗೂ ವಿವೇಕವನ್ನು ದಯಪಾಲಿಸಿ ಅವರು ಸತ್ಯವನ್ನು ಮನಗಾಣುವಂತಾಗಲಿ. ಅಲ್ಲಾಹನು ಹೀಗೆಯೇ ಮಾಡಲಿ.

☆

## ಪಾದರಿ ಟೆರ್ರಿ ಜೋನ್ಸ್ ಆಕ್ಷೇಪ ಸಂಖ್ಯೆ 2 ಮತ್ತು 3ರ ಉತ್ತರ

ಲೇಖಕ : ಶೇಖ್ ಮುಜಾಹಿದ್ ಅಹ್ಮದ್ ಶಾಸ್ತ್ರೀ, ಅಧ್ಯಾಪಕ ಜಾಮಿಅ ಅಹ್ಮದಿಯಾ ಖಾದಿಯಾನ್

**ಆಕ್ಷೇಪ ಸಂಖ್ಯೆ 2**: ಖುರ್‌ಆನ್ ದೇವ ವಚನವಲ್ಲ. ನೂರಾರು ವರ್ಷಗಳ ಕಾಲ ಬುದ್ಧಿಜೀವಿಗಳು ಬರೆದ ಲೇಖನಗಳ ಸಂಗ್ರಹ ಇದಾಗಿದೆ. ಇಸ್ಲಾಮ್ ಧರ್ಮದ ಉಗಮ ಕಾಲದಿಂದ ಮುಸ್ಲಿಮರೂ ಮುಸ್ಲಿಮೇತರರೂ ಇದನ್ನು ನಕಲು ಮಾಡುತ್ತಾ ಬಂದಿರುವರು.

**ಆಕ್ಷೇಪ ಸಂಖ್ಯೆ 3**: ಖುರ್‌ಆನಿನ ಉಪದೇಶಗಳು ಅರಬರ ವಿಗ್ರಹ ಪೂಜೆ, ಆಚಾರ ವಿಚಾರಗಳನ್ನು ಒಳಗೊಂಡಿವೆ. ಇವೆಲ್ಲಾ ಶೈತಾನನ ಉಪದೇಶಗಳಾಗಿವೆ. ಇವುಗಳನ್ನು ಮುಸ್ಲಿಮರು ಮತ್ತು ಅನ್ಯಧರ್ಮೀಯರು ಸಹಿಸುತ್ತಾ ಇದ್ದಾರೆ.

**ಉತ್ತರ** : ಪವಿತ್ರ ಖುರ್‌ಆನಿನ ಅವತೀರ್ಣ ಪ್ರಾರಂಭವಾದ ಕಾಲದಿಂದ ಎಂದರೆ ಕ್ರಿಸ್ತಶಕ 610 ರಿಂದ ಇಂದಿನ ತನಕ ಎಂದರೆ 2011ರ ತನಕ ಕ್ರೈಸ್ತರು ಪವಿತ್ರ ಖುರ್‌ಆನಿನ ಅದ್ಭುತ ಶಕ್ತಿಯ ಮೇಲೆ ಪರದೆ ಹಾಕಲು ಅನೇಕಾನೇಕ ಆಕ್ಷೇಪಗಳನ್ನು ಮುಂದಿಡುತ್ತಾ ಬಂದಿದ್ದಾರೆ.

ಈಗ ಹೊಸ ಯುಗದಲ್ಲಿ ಹೊಸ ರೀತಿಯ ಆಕ್ಷೇಪಗಳನ್ನು ಮಾಡಲಾಗುತ್ತಿದೆ. ಆದರೆ ಪವಿತ್ರ ಖುರ್‌ಆನಿನ ಸತ್ಯತೆಗೆ ಒಂದು ಅದ್ಭುತ ಪವಾಡವೇನೆಂದರೆ, ಈ ಭವ್ಯ ಗ್ರಂಥವು ಅನ್ಯರ ಆಕ್ಷೇಪಗಳಿಗೆ ನೀಡಿದ ಉತ್ತರದಿಂದ ಪ್ರತಿಯೊಬ್ಬ ಆಕ್ಷೇಪಗಾರ ಮೌನಾವಲಂಬಿಯಾಗಿರಬೇಕಾಯಿತು.

ಪವಿತ್ರ ಖುರ್‌ಆನಿನ ಬಗ್ಗೆ ಮಾಡಲಾದ ಆಕ್ಷೇಪ ಹೀಗಿದೆ: "ಲೋಕದಲ್ಲಿ ಪುರಾತನ ಗ್ರಂಥಗಳಲ್ಲಿರುವ ಉಪದೇಶಗಳೇ ಪವಿತ್ರ ಖುರ್‌ಆನ್‌ನಲ್ಲೂ ಇವೆ. ಆದುದರಿಂದ ಪವಿತ್ರ ಖುರ್‌ಆನ್ ದೇವ ವಾಣಿಯಲ್ಲ."

ಈ ಆಕ್ಷೇಪದಲ್ಲಿ ಈ ಕೆಳಗಿನ ಅಂಶಗಳು ಸೇರಿವೆ:

1. ಪವಿತ್ರ ಖುರ್‌ಆನಿನ ಮೊದಲು ಇದ್ದ ದೈವಿಕ ಗ್ರಂಥಗಳು ಸತ್ಯವಾಗಿದ್ದುವು. ಪವಿತ್ರ ಖುರ್‌ಆನ್ ಅವುಗಳನ್ನೇ ಜನರ ಮುಂದಿರಿಸಿತು.

2. ಪವಿತ್ರ ಖುರ್‌ಆನ್ ಹಿಂದಿನ ಕಾಲದ ದೈವಿಕ ಗ್ರಂಥಗಳ ಉಪದೇಶಗಳ ಹೊರತು ಹೊಸದಾಗಿ ಏನನ್ನೂ ಹೇಳದೆ. ಅವುಗಳನ್ನೇ ಪುನರಾವರ್ತಿಸಿದೆ. ಆದುದರಿಂದ ಪವಿತ್ರ ಖುರ್‌ಆನಿನ ಅವಶ್ಯಕತೆ ಇಲ್ಲ. ಹಿಂದಿನ ಕಾಲದ ಉಪದೇಶಗಳೇ ಸಾಕು.

3. ಪವಿತ್ರ ಖುರ್‌ಆನ್ ವಿವರಿಸುವ ಘಟನೆಗಳು ಮತ್ತು ಕಥೆಗಳನ್ನು ಹಿಂದಿನ ಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ.

ಈ ರೀತಿ ಕ್ರೈಸ್ತ ಪಾದರಿಗಳು ಜನರನ್ನು ವಂಚಿಸಲು ಮತ್ತು ಪವಿತ್ರ ಖುರ್‌ಆನಿನ ಸತ್ಯತೆಯ ಮೇಲೆ ಪರದೆ ಹಾಕಿ ಸುಳ್ಳು ಬಳಸಿ ಸತ್ಯವನ್ನು ಅಡಗಿಸಲು ಪಯತ್ನಿಸುತ್ತಿದ್ದಾರೆ.

ಈ ವಿಷಯವಾಗಿ ಕ್ರಮಾಗತವಾಗಿ ಚರ್ಚಿಸುವ ಮೊದಲು ಪವಿತ್ರ ಖುರ್‌ಆನಿನ ಬಗ್ಗೆ ಒಂದು ಸೈದ್ಧಾಂತಿಕ ನಿಲುವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಪವಿತ್ರ ಖುರ್‌ಆನ್ ದೇವನು ಅವತೀರ್ಣಗೊಳಿಸಿದ ಅಂತಿಮ ನ್ಯಾಯ ಪ್ರಮಾಣ ಗ್ರಂಥವಾಗಿದೆ. ಅದು ತನ್ನ ಅವತೀರ್ಣಗೊಳಿಸಲ್ಪಡುವಿಕೆಯ ಕಾಲದಿಂದ ಇಂದಿನವರೆಗೆ ಶಬ್ದ ಪ್ರತಿಶಬ್ದ ಸಂರಕ್ಷಿಸಲ್ಪಟ್ಟಿದೆ. ಅದು ಅಂತಿಮ ಕಾಲದ ತನಕ ಹಾಗೆಯೇ ಸಂರಕ್ಷಿಸಲ್ಪಟ್ಟು ದೇವನ ಇಚ್ಛೆಗೆ ಅನುಸಾರವಾಗಿ ಇರುವುದು. ಪವಿತ್ರ ಖುರ್‌ಆನಿಗೆ ಮೊದಲು ಅವತೀರ್ಣವಾದ ಯಾವ ಗ್ರಂಥದ ಬಗ್ಗೆಯೂ ಅದು ಸಂರಕ್ಷಿಸಲ್ಪಡುವುದೆಂಬ ದೈವಿಕ ವಾಗ್ದಾನವು ಇರಲಿಲ್ಲ. ಪವಿತ್ರ ಖುರ್‌ಆನಿನ ಹೊರತು ಅನ್ಯ ಧಾರ್ಮಿಕ ಗ್ರಂಥಗಳ ಉಪದೇಶಗಳು ತಾತ್ಕಾಲೀನವಾಗಿದ್ದುವು. ಆದುದರಿಂದ ಅವುಗಳಲ್ಲಿದ್ದ ಉಪದೇಶಗಳು ಮಾನವರ ಹಸ್ತಕ್ಷೇಪದಿಂದ ಸಂರಕ್ಷಿಸಲ್ಪಡಲಿಲ್ಲ. ಅವುಗಳಲ್ಲಿ ಮಾರ್ಪಾಡುಗಳು ಉಂಟಾದುವು. ಆದುದರಿಂದ ಆ ಗ್ರಂಥಗಳು ಸಂಪೂರ್ಣವಾಗಿ ದೇವನಿಂದ ಅವತೀರ್ಣಗೊಂಡಿವೆಯೋ ಎಂಬ ವಿಷಯವು ಅತ್ಯಂತ ಸಂದೇಹಾಸ್ಪದವಾದುವು. ಬೈಬಲಿನ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಯಾವ ವಾಕ್ಯ ಪೂರ್ಣವಾಗಿ ದೇವವಾಣಿ ಎಂದು ಯಾರಿಗೂ ನಿಖರವಾಗಿ ಹೇಳಲು ಸಾಧ್ಯವಿಲ್ಲ.

ಆದುದರಿಂದ ಪವಿತ್ರ ಖುರ್‌ಆನ್‌ನಲ್ಲಿ ಹಿಂದಿನ ಗ್ರಂಥಗಳಲ್ಲಿರುವ ಶಾಶ್ವತ ಸತ್ಯಗಳನ್ನು ಸಂಗ್ರಹಿಸಲಾಗಿದೆ. ಜನರಿಗೆ ಲಾಭಕರವಾದ ಉತ್ತಮ ಉಪದೇಶಗಳನ್ನು ಆಯ್ದುಕೊಂಡು ಅವುಗಳನ್ನು ಆಯಾ ಕಾಲದ ಆವಶ್ಯಕತೆಗಳಿಗೆ ಅನುಸಾರವಾಗಿ ಉತ್ತಮ ರೀತಿಯಲ್ಲಿ ವಿವರಿಸಲಾಗಿದೆ. ಪವಿತ್ರ ಖುರ್‌ಆನ್ ತನಗಿಂತ ಹಿಂದಿನ ಗ್ರಂಥಗಳ ಶಾಶ್ವತ ಮೌಲ್ಯಗಳುಳ್ಳ ಉಪದೇಶಗಳನ್ನು ಒಳಗೊಂಡ ಬಗ್ಗೆ ಹೀಗೆ ಹೇಳಿದೆ:

"ಅದರಲ್ಲಿ ಶಾಶ್ವತವಾದ ಆಜ್ಞೆಗಳಿವೆ." (ಪವಿತ್ರ ಖುರ್‌ಆನ್ 98 : 4)

ಇದರಲ್ಲಿ ಶಾಶ್ವತವಾಗಿ ನಿಲ್ಲುವ ಗ್ರಂಥಗಳು ಎಂದರೆ ಹಿಂದಿನ ಗ್ರಂಥಗಳಲ್ಲಿ ಅಡಕವಾಗಿದ್ದ ಶಾಶ್ವತ ಸತ್ಯಗಳು ಇದರಲ್ಲೂ ಇವೆ.

ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"ನಾವು ನಿಮಗೆ ಸತ್ಯದಿಂದ ಕೂಡಿದ ಈ ಗ್ರಂಥವನ್ನು, ಇದಕ್ಕಿಂತ ಹಿಂದಿನ ಗ್ರಂಥದಲ್ಲಿರುವುದನ್ನು ದೃಢೀಕರಿಸುವ ಮತ್ತು ಅದನ್ನು ಸಂರಕ್ಷಿಸುವಂಥದನ್ನಾಗಿ ಅವತೀರ್ಣಗೊಳಿಸಿರುವೆವು. ಆದುದರಿಂದ, ಅಲ್ಲಾಹನು ಅವತೀರ್ಣಗೊಳಿಸಿದುದರ ಪ್ರಕಾರ ನೀನು ಅವರ ಮಧ್ಯೆ ತೀರ್ಮಾನಿಸು. ನಿನಗೆ ಲಭ್ಯವಾಗಿರುವ ಸತ್ಯವನ್ನು ಬಿಟ್ಟು ಅವರ ಸ್ವೇಚ್ಛಾಚಾರಗಳನ್ನು ಅನುಸರಿಸಬೇಡ." (5:49)

ಪವಿತ್ರ ಖುರ್‌ಆನಿನ ಈ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಅದು ಹಿಂದಿನ ದೈವಿಕ ಗ್ರಂಥಗಳಲ್ಲಿರುವ ಶಾಶ್ವತ ಸತ್ಯಗಳನ್ನು ಸಂರಕ್ಷಿಸುತ್ತದೆ; ಅದರ ಮೇಲ್ವಿಚಾರಣೆ ಮಾಡುತ್ತದೆ ಮತ್ತು ಅದು ಅದರ ಸತ್ಯದ ಬಗ್ಗೆ ಸಾಕ್ಷ್ಯ ನೀಡುತ್ತದೆ. ಆದರೆ ಪವಿತ್ರ ಖುರ್‌ಆನ್ ಹಿಂದಿನ ಗ್ರಂಥಗಳಲ್ಲಿರುವ ಶಾಶ್ವತ ಸತ್ಯಗಳನ್ನು ಅಂಗೀಕರಿಸುತ್ತದೆ. ಮಾತ್ರವಲ್ಲ ಅದು ಆ ವಿಷಯಗಳಲ್ಲಿ ತನ್ನ ಅತ್ಯುನ್ನತ ಮಾನದಂಡವನ್ನು ಸ್ಥಾಪಿಸುತ್ತದೆ. ಇದನ್ನು ಉದಾಹರಣೆ ಮೂಲಕ ಚೆನ್ನಾಗಿ ಮನವರಿಕೆ ಮಾಡಬಹುದು: ಪವಿತ್ರ ಖುರ್‌ಆನ್‌ಗಿಂತ ಹಿಂದಿನ ಮತಗ್ರಂಥಗಳಲ್ಲಿ ಏಕದೇವ ವಿಶ್ವಾಸದ ಉಪದೇಶ ಕಾಣಬಹುದಾಗಿದೆ ಮತ್ತು ಅದರ ಬಗ್ಗೆ ಒತ್ತಿ ಹೇಳಲಾಗುತ್ತದೆ. ದೇವನು ಏಕನೆಂಬ ಶಾಶ್ವತ ಸತ್ಯವನ್ನು ಪವಿತ್ರ ಖುರ್‌ಆನ್ ಸಂರಕ್ಷಿಸಿತು ಮತ್ತು ಪ್ರಕಟಿಸಿತು: "ಹೇಳು: ಅಲ್ಲಾಹನು ಏಕನು." (112 : 2)

ಇಲ್ಲಿಯತನಕ ಪವಿತ್ರ ಖುರ್‌ಆನ್ ಮತ್ತು ಅನ್ಯಧಾರ್ಮಿಕ ಗ್ರಂಥಗಳ ಉಪದೇಶ ಒಂದೇ ಆಗಿದೆ. ಆದರೆ ಪವಿತ್ರ ಖುರ್‌ಆನಿನ ವೈಶಿಷ್ಟ್ಯವೇನೆಂದರೆ, ಏಕನಾದ ದೇವನು ಎಂತಹವನು; ಅವನ ಗುಣಗಳೇನು ಎಂದು ಪೂರ್ಣ ವಿವರಣೆ ನೀಡಿತು. ಅದು "ಅಲ್ಲಾಹನು

ಏಕನು ಎಂದು ಹೇಳುವುದರ ಜೊತೆಗೆ ಹೀಗೆ ಪ್ರಕಟಿಸಿತು:

"ಅವನು ನಿರಪೇಕ್ಷನು (ಮತ್ತು ಎಲ್ಲರಿಗೂ ಆಶ್ರಯದಾತನು)

ಅವನು ಜನಕನಲ್ಲ; ಜಾತನೂ ಅಲ್ಲ.

ಅವನಿಗೆ ಸಮನಾಗಿ ಯಾರೂ ಇಲ್ಲ." (112 : 3-5)

ಪವಿತ್ರ ಖುರ್‌ಆನ್‌ಗಿಂತ ಮೊದಲಿನ ಧಾರ್ಮಿಕ ಗ್ರಂಥಗಳಲ್ಲಿ ವಿಗ್ರಹಾರಾಧನೆಯನ್ನು ಖಂಡಿಸಲಾಗಿದೆ. ವಿಗ್ರಹಗಳನ್ನು ನಿಂದಿಸಲಾಗಿದೆ. ಅವುಗಳನ್ನು ಬೈಯಲಾಗಿದೆ. ಕೆಲವು ಗ್ರಂಥಗಳಲ್ಲಿ ವಿಗ್ರಹಗಳನ್ನು ಸುಡಲು ಮತ್ತು ಮುರಿದು ಹಾಕಲು ಉಪದೇಶಿಸಲಾಗಿದೆ. ಆದರೆ ಪವಿತ್ರ ಖುರ್‌ಆನ್ ಏಕದೇವ ವಿಶ್ವಾಸವನ್ನು ಉಪದೇಶಿಸುವ ಜೊತೆಗೆ ಆರಾಧ್ಯಮೂರ್ತಿಗಳನ್ನು ನಿಂದಿಸುವುದನ್ನು ನಿಷಿದ್ಧಗೊಳಿಸಿದೆ. ಏಕೆಂದರೆ ಅವುಗಳನ್ನು ನಿಂದಿಸಿದರೆ ಅವುಗಳನ್ನು ಪೂಜಿಸುವವರು ಏಕದೇವನನ್ನು ನಿಂದಿಸುವರೆಂದು ಹೇಳಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ನೋಡಿರಿ;

"ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು." (6 : 109)

ಮನುಷ್ಯರ ಸ್ವಭಾವ ಗುಣಗಳಿಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹಿಂದಿನ ಧರ್ಮಗ್ರಂಥಗಳ ಉಪದೇಶಗಳನ್ನು ಔನ್ನತ್ಯಕ್ಕೆ ತಲಪಿಸಿದೆ. ಹಿಂದಿನ ಒಂದು ಗ್ರಂಥವು "ನಿಮ್ಮ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಒಡ್ಡು" ಎಂದು ಹೇಳಿದುದಕ್ಕೆ ಎದುರಾಗಿ ಪವಿತ್ರ ಖುರ್‌ಆನ್: ಈ ಉಪದೇಶವನ್ನು ಎಲ್ಲಾ ಕಾಲಗಳಲ್ಲೂ ಅನುಸರಿಸುವುದು ಮನುಷ್ಯ ಪ್ರಕೃತಿಗೆ ವಿರುದ್ಧವಾಗಿದೆ. ಆದುದರಿಂದ ಯಾರಿಗಾದರೂ ಅಪರಾಧಕ್ಕೆ ಅನುಯೋಜ್ಯವಾದ ಶಿಕ್ಷೆ ನೀಡುವುದಾದರೆ ಅದು ಅಪರಾಧಕ್ಕೆ ಗುರಿಯಾದವರ ಹಕ್ಕು ಆಗಿದೆ ಎಂದೂ ಆದರೆ ಕ್ಷಮಿಸುವುದು ಉತ್ತಮವೆಂದೂ ಹೇಳುತ್ತದೆ.

ಬೈಬಲ್ ಹೇಳುತ್ತದೆ:

"ಒಬ್ಬ ಸ್ತ್ರೀ ಗಂಡು ಮಗುವನ್ನು ಹೆತ್ತರೆ ತಾನು ತಿಂಗಳ ಮುಟ್ಟಿನಿಂದ ಹೇಗೆ ಅಶುದ್ಧಳಾಗುವಳೋ ಹಾಗೆಯೇ ಏಳು ದಿನಗಳ ಕಾಲ ಅಶುದ್ಧಳಾಗಿರಬೇಕು." (ಯಾಜಕ ಕಾಂಡ 12 : 2)

ಆದರೆ ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಋತುಸ್ರಾವ ಮತ್ತು ಹೆರಿಗೆಯಾದ ಕಾಲದಲ್ಲಿ ಮಹಿಳೆಯರು ಬಹಳ ಕಷ್ಟದಲ್ಲಿರುತ್ತಾರೆ. ಅಂತಹ ಕಾಲದಲ್ಲಿ ದೈಹಿಕ ಸಂಪರ್ಕವು ರೋಗಹೇತುವಾಗುತ್ತದೆ. ಆದುದರಿಂದ ಆ ಸಂದರ್ಭಗಳಲ್ಲಿ ಲೈಂಗಿಕ ಸಂಪರ್ಕವು ನಿಷಿದ್ಧವಾಗಿದೆ. ಆದರೆ ಆ ಸಂದರ್ಭದಲ್ಲಿ ಮಹಿಳೆಯರನ್ನು ಭೇಟಿಯಾಗುವುದು, ಮಾತನಾಡುವುದು, ಹಸ್ತಲಾಘವ ಮಾಡುವುದು ಅನುಮತಿಸಲಾಗಿದೆ.

ಪವಿತ್ರ ಖುರ್‌ಆನಿನ ವೈಶಿಷ್ಟ್ಯವೇನೆಂದರೆ, ಅದು ಹಿಂದಿನ ಧಾರ್ಮಿಕ ಗ್ರಂಥಗಳ ಶಾಶ್ವತ ಮೌಲ್ಯವುಳ್ಳ ಉಪದೇಶಗಳನ್ನು ತನ್ನಲ್ಲಿ ಸಂರಕ್ಷಿಸಿತು ಮತ್ತು ಅವುಗಳನ್ನು ಔನ್ನತ್ಯಕ್ಕೆ ಎತ್ತಿತು. ಆದರೆ ದ್ವೇಷಭರಿತ ಪಾದರಿಗಳು, ಪವಿತ್ರ ಖುರ್‌ಆನಿನಲ್ಲಿ ಹಿಂದಿನ ಧಾರ್ಮಿಕ ಗ್ರಂಥಗಳ ಉಪದೇಶಗಳನ್ನು, ವಿಶಿಷ್ಟವಾಗಿ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯಲ್ಲಿನ ಉಪದೇಶಗಳನ್ನು ತನ್ನಲ್ಲಿ ಸೇರಿಸಿಕೊಂಡಿದೆ ಎಂದು ಆಕ್ಷೇಪಿಸುತ್ತಾರೆ. ಆದರೆ ಅವರು ಹೇಳುವುದು ಸಂಪೂರ್ಣ ತಪ್ಪಾಗಿದೆ. ಆಲೋಚಿಸಬೇಕಾದ ವಿಷಯವೇನೆಂದರೆ, ಅವರು ಹೇಳುತ್ತಾರೆ: ಪವಿತ್ರ ಖುರ್‌ಆನ್ ಹಿಂದಿನ ಧಾರ್ಮಿಕ ಗ್ರಂಥಗಳಾದ ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯಿಂದ ಕೃತಿ ಚೋರತನ ಮಾಡಿದೆ. ಆದರೆ ಪವಿತ್ರ ಖುರ್‌ಆನ್ ಕೃತಿಚೌರ್ಯ ಮಾಡಿದುದು ಯಾವುದನ್ನು ಎಂದು ಅವರು ವಿವರಿಸುವುದಿಲ್ಲ.

ಇಂದಿನ ಕ್ರೈಸ್ತ ಧರ್ಮದಲ್ಲಿ ಮೂರು ಮೂಲಭೂತ ಸ್ತಂಭಗಳಿವೆ : 1. ದೇವಪುತ್ರ 2. ಪಾಪ ಪರಿಹಾರ 3. ತ್ರೀತ್ವ.

ಪವಿತ್ರ ಖುರ್‌ಆನ್ ಇವು ಮೂರನ್ನೂ ಖಂಡಿಸಿದೆ. ಪವಿತ್ರ ಖುರ್‌ಆನ್ ಬೈಬಲ್‌ನಿಂದ ಯಾವುದಾದರೂ ವಿಷಯವನ್ನು ಎತ್ತಿಕೊಂಡಿದ್ದರೆ ಈ ವಿಷಯಗಳಿಗೆ ಬೆಂಬಲವನ್ನು ಸೂಚಿಸಬೇಕಾಗಿತ್ತು. ಪವಿತ್ರ ಖುರ್‌ಆನ್ ಯಹೂದಿಯರ ಮತ್ತು ಕ್ರೈಸ್ತಧರ್ಮದವರ ನಂಬಿಕೆಗಳನ್ನು ವಿವರಿಸಿ ಅವುಗಳನ್ನು ಖಂಡಿಸಿದೆ.

ಯಹೂದಿಯರು ಒಂದು ಕಾಲದಲ್ಲಿ ತಮ್ಮ ಧರ್ಮದ ತತ್ವವನ್ನು ಮರೆತು ಉಝೈರ್(ಎಜ್ರ)ನ ಬಗ್ಗೆ ದೇವಪುತ್ರನೆಂದು ಹೇಳುತ್ತಿದ್ದರು. ಕ್ರೈಸ್ತರು ಯೇಸು ಕ್ರಿಸ್ತರನ್ನು ದೇವಕುಮಾರ ಎಂದೂ ಸ್ವತಃ ದೇವನೆಂದೂ ಹೇಳುತ್ತಾರೆ. ಅವರು ಮೂವರು ದೇವರು ಎಂಬ ನಂಬಿಕೆ ಹೊಂದಿದ್ದಾರೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಉಝೈರ್ (ಎಜ್ರ) ದೇವಸುತನೆಂದು ಯಹೂದಿಯರು ಹೇಳುತ್ತಾರೆ. ಮಸೀಹ್ (ಯೇಸು) ದೇವಸುತನೆಂದು ಕ್ರೈಸ್ತರೂ ಹೇಳುತ್ತಾರೆ. ಅವು ಅವರ ಬಾಯಿಮಾತುಗಳು ಮಾತ್ರವಾಗಿವೆ. ಅವರು ತಮಗಿಂತ ಹಿಂದಿನ ಕೆಲವು ಅವಿಶ್ವಾಸಿಗಳನ್ನು ಅನುಕರಿಸುತ್ತಾರೆ." (9 :30)

ಇನ್ನೊಂದು ವಚನ ಹೀಗಿದೆ:

"ಖಂಡಿತವಾಗಿಯೂ ಮರ್ಯಮ್ ಪುತ್ರ ಮಸೀಹ್ ದೇವನೆಂದು ಹೇಳುವವರು ನಿಸ್ಸಂಶಯವಾಗಿಯೂ ಅವಿಶ್ವಾಸಿಗಳಾಗಿದ್ದಾರೆ." (5 : 18)

ಪವಿತ್ರ ಖುರ್‌ಆನ್ ಇನ್ನೊಂದು ಕಡೆ ಹೀಗೆ ಹೇಳಿದೆ:

"ಓ ಗ್ರಂಥದವರೇ, ನೀವು ನಿಮ್ಮ ಧರ್ಮಕಾರ್ಯಗಳಲ್ಲಿ ಮಿತಿಮೀರಬೇಡಿರಿ. ಅಲ್ಲಾಹನ ಬಗ್ಗೆ ಸತ್ಯವನ್ನಲ್ಲದೆ ನೀವು ಹೇಳಬೇಡಿರಿ. ದಿಟವಾಗಿಯೂ ಮರ್ಯಮ್ ಪುತ್ರ ಈಸಾ ಮಸೀಹ್ ಅಲ್ಲಾಹನ ಕೇವಲ ಒಬ್ಬ ಸಂದೇಶವಾಹಕನಾಗಿದ್ದರು. ಅವರು ಮರ್ಯಮ್‌ರಿಗೆ ಅವನು ಅವತೀರ್ಣಗೊಳಿಸಿದ ವಚನದ ಈಡೇರಿಕೆಯೂ ಒಂದು ಅನುಗ್ರಹವೂ ಆಗಿದ್ದರು. ಆದುದರಿಂದ ನೀವು ಅಲ್ಲಾಹನಲ್ಲೂ ಅವನ ಎಲ್ಲಾ ಸಂದೇಶವಾಹಕರಲ್ಲೂ ವಿಶ್ವಾಸವಿಡಿರಿ. '(ದೇವರು) ಮೂವರು' ಎಂದು ನೀವು ಹೇಳಬೇಡಿರಿ. ನೀವು (ಹಾಗೆ ಹೇಳುವುದನ್ನು) ಬಿಟ್ಟು ಬಿಡಿರಿ. (ಅದು) ನಿಮಗೆ ಗುಣಕರ. ನಿಸ್ಸಂದೇಹವಾಗಿಯೂ ಅಲ್ಲಾಹನು ಒಬ್ಬನೇ ದೇವ. ಅವನಿಗೆ ಸಂತಾನವುಂಟಾಗುವುದೆಂಬುದು ಅವನ ಪರಿಶುದ್ಧತೆಗೆ ಎಷ್ಟೋ ದೂರದ ಮಾತು. ಆಕಾಶಗಳಲ್ಲಿರುವ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿದೆ. ರಕ್ಷಕನಾಗಿ ಅಲ್ಲಾಹನೇ ಸಾಕು." (ಪವಿತ್ರ ಖುರ್‌ಆನ್ 4 : 172)

ಯಹೂದಿಯರು ಯೇಸು ಮಸೀಹರನ್ನು ಶಿಲುಬೆಗೇರಿಸಿ ಕೊಂದರೆಂದೂ ಈ ರೀತಿ ಮಸೀಹ್ ನಮ್ಮ ಪಾಪಗಳಿಗೋಸ್ಕರ ಪರಿಹಾರವಾಗಿ ಶಿಲುಬೆಯಲ್ಲಿ ಪ್ರಾಣತೆತ್ತರೆಂದೂ ಕ್ರೈಸ್ತರು ಹೇಳುತ್ತಾರೆ.

ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ವಾಸ್ತವದಲ್ಲಿ ಅವರು ಅವರನ್ನು (ಮಸೀಹರನ್ನು) ವಧಿಸಲಿಲ್ಲ, ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ. ಆದರೆ ಅವರು ಹಾಗೆ (ಶಿಲುಬೆಯ ಮೇಲೆ ಮೃತಪಟ್ಟಂತೆ) ಅವರಿಗೆ ತೋರಿಸಲ್ಪಟ್ಟರು." (4 : 158)

ಯೇಸು ಮಸೀಹರು ಶಿಲುಬೆಯಲ್ಲಿ ಮೃತರಾಗಿ ಜನರ ಪಾಪಗಳಿಗೋಸ್ಕರ ಪರಿಹಾರವಾದರು ಎಂಬ ನಂಬಿಕೆಯನ್ನು ಪವಿತ್ರ ಖುರ್‌ಆನ್ ಈ ರೀತಿ ಸರಿಪಡಿಸಿತು.

ಪವಿತ್ರ ಖುರ್‌ಆನ್ ಪಾಪ ಪರಿಹಾರದ ಬಗ್ಗೆ ಹೀಗೆ ಸೈದ್ಧಾಂತಿಕವಾಗಿ ಸ್ಪಷ್ಟಪಡಿಸಿತು:

"ಯಾವುದೇ ಭಾರ ಹೊರುವ ಜೀವ ಇನ್ನೊಂದು ಜೀವದ ಭಾರವನ್ನು ಹೊರಲಾರದು."

**ಪವಿತ್ರ ಖುರ್‌ಆನ್ ಈ ರೀತಿ ಸೈದ್ಧಾಂತಿಕ ನಿಲುವನ್ನು ಪ್ರಸ್ತಾಪಿಸುತ್ತಿರುವಾಗ ಅದು ಹಿಂದಿನ ಕಾಲದ ಉಪದೇಶಗಳನ್ನೇ ವಿವರಿಸುತ್ತದೆ ಎಂದು ಹೇಳುವುದು ಸುಳ್ಳು ಆರೋಪವಲ್ಲದೆ ಇನ್ನೇನೂ ಅಲ್ಲ.**

**ಉತ್ತರ ಸಂಖ್ಯೆ : 2**

ಪವಿತ್ರ ಖುರ್‌ಆನ್‌ನಲ್ಲಿ ಹಿಂದಿನ ಧರ್ಮಶಾಸ್ತ್ರಗಳ ಉಪದೇಶಗಳು ಅಡಕವಾಗಿರುವುದರಿಂದ ಅದು ದೇವವಾಣಿಯಲ್ಲ ಎಂಬ ಆಕ್ಷೇಪಕ್ಕೆ ಇನ್ನೊಂದು ಉತ್ತರ ಹೀಗಿದೆ:

ಈ ಸಿದ್ಧಾಂತವನ್ನು ಅಂಗೀಕರಿಸುವುದಾದರೆ ಸುವಾರ್ತೆಗಳು ಸಹ ದೇವವಾಣಿಗಳಲ್ಲ ಎಂದು ಒಪ್ಪಬೇಕಾಗುತ್ತದೆ. ಏಕೆಂದರೆ ಸುವಾರ್ತೆಗಳ ಬಗ್ಗೆ ಯಹೂದಿ ವಿದ್ವಾಂಸರು ತಮ್ಮ ಸಂಶೋಧಕ ಗ್ರಂಥಗಳಲ್ಲಿ ಹೀಗೆ ಸಾಬೀತುಗೊಳಿಸಿದ್ದಾರೆ:

"ಸುವಾರ್ತೆಗಳ ಇಂತಿಂತಹ ಉಪದೇಶಗಳು ಮೂಸಾ ಪ್ರವಾದಿಯ ಗ್ರಂಥದಿಂದ ಕೃತಿ ಚೌರ್ಯ ಮಾಡಿದುದಾಗಿದೆ. ವಿಶಿಷ್ಟವಾಗಿ ಪರ್ವತ ಪ್ರಸಂಗದ ಬಗ್ಗೆ ಕ್ರೈಸ್ತರಿಗೆ ಬಹಳ ಅಭಿಮಾನವಿದೆ. ಅದಕ್ಕಿಂತಲೂ ಹಿರಿದಾದ ನೈತಿಕ ಉಪದೇಶ ಬೇರೆ ಇಲ್ಲ ಎಂದು ಅವರು ಹೇಳುತ್ತಾರೆ. ಇದರ ಬಗ್ಗೆ ಯಹೂದಿ ವಿದ್ವಾಂಸರು ಹೀಗೆ ಸಾಬೀತುಗೊಳಿಸಿದ್ದಾರೆ: ಈ ಉಪದೇಶಗಳ ಪದ ಪದಗಳು ತಾಲ್‌ಮೂದ್ ಮತ್ತು ಇತರ ಯಹೂದಿ ಗ್ರಂಥಗಳಿಂದ ನಕಲು ಮಾಡಲಾಗಿದೆ. ಕೃತಿ ಚೌರ್ಯ ಎಷ್ಟು ಸ್ಪಷ್ಟವಾಗಿದೆ ಎಂದರೆ ಪದ ಪುಂಜಗಳನ್ನೇ ಯಥಾವತ್ತಾಗಿ ನಕಲು ಮಾಡಲಾಗಿದೆ."

ಹಿಂದಿನ ಗ್ರಂಥಗಳ ಉಪದೇಶಗಳು ಅಡಕವಾಗಿರುವುದರಿಂದ ಮಾನವ ಸೃಷ್ಟಿ ಎಂದು ಆಕ್ಷೇಪಿಸುವುದಾದರೆ, ಸುವಾರ್ತೆಗಳ ಬಗ್ಗೆ ಅವರ ತೀರ್ಪು ಏನೆಂದು ತಿಳಿಯಲು ಬಯಸುತ್ತೇವೆ.

ಚರ್ಚ್ ಸುವಾರ್ತೆಗಳ ಬಗ್ಗೆ ಯಾವ ತೀರ್ಪು ನೀಡುವುದಾದರೂ ಸರಿ, ಪವಿತ್ರ ಖುರ್‌ಆನ್ ಹದಿನಾಲ್ಕು ನೂರು ವರ್ಷಗಳ ಹಿಂದೆ ಹೀಗೆ ಹೇಳಿತು:

"'ನಾವು ಕ್ರಿಸ್ತೀಯರು' ಎಂದು ಹೇಳುವವರಿಂದ ಸಹ ನಾವು ಕರಾರು ಪಡೆದಿದ್ದೆವು. ಆದರೆ ಅವರಿಗೆ ನೀಡಲಾದ ಉಪದೇಶಗಳಿಂದ ಒಂದಂಶವನ್ನು ಅವರು (ಸಹ) ಮರೆತುಬಿಟ್ಟರು." (5:15)

ತಮ್ಮ ಮರೆತುಬಿಡುವಿಕೆಯನ್ನು ಅಡಗಿಸಲು ತಮ್ಮ ಗ್ರಂಥ ಮತ್ತು ಉಪದೇಶಗಳ ಬಗ್ಗೆ ವರ್ತಿಸಿದ ರೀತಿಯನ್ನು ಸಹ ಪವಿತ್ರ ಖುರ್‌ಆನ್ ಹೀಗೆ ವಿವರಿಸಿದೆ:

"ಅವರು (ದೈವಿಕ) ವಚನಗಳನ್ನು ಸ್ಥಾನಪಲ್ಲಟಗೊಳಿಸುತ್ತಾರೆ ಹಾಗೂ ಅವರಿಗೆ ಉಪದೇಶಿಸಲಾದ ವಿಚಾರಗಳಲ್ಲಿ ಒಂದಂಶವನ್ನು ಅವರು ಮರೆತು ಬಿಟ್ಟಿದ್ದಾರೆ. ಅವರಲ್ಲಿ ಕೆಲವರನ್ನು ಬಿಟ್ಟು ಉಳಿದವರ ಏನಾದರೂ ವಂಚನೆಯ ಬಗ್ಗೆ ಸದಾ ನಿನಗೆ ಸಮಾಚಾರ ಲಭಿಸುವುದು." (5 : 14)

ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಈ ಮೂಲಕ ಸೂಚಿಸುವುದೇನೆಂದರೆ.

ಹಿಂದಿನ ಕಾಲದ ಗ್ರಂಥಗಳನ್ನು ಮತ್ತು ಉಪದೇಶಗಳನ್ನು ಅನುಸರಿಸುವವರು ತಮಗೆ ದೊರೆತ ಉಪದೇಶಗಳನ್ನು ಮರೆತುಬಿಡುತ್ತಾ ಇರುತ್ತಾರೆ ಮತ್ತು ತಮ್ಮ ಧಾರ್ಮಿಕ ಗ್ರಂಥಗಳಲ್ಲಿ ಹಸ್ತಕ್ಷೇಪ ಮಾಡುತ್ತಾ ಇರುತ್ತಾರೆ. ಅವರ ಗ್ರಂಥಗಳಲ್ಲಿರುವ ಉಪದೇಶಗಳು ಸಹ ಅದರ ಹಿಂದಿನ ಗ್ರಂಥಗಳಿಂದ ತೆಗೆದುಕೊಂಡದ್ದು ಆಗಿರುತ್ತದೆ. ಆದುದರಿಂದ ಪವಿತ್ರ ಖುರ್‌ಆನ್ ಬಗ್ಗೆ ಆಕ್ಷೇಪಿಸುವುದು ಚಂದ್ರನನ್ನು ನೋಡಿ ಮೇಲಕ್ಕೆ ಉಗುಳಿದಂತೆ ಆಗುತ್ತದೆ.

**ಉತ್ತರ ಸಂಖ್ಯೆ : 3**

ಪವಿತ್ರ ಖುರ್‌ಆನ್‌ನಲ್ಲಿ ಹಿಂದಿನ ಕಾಲದ ಧಾರ್ಮಿಕ ಗ್ರಂಥಗಳಿಂದ ತೆಗೆದುಕೊಂಡ ಉಪದೇಶಗಳು ಅಡಕವಾಗಿವೆ; ಆದುದರಿಂದ ಅದು ದೇವ ವಾಣಿಯಲ್ಲ ಎಂಬ ಆಕ್ಷೇಪವು ತಪ್ಪಾಗಿದೆ. ಏಕೆಂದರೆ ಪವಿತ್ರ ಖುರ್‌ಆನಿನ ಉಪದೇಶಗಳು ಹಿಂದಿನ ಗ್ರಂಥಗಳಿಂದ ತೆಗೆದುಕೊಂಡವುಗಳು ಅಲ್ಲ. ಇದರ ಬಗ್ಗೆ ಸಾಕ್ಷ್ಯಾಧಾರ ನೀಡಬೇಕಾದುದು ಆಕ್ಷೇಪಗಾರನಾಗಿದ್ದಾನೆ. ಆಕ್ಷೇಪ ಮಾಡುವವನು ಯಾವ ಗ್ರಂಥವನ್ನು ಅಧಿಕೃತ ಎಂದು ಹೇಳಿ ಅದರಿಂದ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಚುರಾಯಿಸಲಾಗಿದೆ ಎಂದು ಹೇಳುತ್ತಾನೋ ಆ ಮೂಲಗ್ರಂಥದ ಅಧಿಕೃತೆಯನ್ನು ಅವನು ಸಾಬೀತುಪಡಿಸಬೇಕಾಗಿದೆ. ಉದಾಹರಣೆಗೆ, ಒಬ್ಬನು ಪವಿತ್ರ ಖುರ್‌ಆನ್ ಸುವಾರ್ತೆಗಳಿಂದ ತೆಗೆದುಕೊಂಡ ಉಪದೇಶಗಳನ್ನು ಹೊಂದಿವೆ ಎಂದು ಹೇಳುವುದಾದರೆ, ಪವಿತ್ರ ಖುರ್‌ಆನ್ ಸುವಾರ್ತೆಯ ಯಾವ ಉಪದೇಶವನ್ನು ತೆಗೆದುಕೊಂಡಿದೆ ಎಂದು ಸಾಬೀತುಗೊಳಿಸಬೇಕಾದುದು ಆವಶ್ಯಕವಾಗಿದೆ. ಮತ್ತಾಯನ ಸುವಾರ್ತೆಯದ್ದೋ ಮಾರ್ಕ, ಲೂಕ ಮತ್ತು ಯೋಹಾನನ ಸುವಾರ್ತೆಯದ್ದೋ ಎಂದು ಸ್ಪಷ್ಟಪಡಿಸಬೇಕು. ಈ ನಾಲ್ಕು ಸುವಾರ್ತೆಗಳ ನಿಖರತೆ ಮತ್ತು ಅಧಿಕೃತತೆ ಸ್ಪಷ್ಟವಾಗಿಲ್ಲದಿರುವಾಗ ಪಾದರಿ ಅಥವಾ ಚರ್ಚ್ ಪವಿತ್ರ ಖುರ್‌ಆನ್ ಬೈಬಲ್‌ನಿಂದ ತೆಗೆದುಕೊಂಡ ಉಪದೇಶಗಳಿಂದ ತುಂಬಿದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ?

ಪಾದರಿಗಳ ಧಾರ್ಮಿಕ ಗ್ರಂಥಗಳ ಸಾಚಾತನದ ಬಗ್ಗೆ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬ್ ಹೀಗೆ ಹೇಳುತ್ತಾರೆ:

"ನಿಮಗೆ ನೆನಪಿರಲಿ. ಪಾದರಿಗಳ ಧಾರ್ಮಿಕ ಗ್ರಂಥಗಳ ಸಂಗ್ರಹ ಎಂತಹ ನಿರುಪಯೋಗಿ ಸಂಗ್ರಹ ಎಂದರೆ ಅದರ ಬಗ್ಗೆ ನಾಚಿಗೆಪಡುವಂತಹದ್ದಾಗಿದೆ. ಅವರು ತಮ್ಮದೇ ಊಹೆಯ ಪ್ರಕಾರ ಕೆಲವು ಗ್ರಂಥಗಳನ್ನು ದೈವಿಕ ಎಂದು ಹೇಳುತ್ತಾರೆ ಮತ್ತು ಬೇರೆ ಕೆಲವನ್ನು ಕೃತ್ರಿಮ ಎಂದು ಹೇಳುತ್ತಾರೆ. ಅವರ ಅಭಿಪ್ರಾಯ ಪ್ರಕಾರ ಈ ನಾಲ್ಕು ಸುವಾರ್ತೆಗಳು ಅಪ್ಪಟ ಎಂದು ಹೇಳುತ್ತಾರೆ. ಉಳಿದ ಅಂದಾಜು ಐವತ್ತಾರು ಸುವಾರ್ತೆಗಳನ್ನು ಕೃತ್ರಿಮ ಎಂದೆನ್ನುತ್ತಾರೆ. ಅವರು ಹೀಗೆ ಹೇಳುವುದು ಊಹಾಪೋಹಗಳನ್ನು ಅವಲಂಬಿಸಿಯಾಗಿದೆ. ಅವರಿಗೆ ಅದರ ಬಗ್ಗೆ ದೃಢವಾದ ಸಾಕ್ಷ್ಯಾಧಾರಗಳಿಲ್ಲ. ಇಂದು ಅಧಿಕೃತವೆಂದು ಹೇಳಲ್ಪಡುವ ಸುವಾರ್ತೆಗಳು ಮತ್ತು ಇತರ ಸುವಾರ್ತೆಗಳಲ್ಲಿ ವೈರುಧ್ಯಗಳಿವೆ. ಆದುದರಿಂದ ಅವರು ತಮ್ಮ ತಮ್ಮೊಳಗೆ ಹೀಗೆ ನಿರ್ಧರಿಸಿದ್ದಾರೆ ಮತ್ತು ಸಂಶೋಧಕರು ಅಭಿಪ್ರಾಯ ಹೇಳಿದ್ದಾರೆ: ಈ ಸುವಾರ್ತೆಗಳು ಕೃತ್ರಿಮವೋ ಆ ಸುವಾರ್ತೆಗಳು ಕೃತ್ರಿಮವೋ ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಎಡ್ವರ್ಡ್ ಚಕ್ರವರ್ತಿಯ ಕಿರೀಟಧಾರಣೆಯ ಸಂದರ್ಭದಲ್ಲಿ ಲಂಡನಿನ ಪಾದರಿಗಳು ಕೃತ್ರಿಮ ಎಂದು ಹೇಳಲಾಗುವ ಎಲ್ಲಾ ಸುವಾರ್ತೆಗಳನ್ನು ನಾಲ್ಕು ಸುವಾರ್ತೆಗಳ ಜೊತೆ ಒಂದು ಸಂಪುಟದಲ್ಲಿ ಜೊತೆ ಸೇರಿಸಿ ಚಕ್ರವರ್ತಿಗೆ ಶುಭಾಶಯ ಕೋರುತ್ತಾ ಅರ್ಪಿಸಿದರು. ಈ ಸಂಗ್ರಹಿತ ಸಂಪುಟದ ಒಂದು ಪ್ರತಿ ನಮ್ಮ ಬಳಿಯೂ ಇದೆ.

"ಚಿಂತಿಸಬೇಕಾದ ವಿಷಯವೇನೆಂದರೆ, ಆ ಸುವಾರ್ತೆಗಳು ಕೃತ್ರಿಮವೂ ಕೊಳಕೂ ಆಗಿದ್ದರೆ ಪವಿತ್ರ ಮತ್ತು ಅಪವಿತ್ರವಾದುದನ್ನು ಒಟ್ಟಿಗ ಸೇರಿಸಿ ಒಂದೇ ಸಂಪುಟದಲ್ಲಿ ಪ್ರಕಟಿಸಿರುವುದು ಎಷ್ಟು ದೊಡ್ಡ ಪಾಪಕೃತ್ಯವಾಗಿದೆ. ಆದರೆ ವಾಸ್ತವಿಕ ವಿಷಯವೇನೆಂದರೆ, ಹೃತ್ಪೂರ್ವಕವಾಗಿ ಯಾವುದೇ ಗ್ರಂಥದ ಬಗ್ಗೆ ಇದು ಸಾಚಾ, ಇದು ಕೃತ್ರಿಮ ಎಂದು ಹೇಳಲು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೆ ತಮ್ಮದೇ ಅಭಿಪ್ರಾಯವಿರುತ್ತದೆ." (ಚಶ್ಮಯೆ ಮಸೀಹ್ – ಪುಟ 9)

**ಉತ್ತರ ಸಂಖ್ಯೆ : 4**

ಪವಿತ್ರ ಖುರ್‌ಆನಿನ ಉಪದೇಶಗಳು ಹಿಂದಿನ ಕಾಲದ ಗ್ರಂಥಗಳ ಉಪದೇಶಗಳಿಂದ ತೆಗೆದುಕೊಂಡದ್ದಾಗಿದೆ ಎಂಬ ಆಕ್ಷೇಪಕ್ಕೆ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ನೀಡಿದ ಉತ್ತರ ಹೀಗಿದೆ:

"ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹಿಂದಿನ ಧಾರ್ಮಿಕ ಗ್ರಂಥಗಳಿಂದ ಉಪದೇಶಗಳನ್ನು ಚುರಾಯಿಸಿರುವರೆಂದು ಆರೋಪಿಸುವುದು ಶಾಪದಾಯಕ ಯೋಚನೆಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಿರಕ್ಷರರಾಗಿದ್ದರು. ಅವರು ಅರಬಿ ಭಾಷೆಯನ್ನು ಸಹ ಓದಲು ಅಸಮರ್ಥರಾಗಿದ್ದರು. ಇನ್ನು ಗ್ರೀಕ್ ಅಥವಾ ಹೀಬ್ರೂ ಭಾಷೆಯ ಬಗ್ಗೆ ಹೇಳಲಿಕ್ಕೇನಿದೆ. ನಮ್ಮ ಶತ್ರುಗಳು ಪವಿತ್ರ ಖುರ್‌ಆನಿನ ಉಪದೇಶಗಳು ಯಾವ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸುತ್ತಾರೋ ಆ ಮೂಲಗ್ರಂಥವನ್ನು ತೋರಿಸಿಕೊಡುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಪವಿತ್ರ ಖುರ್‌ಆನಿನಲ್ಲಿ ಯಾವುದಾದರೂ ಗ್ರಂಥದಿಂದ ಕೃತಿ ಚೌರ್ಯ ನಡೆಸಲಾಗಿದ್ದರೆ ಆ ಕಾಲದಲ್ಲಿ ಅರಬ್ ದೇಶದಲ್ಲಿದ್ದ ಕ್ರೈಸ್ತರು ಇಸ್ಲಾಮಿನ ಕಠಿಣ ಶತ್ರುಗಳಾಗಿದ್ದುದರಿಂದ ಕೂಡಲೇ ಬೊಬ್ಬೆ ಹೊಡೆಯುತ್ತಿದ್ದರು – ನಮ್ಮಿಂದ ತಿಳಿದುಕೊಂಡು ಇಂತಹ ವಿಷಯವನ್ನು ಬರೆಯಲಾಗಿದೆ ಎಂದು.

"ನೀವು ನೆನಪಿಟ್ಟುಕೊಳ್ಳಿರಿ: ಲೋಕದಲ್ಲಿ ಪವಿತ್ರ ಖುರ್‌ಆನ್ ಮಾತ್ರ ಎಂತಹ ಏಕಮಾತ್ರ ಗ್ರಂಥವಾಗಿದೆ ಎಂದರೆ ಅದು ತನ್ನ ಬಗ್ಗೆ ಒಂದು ಅದ್ಭುತ ಎಂದು ವಾದಿಸಿತು. ಬಹಳ ಉಚ್ಚಸ್ವರದಲ್ಲಿ ಹೀಗೆ ವಾದಿಸಲಾಯಿತು.: ಇದರಲ್ಲಿರುವ ಎಲ್ಲಾ ಸಮಾಚಾರಗಳು

ಮತ್ತು ಕಥೆಗಳು ಅದೃಶ್ಯ ಸಂಭವಗಳಾಗಿವೆ. ಪುನರುತ್ಥಾನ ದಿನದ ತನಕದ ಘಟನೆಗಳು ಅದರಲ್ಲಿ ಅಡಕವಾಗಿವೆ. ಅದು ತನ್ನ ವಾಗ್‌ವೈಖರಿಯಲ್ಲಿ ಸಹ ಒಂದು ಪವಾಡವಾಗಿದೆ. ಆ ಕಾಲದಲ್ಲಿ ಕ್ರೈಸ್ತರಿಗೆ ಆಗ ಬಹಳ ಸುಲಭವಾಗಿ ಮಾಡಬಹುದಾಗಿದ್ದ ಕೆಲಸವೇನೆಂದರೆ, ಅವರು ತಮ್ಮ ಗ್ರಂಥಗಳಿಂದ ಕೆಲವು ಕಥೆಗಳನ್ನು ಎತ್ತಿಕೊಂಡು ಇವುಗಳನ್ನು ಈ ಗ್ರಂಥಗಳಿಂದ ಖುರ್‌ಆನ್ ಕೃತಿಚೌರ್ಯ ಮಾಡಿದೆ ಎಂದು ಸಾಬೀತುಗೊಳಿಸಬಹುದಾಗಿತ್ತು. ಅವರು ಹಾಗೆ ಮಾಡಿದ್ದರೆ ಇಸ್ಲಾಮಿನ ಎಲ್ಲ ಕೆಲಸಗಳು ಸ್ತಬ್ಧವಾಗುತ್ತಿದ್ದವು. ಆದರೆ ಈಗ ಕ್ರೈಸ್ತರು ಮಾಡುತ್ತಿರುವುದು ಸಾವಿನ ನಂತರದ ಗೋಳಾಟವಾಗಿದೆ. ಅರಬ್ ದೇಶದ ಕ್ರೈಸ್ತರ ಬಳಿಯಲ್ಲಿ ವಾಸ್ತವಿಕವಾಗಿ ಪವಿತ್ರ ಖುರ್‌ಆನ್ ಕೃತಿಚೌರ್ಯ ಮಾಡಿದೆ ಎಂದು ಸಂಶಯಪಡುವಂತಹ ಗ್ರಂಥಗಳು ಇದ್ದಿದ್ದರೆ – ಆ ಗ್ರಂಥಗಳು ಅಧಿಕೃತವಾಗಿರಲಿ ಅಥವಾ ಕೃತ್ರಿಮವಾಗಿರಲಿ – ಆ ಬಗ್ಗೆ ಕ್ರೈಸ್ತ ಪಾದರಿಗಳು ಮೌನಾವಲಂಬಿಯಾಗಿದ್ದರೆಂದು ನಮ್ಮ ವಿವೇಕ ಅಂಗೀಕರಿಸಲು ಖಂಡಿತವಾಗಿಯೂ ಸಾಧ್ಯವಿಲ್ಲ. ನಿಸ್ಸಂಶಯವಾಗಿ ಪವಿತ್ರ ಖುರ್‌ಆನ್ ಸಂಪೂರ್ಣವಾಗಿ ದೇವ ವಾಣಿಯಾಗಿದೆ. ಆ ದೇವ ವಾಣಿ ಎಷ್ಟು ಅದ್ವಿತೀಯವಾಗಿದೆ ಎಂದರೆ ಅದಕ್ಕೆ ಸಮಾನವಾದುದನ್ನು ಯಾರಿಗೂ ಮುಂದೆ ತರಲು ಸಾಧ್ಯವಾಗಲಿಲ್ಲ.

"ಯೋಚನೆ ಮಾಡಬೇಕಾದ ವಿಷಯವೇನೆಂದರೆ, ಒಬ್ಬನು ಅನ್ಯ ಗ್ರಂಥಗಳಿಂದ ಕೃತಿ ಚೌರ್ಯ ಮಾಡುವವನಾಗಿದ್ದರೆ ಮತ್ತು ಸ್ವತಃ ಬರೆದ ವಿಷಯ ಅನ್ಯ ಗ್ರಂಥದಿಂದ ತೆಗೆದುಕೊಂಡ ವಿಷಯವಾಗಿದೆ ಎಂದೂ ಅವು ಅದೃಶ್ಯ ಶಕ್ತಿಯಿಂದ ಪಡೆದವುಗಳಲ್ಲವೆಂದೂ ತಿಳಿದಿರುವಾಗ ಅವನು ಸಕಲ ಲೋಕ ಜನರನ್ನು ತನ್ನನ್ನು ಎದುರಿಸಲು ಕರೆಯುವ ಧೈರ್ಯ ಉಂಟಾಗುವುದಾದರೂ ಹೇಗೆ? ಯಾರೂ ಅವನನ್ನು ಎದುರಿಸಲು ಮತ್ತು ಅವನ ರಹಸ್ಯವನ್ನು ಬಹಿರಂಗಪಡಿಸಲು ಶಕ್ತರಾಗದುದು ಹೇಗೆ?" (ಚಶ್ಮಯೆ ಮಸೀಹೀ– ಪುಟ 7-9)

ಪವಿತ್ರ ಖುರ್‌ಆನ್ ತನ್ನ ಬಗ್ಗೆ ಒಂದು ಪವಾಡ ಎಂದೂ ಅದ್ವಿತೀಯ ಎಂದೂ ವಾದಿಸಿ ತನ್ನ ಶ್ರೇಷ್ಠತೆಯನ್ನು ಹೇಗೆ ಸಾಬೀತುಪಡಿಸಿದೆ ಎಂದರೆ, ಯಾರಾದರೂ ಇದನ್ನು ಮಾನವ ನಿರ್ಮಿತ ಎಂದು ಭಾವಿಸುವುದಾದರೆ, ಅದನ್ನು ಸಾಬೀತುಪಡಿಸಲಿ. ಎಂದು ಅದು ಉಚ್ಚಸ್ವರದಲ್ಲಿ ಘೋಷಿಸಿದೆ. ಆದರೆ ಎಲ್ಲಾ ವಿರೋಧಿಗಳು ಮೌನವನ್ನು ಅವಲಂಬಿಸಿದರು.

ಸುವಾರ್ತೆಗಳ ಬಗ್ಗೆ, ಆ ಕಾಲದ ಯಹೂದಿಯರು ಕೃತಿ ಚೌರ್ಯ ಎಂದು ಆಕ್ಷೇಪಿಸಿದ್ದರು. ಇಂತಹ ಸುವಾರ್ತೆ ಬರೆಯಲು ಮನುಷ್ಯರಿಗೆ ಸಾಧ್ಯವಿಲ್ಲ ಎಂದು ಸುವಾರ್ತೆಗಳು ಸಹ ವಾದಿಸಿಲ್ಲ. ಕೃತಿ ಚೌರ್ಯ ನಡೆಸಿದ ಸಂಶಯ ಸುವಾರ್ತೆಗಳ ಬಗ್ಗೆ ಉಂಟಾಗಲು ಸಾಧ್ಯವೇ ಹೊರತು ಪವಿತ್ರ ಖುರ್‌ಆನ್ ಬಗ್ಗೆ ಅಲ್ಲ.

**ಪಾದರಿಯ ಮೂರನೆಯ ಆಕ್ಷೇಪ :**

ಪವಿತ್ರ ಖುರ್‌ಆನ್‌ನಲ್ಲಿ ಅರಬಿಗಳ ಆಚಾರ ವಿಚಾರಗಳು ಅಡಕವಾಗಿವೆ.

**ಉತ್ತರ :** ದ್ವೇಷ ಮತ್ತು ಹಠಸಾಧನೆಗೆ ಯಾವುದೇ ಉತ್ತರವಿಲ್ಲ. ಪವಿತ್ರ ಖುರ್‌ಆನ್ ಎಲ್ಲರ ಮುಂದೆ ಇದೆ. ಪವಿತ್ರ ಖುರ್‌ಆನನ್ನು ಭಾಷಾಂತರದ ಜೊತೆಗೆ ಓದುವವನು ಮನವರಿಕೆ ಮಾಡಿಕೊಳ್ಳಬಲ್ಲನು ಮತ್ತು ತೀರ್ಮಾನ ಕೈಗೊಳ್ಳಬಲ್ಲನು – ಪವಿತ್ರ ಖುರ್‌ಆನ್ ಅರಬಿಗಳ ಆಚಾರ ವಿಚಾರಗಳನ್ನು ಅಂಗೀಕರಿಸಿದೆಯೋ ತಿರಸ್ಕರಿಸಿದೆಯೋ ಎಂದು.

ಚಿಂತಿಸಬೇಕಾದ ವಿಷಯವೇನೆಂದರೆ, ಪವಿತ್ರ ಖುರ್‌ಆನ್ ಅವತೀರ್ಣವಾಗುವ ಮೊದಲು ಅರಬಿಗಳಲ್ಲಿ ಯಾವ್ಯಾವ ಆಚಾರ ವಿಚಾರಗಳಿದ್ದುವು ಎಂಬುದನ್ನು ಮೇಲಿಂದ ಮೇಲೆ ನೋಡೋಣ.

1. ವಿಗ್ರಹಾರಾಧನೆ : ಅರಬ್ ಜನತೆ ವಿಗ್ರಹಾರಾಧನೆಯಲ್ಲಿ ಮುಳುಗಿತ್ತು. ಕಅ್‌ಬರ ಒಳಗೆ 360 ವಿಗ್ರಹಗಳು ಇದ್ದುವು. ಪ್ರತಿಯೊಂದು ಕೆಲಸಕ್ಕೆ ಬೇರೆ ಬೇರೆ ವಿಗ್ರಹಗಳಿಗೆ ಮೊರೆಯಿಡಲಾಗುತ್ತಿತ್ತು.

2. ಜುಗಾರಿ ಆಟ. 3. ಮದ್ಯಪಾನ.

4. ಹೆಣ್ಣು ಶಿಶುಗಳನ್ನು ಅಪಶಕುನವೆಂದು ಗಣಿಸಿ ಜೀವಂತವಾಗಿ ಹೂಳುವುದು. 5. ವ್ಯಭಿಚಾರ.

6 ಬಾಣಗಳಿಂದ ಶಕುನ ನೋಡುವ ಆಚಾರ. ಪ್ರತಿಯೊಂದು ಕೆಲಸ ಆರಂಭಿಸುವ ಮೊದಲು ಶಕುನ ನೋಡುತ್ತಿದ್ದರು. ಕಅ್‌ಬದಲ್ಲಿ ಸಹ ಶಕುನ ನೋಡುವ ಬಾಣಗಳನ್ನು ಇರಿಸಲಾಗಿತ್ತು. ಪಕ್ಷಿಗಳನ್ನು ಹಾರಿಸಿ ಸಹ ಶಕುನ ನೋಡುವ ಆಚಾರವಿತ್ತು.

7. ಮನೆಯೊಳಗೆ ಪ್ರವೇಶಿಸುವ ಬಗ್ಗೆ ಚಿತ್ರ ವಿಚಿತ್ರ ಆಚಾರಗಳಿದ್ದವು. ಕೆಲವು ಗೋತ್ರಗಳಲ್ಲಿ ಹೀಗೆ ಸಂಪ್ರದಾಯವಿದ್ದಿತು; ಯಾರಾದರೂ ಪ್ರಯಾಣ ಹೊರಟ ನಂತರ ಮಾರ್ಗ ಮಧ್ಯದಿಂದ ಯಾವುದೋ ಕಾರಣಕ್ಕಾಗಿ ಮನೆಗೆ ಮರಳಿ ಬರಬೇಕಾಗಿ ಬಂದಲ್ಲಿ ಮನೆಯ ಮುಂದಿನ ಬಾಗಿಲಿನಿಂದ ಪ್ರವೇಶಿಸದೆ ಹಿಂದಿನ ಬಾಗಿಲಿನಿಂದ ಪ್ರವೇಶಿಸುತ್ತಿದ್ದರು.

8. ಯಾರಾದರೂ ಮೃತನಾದರೆ ಅವನ ಗೋರಿಯ ಸಮೀಪ ಅವನ ಒಂಟೆಯನ್ನು ಕಟ್ಟಿಹಾಕುತ್ತಿದ್ದರು. ಅದು ಹಸಿವೆ ಬಾಯಾರಿಕೆಗಳಿಗೆ ತುತ್ತಾಗಿ ಸಾಯುತ್ತಿತ್ತು.

9. ಹೆಂಗಸರು ದುಃಖ ಪ್ರಕಟಿಸಲು ರೋದಿಸುವ ಮತ್ತು ಎದೆಗೆ ಬಡಿದುಕೊಳ್ಳುವ ಸಂಪ್ರದಾಯವಿತ್ತು.

10. ಹೆಂಗಸರು ಮೃಗಗಳ ಹಾಲನ್ನು ಹಿಂಡಲು ಅನುಮತಿ ಇರಲಿಲ್ಲ. ಯಾವುದಾದರೂ ಹೆಂಗಸು ಹಾಲನ್ನು ಹಿಂಡಿದರೆ ಅವಳ ಕುಟುಂಬ ಇತರರ ದೃಷ್ಟಿಯಲ್ಲಿ ಹೀನೈಸಲ್ಪಡುತ್ತಿತ್ತು.

11. ಮೃಗಗಳನ್ನು ವಿಗ್ರಹಗಳ ಹೆಸರಿನಲ್ಲಿ ಅಥವಾ ಹರಕೆಯ ರೂಪದಲ್ಲಿ ಸ್ವತಂತ್ರವಾಗಿ ಮೇಯಲು ಬಿಡುವ ಸಂಪ್ರದಾಯವಿತ್ತು.

ಈ ರೀತಿ ನಾಲ್ಕು ವಿಧಗಳ ಪ್ರಾಣಿಗಳು ಪ್ರಸಿದ್ಧವಾಗಿದ್ದುವು: ಸಾಇಬತ್, ಬಹೀರತ್, ಹಾಮ್ ಮತ್ತು ವಸೀಲತ್. ಸಾಇಬತ್ ಎಂದರೆ ಹತ್ತು ಹೆಣ್ಣು ಮರಿಗಳನ್ನು ಒಂದರ ನಂತರ ಒಂದರಂತೆ ಹೆತ್ತ ಹೆಣ್ಣು ಒಂಟೆ. ಅಂತಹ ಒಂಟೆಯ ಮೇಲೆ ಸವಾರಿ ಮಾಡುವುದನ್ನು ತ್ಯಜಿಸಲಾಗುತ್ತಿತ್ತು. ಅದರ ಹಾಲು ಅತಿಥಿಗಳಿಗೆ ಹೊರತು ಅನ್ಯರಿಗೆ ಕೊಡುವುದು ನಿಷಿದ್ಧವಾಗಿತ್ತು.

ಬಹೀರತ್ ಎಂದರೆ ಸಾಇರತ್ ಒಂಟೆಯ ಹನ್ನೊಂದನೆಯ ಹೆಣ್ಣು ಮರಿಯಾಗಿದೆ. ಅದರ ಕಿವಿಯನ್ನು ಮಧ್ಯದಿಂದ ಕತ್ತರಿಸಿ ತಾಯಿ ಒಂಟೆಯ ಜೊತೆ ಸ್ವತಂತ್ರವಾಗಿ ಮೇಯಲು ಬಿಡಲಾಗುತ್ತಿತ್ತು.

ಹಾಮ್ ಎಂದರೆ ಮೇಲೆ ವಿವರಿಸಿದ ಸಾಇಬತ್ ಒಂಟೆಗೆ ಹತ್ತು ಹೆಣ್ಣು ಮರಿಗಳು ಜನಿಸುವಂತೆ ಗರ್ಭದಾನ ಮಾಡಿದ ಗಂಡು ಒಂಟೆಯಾಗಿದೆ. ಅಂತಹ ಒಂಟೆಯನ್ನು ಸ್ವತಂತ್ರವಾಗಿ ಮೇಯಲು ಬಿಡಲಾಗುತ್ತಿತ್ತು.

ವಸೀಲತ್ ಎಂದರೆ ಐದು ಸಾರಿ ಪ್ರತಿಯೊಂದು ಸಲ ಹತ್ತು ಹೆಣ್ಣು ಮರಿಗಳನ್ನು ಹೆರುತ್ತಿದ್ದ ಹೆಣ್ಣು ಆಡಾಗಿದೆ. ಇಂತಹ ಆಡಿನ ಅನಂತರದ ಹಾಲು ಮತ್ತು ಮಾಂಸ ಪುರುಷರು ಮಾತ್ರ ಉಪಯೋಗಿಸುತ್ತಿದ್ದರು; ಹೆಂಗಸರಿಗೆ ಅವು ನಿಷಿದ್ಧವಾಗಿದ್ದುವು.

ಅರಬ್ ದೇಶದ ಹನ್ನೊಂದು ಮುಖ್ಯ ಆಚಾರ ವಿಚಾರಗಳನ್ನು ನಿಮ್ಮ ಮುಂದೆ ಇರಿಸಲಾಗಿದೆ. ಇಸ್ಲಾಮ್ ಧರ್ಮದ ಆಗಮನದ ಮೊದಲು ಜಾರಿಯಲ್ಲಿದ್ದ ಈ ಆಚಾರ ವಿಚಾರಗಳನ್ನು ಪವಿತ್ರ ಖುರ್‌ಆನ್ ಖಂಡಿಸಿದೆಯೋ ಬೆಂಬಲಿಸಿದೆಯೋ ಎಂಬುದನ್ನು ನೀವು ಸ್ವತಃ ನಿರ್ಧರಿಸಬಹುದಾಗಿದೆ.

ವಿಗ್ರಹಾರಾಧನೆ ಅರಬ್ ದೇಶದ ರಾಷ್ಟ್ರೀಯ ಧರ್ಮವಾಗಿತ್ತು. ಪವಿತ್ರ ಖುರ್‌ಆನ್ ಅದನ್ನು ನಿಷಿದ್ಧಗೊಳಿಸಿದ ಆಜ್ಞೆಗಳಿಂದ ತುಂಬಿದೆ. ನೀವು ಪವಿತ್ರ ಖುರ್‌ಆನಿನ ಯಾವ ಭಾಗದಲ್ಲಿ ನೋಡಿದರೂ ಇದನ್ನು ಕಾಣಬಹುದು.

ಪವಿತ್ರ ಖುರ್‌ಆನಿನ ಕೆಲವು ವಚನಗಳ ಭಾಷಾಂತರ ಹೀಗಿದೆ:

"ಖಂಡಿತವಾಗಿಯೂ ಅಲ್ಲಾಹನು ಮೂವರಲ್ಲಿ ಒಬ್ಬನು ಎಂದು ಹೇಳುವವರು ನಿಸ್ಸಂದೇಹವಾಗಿಯೂ ಅವಿಶ್ವಾಸಿಗಳಾಗಿದ್ದಾರೆ. ವಾಸ್ತವದಲ್ಲಿ, ಒಬ್ಬ ದೇವನ ಹೊರತು ಬೇರೆ ದೇವನಿಲ್ಲ." (5 : 74)

ವ್ಯಭಿಚಾರ ಅರಬ್ ದೇಶದಲ್ಲಿ ಬಹಳ ವ್ಯಾಪಕವಾಗಿತ್ತು. ವ್ಯಭಿಚಾರದ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ವ್ಯಭಿಚಾರಿಣಿ ಮತ್ತು ವ್ಯಭಿಚಾರಿ ಅವರಿಬ್ಬರಲ್ಲಿ ಒಬ್ಬೊಬ್ಬರಿಗೂ ನೂರರಂತೆ ಛಡಿಯೇಟು ಕೊಡಿರಿ. ನೀವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದ ಬಗ್ಗೆ ವಿಶ್ವಾಸವುಳ್ಳವರಾಗಿದ್ದರೆ, ಅಲ್ಲಾಹನ ನಿಯಮವನ್ನು ಜಾರಿಗೆ ತರುವ ವಿಚಾರದಲ್ಲಿ ಅವರೀರ್ವರಿಗೆ ಸಂಬಂಧಿಸಿದಂತೆ ನೀವು ಏನೂ ದಾಕ್ಷಿಣ್ಯ ತೋರಿಸಬಾರದು. ಅವರಿಬ್ಬರ ಶಿಕ್ಷೆಗೂ ವಿಶ್ವಾಸಿಗಳ ಒಂದು ಗುಂಪು ಸಾಕ್ಷಿಯಾಗಿರಲಿ." (24 : 3)

ಹೆಣ್ಣು ಮಗುವನ್ನು ಅಪಶಕುನ ಎಂದು ಪರಿಗಣಿಸಿ ಜೀವಂತವಾಗಿ ಹೂಳುವ ಸಂಪ್ರದಾಯವನ್ನು ಖಂಡಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಅವರಲ್ಲಿ ಯಾವನಿಗಾದರೂ ಒಂದು ಹೆಣ್ಣು ಮಗು ಹುಟ್ಟಿತೆಂಬ ವಾರ್ತೆಯನ್ನು ತಿಳಿಸಿದರೆ, ಅವನು ತನ್ನ ಕೋಪವನ್ನು ಒಳಗೆಯೇ ಅದುಮಿಡುವುದರಿಂದಾಗಿ ಅವನ ಮುಖ ಕಪ್ಪಿಡುತ್ತದೆ."

"ತನಗೆ ಲಭಿಸಿದ ಕೆಟ್ಟ ವಾರ್ತೆ ನಿಮಿತ್ತ ಅವನು ಜನರಿಂದ ಅಡಗುತ್ತಾನೆ. ಅಪಮಾನವನ್ನು ಸಹಿಸಿಕೊಂಡು ಅವನು ಅದನ್ನು ಪರಿಪೋಷಿಸುವನೇ? ಅಥವಾ ಅದನ್ನು (ಸಜೀವವಾಗಿ) ಮಣ್ಣಿನಲ್ಲಿ ಹೂಳುವನೇ? ದಿಟವಾಗಿಯೂ ಅವರ ತೀರ್ಮಾನ ನಿಕೃಷ್ಟವೇ ಆಗಿದೆ." (16 : 59, 60)

ಶಕುನದ ಪ್ರಾಣಿಗಳ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಬಹೀರತ್, ಸಾಇಬತ್, ವಸೀಲತ್, ಹಾಮ್ – ಈ ಬಗ್ಗೆ ಅಲ್ಲಾಹನು ಆದೇಶವೇನೂ ನೀಡಿಲ್ಲ, ಆದರೆ ಅವಿಶ್ವಾಸಿಗಳು ಅಲ್ಲಾಹನ ಮೇಲೆ ಸುಳ್ಳನ್ನು ಆರೋಪಿಸುತ್ತಾರೆ. ಅವರಲ್ಲಿ ಹೆಚ್ಚಿನವರು ಬುದ್ಧಿಯನ್ನು ಉಪಯೋಗಿಸುವುದಿಲ್ಲ." (5 : 104)

ಪ್ರಾಣಿಗಳ ಮಾಂಸವನ್ನು ಪುರುಷರಿಗೆ ಮಾತ್ರ ಅನುಮತಿಸಿರುವುದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

" 'ಇಂತಿಂತಹ ಜಾನುವಾರುಗಳ ಗರ್ಭಾಶಯದಲ್ಲಿ ಇರುವುದು ನಮ್ಮ ಪುರುಷರಿಗೆ ಮೀಸಲಾಗಿರಿಸಲಾಗಿದ್ದು ನಮ್ಮ ಪತ್ನಿಯರಿಗೆ ಅವು ನಿಷಿದ್ಧ; ಆದರೆ ಅದು ನಿರ್ಜೀವವಾಗಿದ್ದರೆ ಅದಕ್ಕೆ ಎಲ್ಲರೂ ಪಾಲುಗಾರರಾಗುತ್ತಾರೆ' ಎಂದೂ ಅವರು ಹೇಳುತ್ತಾರೆ. ಅವರ ಈ (ನಿರಾಧಾರ) ಹೇಳಿಕೆಗೆ ಅವನು (ಅಲ್ಲಾಹನು) ಶಿಕ್ಷೆ ನೀಡುವನು. ನಿಶ್ಚಯವಾಗಿಯೂ ಅವನು ವಿವೇಕಶಾಲಿಯೂ ಸರ್ವಜ್ಞನೂ ಆಗಿದ್ದಾನೆ." (6 : 140)

ಇಂತಹ ಉಪದೇಶಗಳು ಪವಿತ್ರ ಖುರ್‌ಆನ್‌ನಲ್ಲಿ ಇರುವಾಗ ಯಾರಾದರೂ ಬುದ್ಧಿಶಾಲಿ "ಪವಿತ್ರ ಖುರ್‌ಆನ್ ಅರಬಿಗಳ ಆಚಾರ ವಿಚಾರಗಳನ್ನು ಕಾಪಾಡಿದೆ" ಎಂದು ಹೇಳಬಲ್ಲನೇ?

ಆದರೆ ಒಳ್ಳೆಯ ಸಂಪ್ರದಾಯಗಳಾದ ಅತಿಥಿ ಸತ್ಕಾರ, ಶೌರ್ಯ ಪ್ರದರ್ಶನ, ಔದಾರ್ಯ ತೋರುವಿಕೆ ಮೊದಲಾದವುಗಳನ್ನು ಪವಿತ್ರ ಖುರ್‌ಆನ್ ಬಾಕಿಯಾಗಿ ಉಳಿಸಿದೆ. ಅಲ್ಲಾಹನು ಆಕ್ಷೇಪಿಸುವವರಿಗೆ ವಿವೇಕವನ್ನು ದಯಪಾಲಿಸಲಿ ಮತ್ತು ಪವಿತ್ರ ಖುರ್‌ಆನಿನ ಮಹತ್ವವನ್ನು ಮನವರಿಕೆ ಮಾಡಿಕೊಳ್ಳುವ ಭಾಗ್ಯ ನೀಡಲಿ. (ಆಮೀನ್ – ಹಾಗೆಯೇ ಆಗಲಿ).

# ಕರುಣೆಯ ಪ್ರವಾದಿಯ ನಾಮದಲ್ಲಿ ಕ್ರೂರತೆ

ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಲಂಡನಿನ ಬೈತುಲ್ ಫುತೂಹ್ ಮಸೀದಿಯಲ್ಲಿ 11-02-2011ರಂದು ನೀಡಿದ ಜುಮುಅ ಖುತುಬದ ಸಂಕ್ಷೇಪ.

يَاَيُّهَا الَّذِيْنَ اٰمَنُوا اسْتَعِيْنُوْا بِالصَّبْرِ وَالصَّلٰوةِ
اِنَّ اللّٰهَ مَعَ الصّٰبِرِيْنَ ﴿١٥٤﴾ وَلَا تَقُوْلُوْا لِمَنْ يُّقْتَلُ
فِيْ سَبِيْلِ اللّٰهِ اَمْوَاتٌ بَلْ اَحْيَآءٌ وَّلٰكِنْ لَّا
تَشْعُرُوْنَ ﴿١٥٥﴾ وَلَنَبْلُوَنَّكُمْ بِشَيْءٍ مِّنَ الْخَوْفِ
وَالْجُوْعِ وَنَقْصٍ مِّنَ الْاَمْوَالِ وَالْاَنْفُسِ وَالثَّمَرٰتِ
وَبَشِّرِ الصّٰبِرِيْنَ ﴿١٥٦﴾ الَّذِيْنَ اِذَآ اَصَابَتْهُمْ مُّصِيْبَةٌ
قَالُوْٓا اِنَّا لِلّٰهِ وَاِنَّآ اِلَيْهِ رٰجِعُوْنَ ﴿١٥٧﴾ اُولٰٓئِكَ عَلَيْهِمْ
صَلَوٰتٌ مِّنْ رَّبِّهِمْ وَرَحْمَةٌ وَاُولٰٓئِكَ هُمُ الْمُهْتَدُوْنَ ﴿١٥٨﴾

ಈ ಖುರ್‌ಆನ್ ವಚನಗಳ ಅರ್ಥ ಹೀಗಿದೆ:

**ಓ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ಪ್ರಾರ್ಥನೆಯಿಂದ ನೀವು (ಅಲ್ಲಾಹನ) ಸಹಾಯವನ್ನು ಯಾಚಿಸಿರಿ. ಖಂಡಿತವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ.**

**ದೇವಮಾರ್ಗದಲ್ಲಿ ಹತ್ಯೆಗೀಡಾದವರ ಕುರಿತು ಅವರು ಮೃತಪಟ್ಟವರೆಂದು ಹೇಳಬೇಡಿರಿ. ಅವರು ಮೃತರಲ್ಲ; ಜೀವಂತರು. ಆದರೆ ನೀವು ಅದನ್ನು ಗ್ರಹಿಸುವುದಿಲ್ಲ.**

**ನಿಶ್ಚಯವಾಗಿಯೂ ನಿಮ್ಮನ್ನು ನಾವು ಕೆಲವು ಬಗೆಯ ಭಯಾಶಂಕೆ ಮತ್ತು ಹಸಿವಿನಿಂದಲೂ ಧನನಷ್ಟ, ಪ್ರಾಣ ಹಾನಿ ಮತ್ತು ಫಲನಷ್ಟ ಗಳಿಂದಲೂ ಪರೀಕ್ಷಿಸುವೆವು. (ಓ ಪ್ರವಾದಿ,) ನೀನು ಸಹನಶೀಲರಿಗೆ ಶುಭವಾರ್ತೆಯನ್ನು ತಿಳಿಸು –**

**ಯಾರು ತಮಗೆ ಏನಾದರೂ ವಿಪತ್ತು ಬಂದೆರಗಿದರೆ, ಅವರು (ಗಾಬರಿಗೊಳ್ಳುವುದಿಲ್ಲ, ಬದಲು) 'ನಾವು ನಿಶ್ಚಯವಾಗಿಯೂ ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ' ಎಂದು ಹೇಳುತ್ತಾರೋ –**

**ಅವರ ಮೇಲೆ ತಮ್ಮ ಒಡೆಯನ ಅನುಗ್ರಹಗಳಿವೆ; (ಹಾಗೆಯೇ) ಕರುಣೆ ಸಹ. ಅವರೇ ಸತ್ಪಥದಲ್ಲಿ ನಡೆಸಲ್ಪಡುವವರು. (2:154 - 158)**

ಕಳೆದ ದಿವಸ ಇಂಡೋನೇಶ್ಯಾದಲ್ಲಿ ಮೃಗೀಯತೆ ಮತ್ತು ಕಿರಾತನ ಪ್ರದರ್ಶಿಸುತ್ತಾ ಅಹ್ಮದಿಯತಿನ ವಿರೋಧಿಗಳು ಮೂವರು ಅಹ್ಮದಿಯರನ್ನು ಹುತಾತ್ಮರನ್ನಾಗಿ ಮಾಡಿದರು. ಈ ಕಾರಣದಿಂದ ಪ್ರತಿಯೊಬ್ಬ ಅಹ್ಮದಿ ದುಃಖಿತನು. ಆದರೆ ಅಲ್ಲಾಹನ ಅಜ್ಞೆಯನ್ನು ಪಾಲಿಸುತ್ತಾ ಅಹ್ಮದಿಯಾ ಜಮಾಅತ್, ಜಮಾಅತ್ ಎಂಬ ನೆಲೆಯಲ್ಲಿ ಮತ್ತು ಪ್ರತಿಯೊಬ್ಬ ಅಹ್ಮದಿ, ಮುಅ್‌ಮಿನ್ (ಸತ್ಯವಿಶ್ವಾಸಿ) ಎಂಬ ನೆಲೆಯಲ್ಲಿ, ಮೊದಲೇ ಇದ್ದ ನಮ್ಮ ರೀತಿ ಅನುಸರಿಸಿ ಕ್ಷಮೆ ಕೈಗೊಂಡು ತಮ್ಮ ಜೀವ, ಧನ ಮತ್ತು ಇತರ ಎಲ್ಲ ನಷ್ಟವನ್ನೂ ದೇವ ಸಂಪ್ರೀತಿಯಲ್ಲಿ ತೃಪ್ತರಾಗಿ ಸಹಿಸುತ್ತಾರೆ. ನಾವು ಇಷ್ಟು ಮಾತ್ರ ಹೇಳುತ್ತೇವೆ: "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್" (ನಾವು ನಿಶ್ಚಯವಾಗಿಯೂ ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ). ವಿಶ್ವಾಸಿಗಳ ಲಕ್ಷಣವಾಗಿ ಇದನ್ನೇ ಅಲ್ಲಾಹನು ಹೇಳಿದ್ದಾನೆ. ನಾನು ಪಠಿಸಿದ ಖುರ್‌ಆನ್ ವಚನಗಳ ತಾತ್ಪರ್ಯವನ್ನು ಅಹ್ಮದಿಯರಿಗಿಂತ ಮಿಗಿಲಾಗಿ ಯಾರಿಗೆ ಇಂದು ಮನವರಿಕೆ ಯಾಗುವುದು? ಶತ್ರುಗಳು ಪದೇ ಪದೇ ನಮ್ಮ ಮೇಲೆ ಈ ಅಕ್ರಮ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಈ ಖುರ್‌ಆನ್ ವಚನಗಳನ್ನು ನಾವು ಪದೇ ಪದೇ ಸ್ಮರಿಸುತ್ತೇವೆ. ಜೀವ ಮತ್ತು ಧನ ತ್ಯಾಗಗಳನ್ನು ಇಂಡೋನೇಶ್ಯಾದ ಅಹ್ಮದಿಯರು ನೀಡಿದರೂ ಪಾಕಿಸ್ಥಾನದ ಅಹ್ಮದಿಯರು ನೀಡಿದರೂ ಬೇರೆ ಯಾವುದೇ ದೇಶದ ಅಹ್ಮದಿಯರು ನೀಡಿದರೂ ವಿಶ್ವಾಸಿಗಳ ಮಹತ್ವ ಪ್ರಕಟಿಸಬೇಕಾದ ಆ ಸ್ಫೂರ್ತಿ ಹಝ್ರತ್ ಪೈಗಂಬರರ[ಸ] ಯಥಾರ್ಥ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್[ಅ] ಪ್ರತಿಯೊಬ್ಬ ಅಹ್ಮದಿಯ ಹೃದಯದಲ್ಲೂ ಊದಿದ್ದಾರೆ. ಅದು ಜಗತ್ತಿನೆಲ್ಲೆಲ್ಲೂ ವಾಸಿಸುವ ಅಹ್ಮದಿಯರಲ್ಲಿ ಸಾಮಾನ್ಯವಾಗಿ ಗೋಚರಿಸಬಹುದು. ಅಲ್ಲಾಹನ ನಾಮದಲ್ಲಿ ನಮ್ಮನ್ನು ಕಷ್ಟ ನಷ್ಟಗಳಿಗೆ ಗುರಿಪಡಿಸುವಾಗ, ಅಲ್ಲಾಹನ ನಾಮದಲ್ಲಿ ನಮ್ಮೊಡನೆ ತ್ಯಾಗಗಳನ್ನು ಆವಶ್ಯಪಡುವಾಗ ಈ ಮರುನುಡಿ ಹೇಳಲು ನಮಗೆ ಉಪದೇಶಿಸಲಾಗಿದೆ. ನಮ್ಮ ನೇತಾರರಾದ ಹಝ್ರತ್ ಪೈಗಂಬರ್[ಸ] ಇದರ ಪ್ರತ್ಯಕ್ಷ ರೂಪವಾಗಿದ್ದರು. ಈ ಸ್ಫೂರ್ತಿಯನ್ನು ಪೈಗಂಬರ್[ಸ] ತನ್ನ ಶಿಷ್ಯರಲ್ಲಿ ಹುಟ್ಟುಹಾಕಿದ್ದರು. ಅವರು ಅದನ್ನು ಕಾರ್ಯರೂಪಕ್ಕೆ ತಂದು ತೋರಿಸಿದರು. ಎಲ್ಲ ಪ್ರವಾದಿಗಳ ಅನುಯಾಯಿಗಳಿಗೂ ಇಂತಹ ಅವಸ್ಥೆಯನ್ನು ಎದುರಿಸಬೇಕಾಗಿ ಬಂದಿತ್ತು. ಅವರ ಜೀವನವನ್ನು ಶತ್ರುಗಳು ದುಸ್ತರಗೊಳಿಸಿದಾಗ, ಪ್ರತಿಯೊಂದು ಕಾಲದ ಫಿರ್‌ಔನ್‌ಗಳು ವಿಶ್ವಾಸಿಗಳ ಮುಂದೆ ಜೀವತ್ಯಾಗ ಮಾಡಲಿಕ್ಕೆ ಅಥವಾ ವಿಶ್ವಾಸ ತ್ಯಜಿಸಲಿಕ್ಕೆ ಸಿದ್ಧರಾಗಿರಿ ಎಂಬ ಶರ್ತ ಒಡ್ಡಿದಾಗ ವಿಶ್ವಾಸಿಗಳು ಸದಾ ತಮ್ಮ ವಿಶ್ವಾಸ ದೃಢೀಕರಣದ ಘೋಷಣೆ ಮಾಡಿದ್ದರು.

ಹಝ್ರತ್ ಮೂಸಾ[ಅ] ಅವರ ಕಾಲದಲ್ಲಿ ಜಾಲವಿದ್ಯೆಗಾರರ ಮಂತ್ರಜಾಲದ ವಿರುದ್ಧ ಮೂಸಾ[ಅ] ಪ್ರದರ್ಶಿಸಿದ ಜಾಲವಿದ್ಯೆ ಭೌತಿಕ ಜಾಲವಿದ್ಯೆ ಅಲ್ಲವೆಂದೂ ಅದು ದೈವಿಕ ಸಹಾಯವಾಗಿತ್ತೆಂದೂ ಈ ವಿದ್ಯೆಗಳಿಗೆ ಭೌತಿಕ ವಿದ್ಯೆಗಳೊಂದಿಗೆ ಯಾವುದೇ ಸಂಬಂಧವಿಲ್ಲವೆಂಬ ನಿಜಾಂಶ ವ್ಯಕ್ತಗೊಂಡಾಗ ಮೂಸಾ[ಅ] ನೀಡುವ ಸಂದೇಶ ದೈವಿಕ ಸಂದೇಶವೆಂದು ಅವರಿಗೆ ಮನವರಿಕೆಯಾದಾಗ ಅವರು ಕೂಡಲೇ ಮೂಸಾರನ್ನು[ಅ] ನಂಬಿದರು. ಈ ಸಂದರ್ಭದಲ್ಲಿ ಫಿರ್‌ಔನ್ ದೊಡ್ಡ ಅಪಮಾನಕ್ಕೆ ಗುರಿಯಾದನು. ಅವನು ಕೋಪದಿಂದ ಕಿಡಿಕಾರಿದನು. ಅವನು ಹೇಳಿದನು: ನಿಮ್ಮ ಈ ವರ್ತನೆಗೆ ನೀವು ಎಂದೂ ಮರೆಯಲಾರದಂಥ ಶಿಕ್ಷೆಯನ್ನು ನಾನು ನೀಡುವೆನು. ಆಗ ವಿಶ್ವಾಸಿಗಳು

ಫಿರ್‌ಔನನಿಗೆ ನೀಡಿದ ಉತ್ತರವೇನೆಂದರೆ, ಅಲ್ಲಾಹನ ಸ್ಪಷ್ಟ ದೃಷ್ಟಾಂತಗಳಿಗೆ ಮಿಗಿಲಾಗಿ ನಿಮಗೆ ಶ್ರೇಷ್ಠತೆ ನೀಡಲು ನಮ್ಮಿಂದ ಸಾಧ್ಯವಿಲ್ಲ. ಅಲ್ಲಾಹನ ಮೇಲಿರುವ ವಿಶ್ವಾಸಕ್ಕಿಂತ ನಿಮಗೆ ಆದ್ಯತೆ ನೀಡಲು ನಾವು ಸಿದ್ಧರಿಲ್ಲ. ನಮ್ಮನ್ನು ಮರಳಿಸಲು ನಿಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಿ ನೋಡಿರಿ. ನಿಮಗೆ ನಮ್ಮ ಈ ಭೌತಿಕ ಜೀವಿತವನ್ನು ಮಾತ್ರ ಕೊನೆಗೊಳಿಸಲು ಸಾಧ್ಯ. ಆದರೆ ವಿಶ್ವಾಸಹೊಂದಿದ ನಂತರ, ಅಲ್ಲಾಹನಿಗೋಸ್ಕರ ನಾವು ಸ್ವಯಂ ಸಮರ್ಪಿಸುವುದರ ಫಲವಾಗಿ ನಮಗೆ ಲಭಿಸಲಿರುವ ಅನುಗ್ರಹಗಳು ನಿಮ್ಮ ಆಡಳಿತೆಯಿಂದ ಲಭಿಸಲಿರುವ ಅನುಗ್ರಹಗಳಿಗೆ. ಹೋಲಿಸಿದರೆ, ಊಹಿಸಲಾಗದಷ್ಟು ಮಹತ್ತರವಾಗಿದೆ.

ಮೂಸಾರನ್ನು[ಅ] ನಂಬಿದವರು ಈ ರೀತಿಯ ವಿಶ್ವಾಸ ದೃಢತೆಯನ್ನು ಪ್ರಕಟಗೊಳಿಸಿದ್ದರೆ, ನಾವು ಪ್ರವಾದಿ ಶ್ರೇಷ್ಠ ಮತ್ತು ಖಾತಮುಲ್ ಅಂಬಿಯಾ ಆಗಿರುವ ಪೈಗಂಬರರನ್ನು[ಸ] ನಂಬುವವರಾಗಿದ್ದೇವೆ. ಅವರ ಮೇಲೆ ಸಂಪೂರ್ಣ ಶರೀಅತ್ ಅವತೀರ್ಣವಾಯಿತು. ಅದನ್ನು ಅನುಸರಿಸಿ ಜೀವನ ನಡೆಸಿದರೆ ವಿಶ್ವಾಸದ ಉನ್ನತ ಸೋಪಾನವನ್ನು ತಲುಪಲು ನಮಗೆ ಸಾಧ್ಯ. ಮಾತ್ರವಲ್ಲ, ಪೈಗಂಬರರ[ಸ] ಭವಿಷ್ಯನುಡಿ ಪ್ರಕಾರ ಸುರಯ್ಯ (ಕಾರ್ತಿಕ) ನಕ್ಷತ್ರದೆಡೆಗೆ ಎತ್ತಲ್ಪಟ್ಟ ವಿಶ್ವಾಸವನ್ನು ಭೂಮಿಗೆ ಮರಳಿ ತಂದು ಅನೇಕಾನೇಕ ದೃಷ್ಟಾಂತಗಳ ಮೂಲಕ ನಮ್ಮ ವಿಶ್ವಾಸವನ್ನು ಬಲಪಡಿಸಿದ ವಾಗ್ದತ್ತ ಮಸೀಹರನ್ನು ನಂಬಿದವರು ಕೂಡ ಆಗಿದ್ದೇವೆ ನಾವು. ಆದುದರಿಂದ ಇಂದಿನ ಕಾಲದ ಫಿರ್‌ಔನ್‌ಗಳಿಗೂ ಫಿರ್‌ಔನನ ಕೂಟದವರಿಗೂ ಹೆದರಿಕೊಂಡು ನಮ್ಮ ವಿಶ್ವಾಸವನ್ನು ನಾವು ಕೈಬಿಡುವೆವೋ? ಅಲ್ಲಾಹನು ನಮಗೆ "ಬಶ್ಶಿರಿಸಾಬಿರೀನ್" ಎಂಬ ಶುಭವಾರ್ತೆಯನ್ನು ನೀಡುತ್ತಿದ್ದಾನೆ. ನಮಗೆ ನಮ್ಮ ಸಹನೆ ದೋರುವಿಕೆಗೂ ಜೀವಾರ್ಪಣಕ್ಕೂ ಬದಲಿಗೆ ನಿತ್ಯಜೀವನ ಲಭಿಸುವುದೆಂದು ಶುಭವಾರ್ತೆ ನೀಡಲ್ಪಡುತ್ತಿದೆ. ಆದುದರಿಂದ ವಿಶ್ವಾಸದ ಈ ಪರಮ ಸೀಮೆಯನ್ನು ತಲುಪಿದವರನ್ನು ಯಾವುದಾದರೂ ಬೆದರಿಕೆ ಅವರ ವಿಶ್ವಾಸದಿಂದ ಹಿಮ್ಮೆಟ್ಟಿಸಲಾರದು. ಅಕ್ರಮ ಮತ್ತು ಕ್ರೂರತೆಯ ಕಠಿಣತೆಗಳು ಎಂದಿಗೂ ತಮ್ಮ ವಿಶ್ವಾಸದಲ್ಲಿ ಬೇರೂರಿ ನಿಲ್ಲುವುದರಿಂದ ಅವರನ್ನು ತಡೆಯಲಾರದು. ಆದ್ದರಿಂದ ಜಗತ್ತಿನ ಯಾವುದೇ ಮೂಲೆಯಲ್ಲಿ ವಾಸಿಸುವ ಅಹ್ಮದಿಯತಿನ ಶತ್ರುಗಳೇ, ಅಹ್ಮದಿಯರ ಮೇಲೆ ನಿಮಗಿಷ್ಟವಿರುವ ದುಷ್ಕೃತ್ಯಗಳನ್ನು ಮಾಡಿರಿ. ಆದರೆ ನಮ್ಮ ವಿಶ್ವಾಸದಿಂದ ನಮ್ಮನ್ನು ತುಸು ಮಾತ್ರವಾದರೂ ಹಿಂದೆಸರಿಸಲು ನಿಮ್ಮಿಂದ ಸಾಧ್ಯವಿಲ್ಲ. ಲೋಕದಲ್ಲೆಡೆ ವಾಸಿಸುವ ಅಹ್ಮದಿಯರಿಂದ ನಿಮಗೆ ಸಿಗುವ ಉತ್ತರ ಒಂದೇ ಆಗಿರುವುದು: "ನಿಮಗೆ ನಮ್ಮ ವಿಶ್ವಾಸದಿಂದ ನಮ್ಮನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲ. ಇನ್‌ಶಾಅ್ ಅಲ್ಲಾಹ್." ಇಂಡೋನೇಶ್ಯದ ಅಹ್ಮದಿಯರು ಸಹ ತಮ್ಮ ಶತ್ರುಗಳಿಗೆ ಈ ಒಂದು ಉತ್ತರವನ್ನೇ ನೀಡಿದರು. ಪದೇ ಪದೇ ಅವರಿಗೆ ಬೆದರಿಕೆ ಒಡ್ಡಲಾಗುತ್ತಿತ್ತು. ಆದರೆ ವಿಶ್ವಾಸ ಸಂಪತ್ತಿನಿಂದ ಸಂಪನ್ನರಾದ ಅವರು ಈ ಬೆದರಿಕೆಗೆ ಏನೂ ಬೆಲೆಕೊಡಲಿಲ್ಲ.

ಈ ಘಟನೆ ನಡೆದದ್ದು ಚಿಕ್ಕ ಒಂದು ಜಮಾಅತಿನಲ್ಲಾಗಿದೆ. ಅವರ ಒಟ್ಟು ಜನಸಂಖ್ಯೆ ಮೂವತ್ತು - ಮಹಿಳೆಯರೂ ಮಕ್ಕಳೂ ಸೇರಿ. ಏಳು ಕುಟುಂಬಗಳು. ಆದರೆ ತಾವು ಜಮಾಅತನ್ನು ತೊರೆಯುವೆವೆಂದೂ ನಾಮಧಾರಿಗಳಾದ ಈ ಮುಲ್ಲಾಗಳ ಜೊತೆ ಸೇರಲು ತಾವು ಬಯಸುತ್ತೇವೆಂದೂ ಹೇಳಿ ಶರಣಾಗತರಾಗಲು ಅವರ್‍ಯಾರೂ ಸಿದ್ಧರಾಗಲಿಲ್ಲ. ವಿರೋಧ ಅತಿರೇಕಕ್ಕೆ ತಲುಪಿದಾಗ ಸಮೀಪದ ಜಮಾಅತಿನ ಸುಮಾರು 20 ಯುವಕರು ವಿವಿಧ ಸಮಯಗಳಲ್ಲಿ ಡ್ಯೂಟಿ ಕೊಡಲು ಅಲ್ಲಿಗೆ ಬರುತ್ತಿದ್ದರು. ಅವರು ಮಿಶನ್ ಹೌಸ್‌ನಲ್ಲಿ ಇರುತ್ತಿದ್ದರು. ಮಿಶನ್ ಹೌಸನ್ನು ವಿರೋಧಿಗಳು ವಶಪಡಿಸದಿರಲಿಕ್ಕೆ ಅವರು ಹೀಗೆ ಮಾಡುತ್ತಿದ್ದರು. ಕಾರಣವೇನೆಂದರೆ, ಪೊಲೀಸರ ಬೆಂಬಲ ಸಾಮಾನ್ಯವಾಗಿ ಶತ್ರುಗಳಿಗಿತ್ತು. ಅವರು ನಮ್ಮೊಡನೆ ತೋರಿಸುತ್ತಿದ್ದ ಧೋರಣೆ ಏನೆಂದರೆ, ಸರಕಾರಿ ಅಧಿಕಾರಿಗಳ ಆಜ್ಞೆ ಪ್ರಕಾರ ನಾವು ಯಾವುದಾದರೂ ಮಸೀದಿ ಅಥವಾ ಮಿಶನ್‌ಹೌಸನ್ನು ತೆರವುಗೊಳಸಿದರೆ, ಸರಕಾರ ಅದನ್ನು ಮುಚ್ಚುತ್ತಿತ್ತು. ಅಥವಾ ಬೇರೆ ಯಾರಾದರೂ ಅದನ್ನು ವಶಪಡಿಸುತ್ತಿದ್ದರು. ಈ ಶತ್ರುಗಳು ಅದನ್ನು ವಶಪಡಿಸಿದರೆ ಸರಕಾರ ಅವರನ್ನು ಖಾಲಿಮಾಡಿಸುತ್ತಿರಲಿಲ್ಲ. ಕಳೆದ ಕೆಲವು ವರ್ಷಗಳಿಂದ ಹೀಗೆಯೇ ನಡೆಯುತ್ತಿತ್ತು. ಆದುದರಿಂದ ನಾವು ತೀರ್ಮಾನಿಸಿದ್ದೇನೆಂದರೆ, ಏನೇ ಘಟಿಸಿದರೂ ಇನ್ನು ಮುಂದೆ ಯಾವ ಸ್ಥಳವನ್ನೂ ಖಾಲಿಮಾಡುವ ಪ್ರಶ್ನೆಯೇ ಇಲ್ಲ. ನಮ್ಮ ಜನರು ಘಟನೆ ಸಮಯದಲ್ಲಿ ಮಿಶನ್‌ಹೌಸಿನ ಒಳಗಿದ್ದರು. ಈ ಕ್ರೂರ ಜನರು ಆಕ್ರಮಿಸಿದಾಗ, ಅವರು ಒಳಗೆ ನುಗ್ಗಿ ಖಡ್ಗ, ಕತ್ತಿ, ದೊಣ್ಣೆಗಳಿಂದ ಅಹ್ಮದಿಯರನ್ನು ತೀವ್ರವಾಗಿ ಗಾಯಗೊಳಿಸಿ ಎಳೆದುಕೊಂಡು ಹೊರಗೆ ತಂದರು. ಪೋಲಿಸರು ಇದನ್ನೆಲ್ಲ ನೋಡುತ್ತಾ ಹೊರಗೆ ನಿಂತಿದ್ದರು. ಮೂವರು ಅಹ್ಮದಿಯರನ್ನು ಅವರು ಹುತಾತ್ಮರನ್ನಾಗಿ ಮಾಡಿದರು. ಐದು ಮಂದಿ ಗಂಭೀರವಾಗಿ ಗಾಯಗೊಂಡರು. ಎಲ್ಲರೂ ಈ ವಾರ್ತೆ ಕೇಳಿದ್ದಾರೆ. ಆದರೆ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರ ವಿಶ್ವಾಸ ಮೊದಲಿನಂತೆಯೇ ಸುದೃಢವಾಗಿದೆ. ಅದು ಮೊದಲಿಗಿಂತ ವರ್ಧಿಸಿದೆ.

ಅವರು ಅತಿ ಕ್ರೂರತೆಯನ್ನು ತೋರಿಸಿದ್ದಾರೆ. ಅಜ್ಞಾನ (ಜಾಹಿಲಿಯ್ಯ) ಕಾಲದ ಅವಿಶ್ವಾಸಿಗಳ ಮಾದರಿಯನ್ನು ಅವರು ಪ್ರದರ್ಶಿಸಿದ್ದಾರೆ. **ಅಕಟಾ! ಈ ನಾಮಧಾರಿಗಳಾದ ಮುಸ್ಲಿಮರು ಮೊದಲಿನಂತೆ ಇದನ್ನು ಸಹ ಮಾಡಿದ್ದು ಲೋಕಾನುಗ್ರಹಿಯಾದ, ಜಗತ್ತಿಗೆ ಕರುಣೆಯನ್ನು ಹರಡಲು ಆಗಮಿಸಿದ ಆ ಮಹಾನ್ ಪ್ರವಾದಿಯ ನಾಮದಲ್ಲಿ!** ಈ ಅತ್ಯುತ್ಕೃಷ್ಟ ಪ್ರವಾದಿ ಯುದ್ಧದಲ್ಲಿ ಕೂಡ ಕೆಲವು ನಿಯಮಗಳನ್ನು ಪಾಲಿಸಲು ಕಡ್ಡಾಯಗೊಳಿಸಿದ್ದರು. ಯುದ್ಧಾಪರಾಧಿ ಗಳಾಗಿ ವಧಿಸಲ್ಪಡುವವರ ಕುರಿತು ನೀಡಿದ ನಿರ್ದೇಶವು, ಅರೇಬಿಯಾದಲ್ಲಿ ಸಾಮಾನ್ಯವಾಗಿ ವಾಡಿಕೆಯಲ್ಲಿರುವ ಪ್ರಕಾರ ಮೃತ ಶರೀರದ ಅವಯವಗಳನ್ನು ಛೇದಿಸಬಾರದು, ವಿಕೃತಗೊಳಿಸಬಾರದು ಎಂದಾಗಿದೆ. ಮೃತದೇಹಕ್ಕೆ ಅಪಮಾನ ಮಾಡುವುದು ಎಂದಿಗೂ ಸರಿಯಲ್ಲ. ಈ ವರ್ತನೆ ಧರ್ಮದ ವಿಚಾರದಲ್ಲಿ ಬಿಡಿ, ಮಾನವೀಯತೆಯ ಮೂಲಭೂತ ತತ್ವಕ್ಕೆ ಕೂಡ ವಿರುದ್ಧವಾಗಿದೆ. ಆದರೆ ನಮ್ಮ ಅಹ್ಮದಿ ಸಹೋದರರ ಮೇಲೆ ಅಕ್ರಮವೆಸಗಿದವರು ಅತಿ ಕ್ರೂರ ರೀತಿಯಲ್ಲಿ ಮೃತಶರೀರಕ್ಕೆ ಅಪಮಾನ ಮಾಡಿದ್ದಾರೆ. ಎಷ್ಟರ ಮಟ್ಟಿಗೆಂದರೆ, ಮೃತ ಶರೀರಗಳನ್ನು ಗುರುತಿಸಲಾಗಲಿಲ್ಲ. ಇಲ್ಲಿಗೆ ಬಂದ ಮೊದಲಿನ ವರದಿಯಲ್ಲಿ ಬೇರೆ ಹೆಸರುಗಳಿದ್ದವು. ಆ ಮೃತ ಶರೀರಗಳನ್ನು ಆ ಬಳಿಕ ಪ್ರಯಾಸಪಟ್ಟು ಗುರುತಿಸಿದಾಗ, ಇವು ಬೇರೆಯವರದೆಂದು ತಿಳಿಯಿತು. ಅವರ ಸಂಬಂಧಿಕರು ಬೇರೆ ಕುರುಹುಗಳಿಂದ ಮೃತದೇಹಗಳನ್ನು ಗುರುತಿಸಿದರು. ಈ ಜನರು ಮೃತ ಶರೀರದ ಮೇಲೆ ಕ್ರೂರತೆ ಪ್ರದರ್ಶಿಸುವುದರಲ್ಲಿ ಮಕ್ಕದ ಅವಿಶ್ವಾಸಿಗಳನ್ನು ಕೂಡ ಹಿಂದಿಕ್ಕಿದ್ದಾರೆ. ನಮ್ಮ ಪ್ರಿಯ ಸಹೋದರರ ಹುತಾತ್ಮತೆಯಲ್ಲಿ ಮತ್ತು ಇವರು ಮೃತದೇಹಗಳ ಮೇಲೆ ತೋರಿಸಿದ ಈ ಮೃಗೀಯತೆಯಲ್ಲಿ ನಮ್ಮ ಹೃದಯ ದುಃಖಭರಿತವೂ ಅಸ್ವಸ್ಥವೂ ಆಗಿದ್ದರೂ ನಾನು ಮೊದಲು ಹೇಳಿದಂತೆ ಈ ಜನರು ಈ ಕಟು ಕ್ರೂರಕೃತ್ಯಗಳನ್ನೆಲ್ಲ ನಮ್ಮ ನೇತಾರ ಹಾಗೂ ಮಾನವ ಕುಲದ ಕಾರುಣ್ಯವಂತನೂ ಲೋಕಾನುಗ್ರಹಿಯೂ ಆದ ಮುಹಮ್ಮದ್ ಪೈಗಂಬರರ[ಸ] ನಾಮದಲ್ಲಿ ಎಸಗುತ್ತಿದ್ದಾರೆಂಬುದು ಅತೀವ ದುಃಖಕರವಾಗಿದೆ. ಅಲ್ಲಿರುವ ಪ್ರೆಸ್ ಈ ವಾರ್ತೆಗಳನ್ನು ಪ್ರಕಟಿಸಿವೆ. ಆದರೆ ದೇಶೀಯ ಮತ್ತು ಅಂತರ್ದೇಶೀಯ ವಾರ್ತಾ

ಮಾಧ್ಯಮಗಳು ಅದರ ವೀಡಿಯೋ ದೃಶ್ಯವನ್ನು ತೋರಿಸಲಿಲ್ಲ. ಅವರು ಹೇಳಿದ ಕಾರಣವೇನೆಂದರೆ, ಮಾನವೀಯತೆ ನಾಚಿಕೆಪಡುವ ರೀತಿಯಲ್ಲಿರುವುದರಿಂದ ಆ ದೃಶ್ಯವನ್ನು ತೋರಿಸಲು ನಮ್ಮಿಂದ ಸಾಧ್ಯವಿಲ್ಲ ಎಂದಾಗಿದೆ.

"ಅಲ್‌ಜಝೀರ" ಚಾನೆಲ್ ಸಾಮಾನ್ಯವಾಗಿ ಇಂತಹ ವಾರ್ತೆ ನೀಡುತ್ತದೆ. ಈ ಕ್ರೂರಕೃತ್ಯವನ್ನು ತೋರಿಸಲಿಕ್ಕೆ ಅವರು ಕೂಡ ಹಿಂಜರಿದರು. ಅಲ್‌ಜಝೀರ ವಾರ್ತೆಯಲ್ಲಿ ಹೀಗೆ ಹೇಳಲಾಯಿತು: ಅದು ಭಯಾನಕ ಮತ್ತು ವೇದನಾಯುತ ದೃಶ್ಯವಾಗಿತ್ತು. ಪೋಲೀಸರು ಘಟನೆಯ ಸ್ಥಳದಲ್ಲಿದ್ದರು. ಒಂದು ದೊಡ್ಡ ಜನಕೂಟ ಅಹ್ಮದಿಯರ ಮನೆಗಳನ್ನು ಆಕ್ರಮಿಸಿತು. ಆ ಬಳಿಕ ಕೊಳ್ಳೆ ಮತ್ತು ಕೊಲೆ ನಡೆಯಿತು. ಮೂರು ಮಂದಿಯನ್ನು ನಗ್ನಗೊಳಿಸಿ ಕಲ್ಲುಗಳಿಂದಲೂ ದೊಣ್ಣೆಗಳಿಂದಲೂ ಕತ್ತಿ ಕಠಾರಿಗಳಿಂದಲೂ ಹತ್ಯೆಗೈದರು. ಇದರ ಫೋಟೋಗಳು ಪ್ರದರ್ಶಿಸಲು ಅಸಾಧ್ಯವಾದ ದೃಶ್ಯಗಳಿಂದ ಕೂಡಿವೆ.

ಏಷ್ಯನ್ ಹ್ಯುಮ್ಯಾನಿಟಿ ಕಮೀಶನ್ ಹೇಳುತ್ತದೆ: "ಅಹ್ಮದಿಯರ ವಿರುದ್ಧ ನಡೆದ ಈ ಕ್ರೂರಕೃತ್ಯದ ಕುರಿತು ಇಂಡೋನೇಶ್ಯನ್ ಉಲಮಾ ಕೌನ್ಸಿಲ್, ಊರಿನ ಜನರು ಇದನ್ನು ಸರಿಯೆಂದು ಮನಗಾಣುತ್ತಾರೆ ಎಂದು ಹೇಳುತ್ತದೆ." ಊರಿನ ಜನರು ಎಂಬುದರ ಅರ್ಥ ಈ ಕ್ರೂರ ಕೃತ್ಯ ಎಸಗಿದವರು. ಇದು ಇಂದಿನ ಉಲಮಾ ವರ್ಗದ ಅವಸ್ಥೆಯಾಗಿದೆ. ಇಂದಿಗೆ 1400 ವರ್ಷ ಹಿಂದಿನ ಅಜ್ಞಾನ (ಜಾಹಿಲಿಯ್ಯ) ಕಾಲದಲ್ಲಿ ನಡೆಸಲಾದ ಕ್ರೂರಕೃತ್ಯಗಳನ್ನು ಇಸ್ಲಾಮಿನ ಹೆಸರಿನಲ್ಲಿ ಮಾಡಲು ಮುಸ್ಲಿಮರನ್ನು ಪ್ರೇರೇಪಿಸಲಾಗುತ್ತದೆ.

ಅಂಕಣಕಾರರು ಬರೆಯುತ್ತಾರೆ: "ಈ ಕ್ರೂರಕೃತ್ಯ ಮುಸ್ಲಿಮರು ಮತ್ತು ಕ್ರೈಸ್ತರು ಪರಸ್ಪರ ಹೋರಾಟದ ಕಾರಣವಲ್ಲ ಘಟಿಸಿದ್ದು; ಮುಸ್ಲಿಮರೆಂದು ಹೇಳಿಕೊಳ್ಳುವವರು ಮುಸ್ಲಿಮರ ಮೇಲೆಯೇ ಈ ದುಷ್ಕೃತ್ಯವೆಸಗಿದ್ದಾರೆ. ಈ ಅತಿ ಕ್ರೂರವಾದ ದುಷ್ಕೃತ್ಯದ ದೃಶ್ಯಗಳನ್ನು ಕಾಣಲು ಯಾರಿಗಾದರೂ ಶಕ್ತಿಯಿದ್ದರೆ ಈ ಕ್ರೂರಕೃತ್ಯ ಸಂಪೂರ್ಣವಾಗಿಯೂ ಅಮಾನವೀಯವಾಗಿತ್ತೆಂದು ಅವರಿಗೆ ಮನವರಿಕೆಯಾಗಬಹುದು. ಇಂದಿನ ವಿದ್ಯಾಸಂಪನ್ನರಾದ ಸಂಸ್ಕೃತ ಜನರಿಗೆ ಇವೆಲ್ಲ ಅನ್ಯ. ಈ ಘಟನೆ ಇತರ ನಗರವಾಸಿಗಳನ್ನು ಆಶ್ಚರ್ಯಚಕಿತಗೊಳಿಸಿದೆ." ನಮ್ಮ ಅನೇಕ ಅಹ್ಮದಿ ಸಹೋದರರು ಇದರ ವೀಡಿಯೋ ದೃಶ್ಯ ಕಂಡಿದ್ದಾರೆ. ಕೆಲವು ನಿಮಿಷಗಳ ಹೊರತು ಅದನ್ನು ನೋಡಲು ತಮಗೆ ಸಾಧ್ಯವಾಗುವುದಿಲ್ಲವೆಂದು ಅವರೆಲ್ಲರೂ ನನಗೆ ಬರೆದಿದ್ದಾರೆ. ಓರ್ವ ಸಹೋದರಿ ಬರೆದರು: ನಾನು ಆ ದೃಶ್ಯಗಳನ್ನು ಮಕ್ಕಳಿಗೆ ಕಾಣದಂತೆ ನೋಡಿದೆ. ಅದನ್ನು ನೋಡಿ ನಾನು ಅಳಲು ತೊಡಗಿದೆ. ತಾಯಿ ಏಕೆ ಅಳುತ್ತಿದ್ದಾರೆಂದು ತಿಳಿಯದೆ ಮಕ್ಕಳು ಕಂಗಾಲಾಗಿದ್ದಾರೆ.

ಅಲ್ಜೀರಿಯಾದ ಒಬ್ಬ ಅಹ್ಮದಿ ನನ್ನ ಹತ್ತಿರ ಬಂದು ಹೀಗೆ ಹೇಳಿ ಕಟ್ಟೆಯೊಡೆದು ಅಳಲಾರಂಭಿಸಿದರು: "ಆ ದೃಶ್ಯ ಬಹಳ ಭಯಾನಕವಾಗಿದೆ. ಅದು ಸಹಿಸಲಸದಳ." ಆದರೆ ಈ ಶತ್ರುಗಳು ಅವರ ಮಕ್ಕಳ ಮನಸ್ಸನ್ನು ಕೂಡ ಎಷ್ಟು ಮಾತ್ರ ಕಠಿಣಗೊಳಿಸಿದ್ದಾರೆಂದರೆ ಘಟನೆಯ ಸ್ಥಳದಲ್ಲಿ ಈ ದೃಶ್ಯಗಳನ್ನು ಕಂಡು ಅವರು ಕೈತಟ್ಟಿ ಸಂತೋಷಪಡುತ್ತಿದ್ದರು.

ನ್ಯೂಯೋರ್ಕ್ ಟೈಮ್ಸ್, ಫ್ರಂಟಿಯರ್ ಟೈಮ್ಸ್ ಮೊದಲಾದ ಪತ್ರಿಕೆಗಳೆಲ್ಲ ಈ ರೀತಿಯ ವಾರ್ತೆಗಳನ್ನು ನೀಡಿವೆ. ಜಕಾರ್ತ ಪೋಸ್ಟ್ ಎಂಬ ಪತ್ರಿಕೆಯಲ್ಲಿ ಒಬ್ಬ ಲೇಖಕ ಹೀಗೆ ಬರೆದಿದ್ದಾರೆ: "ಅಹ್ಮದಿಯಾ ಸಂಘಟನೆಯ ಸದಸ್ಯರ ವಿರುದ್ಧ ಈಗಿನ ಆಕ್ರಮಣ ಯಾವುದೇ ಕಾರಣದಿಂದಾದರೂ ಸರಿ, ಇದು ವ್ಯಕ್ತಪಡಿಸುವ ಒಂದು ವಿಚಾರವೇನೆಂದರೆ, ನಮ್ಮ ಸಮೂಹದಲ್ಲಿ ಅಲ್ಪಸಂಖ್ಯಾತರಿಗೆ ಯಾವುದೇ ತರಹದ ಗೌರವವಾಗಲಿ ಅವರ ಮನೋಭಾವನೆಗಳಿಗೆ ಸ್ಥಾನವಾಗಲಿ ಇಲ್ಲ. ಅಹ್ಮದಿಯರು ಮತ್ತು ಇತರ ಧರ್ಮ ಗುಂಪುಗಳು ಈ ದೇಶದ ನಿರ್ಮಾಣದಲ್ಲಿ ತುಲ್ಯಭಾಗಿಗಳಾಗಿದ್ದಾರೆ. ಈ ದುಃಖಕರವಾದ ಘಟನೆ ಇಂಡೋನೇಶ್ಯದ ಚರಿತ್ರೆಯಲ್ಲಿ ಮಾಸದೆ ನೆಲೆಗೊಳ್ಳುವುದು. ಅಹ್ಮದಿಯಾ ಜಮಾಅತಿನ ಅಧ್ಯಾಪನೆ ಅನಿಸ್ಲಾಮಿಕವಾದುದರಿಂದ ಅವರಿಗೆ ಬದುಕುವ ಹಕ್ಕಿಲ್ಲವೆಂದು ಹೇಳುವವರು ಸನ್ಮಾರ್ಗದಿಂದ ಅಗಲಿದವರು. ಇಪ್ಪತ್ತನೆಯ ಶತಮಾನದ ಹೊಸ ಚಿಂತಾಧಾರೆ ಮತ್ತು ಪ್ರಗತಿಪರ ಚಿಂತನೆಯನ್ನು ಇಂಡೋನೇಶ್ಯಕ್ಕೆ ಅಹ್ಮದೀ ವಿದ್ವಾಂಸರು ನೀಡಿದ್ದಾರೆ. ನಮ್ಮ ನಾಯಕರಲ್ಲಿ ಅಧ್ಯಕ್ಷ ಸುಕಾರ್ನೋ ಪವಿತ್ರ ಖುರ್‌ಆನನ್ನು ಕಲಿತದ್ದು ಅಹ್ಮದೀ ಪಂಡಿತನ ಬರಹದಿಂದ. ಆ ಮೂಲಕ ಪವಿತ್ರ ಖುರ್‌ಆನ್ ಏನೆಂದು ಅವರಿಗೆ ಮನವರಿಕೆಯಾಯಿತು. ಹಾಗೆ ಅವರಿಗೆ ಜ್ಞಾನವರ್ಧನೆಯಾಯಿತು. ಈ ಅಲ್ಪಸಂಖ್ಯಾತ ಪಕ್ಷವನ್ನು ನಾವು ಕೃತಜ್ಞತಾಪೂರ್ವಕ ಸ್ಮರಿಸುತ್ತೇವೆ. ಅಹ್ಮದಿಯಾ ಜಮಾಅತ್ ಈ ದೇಶಕ್ಕೋಸ್ಕರ ಸಲ್ಲಿಸಿದ ಸೇವೆಗಳು ಅಮೂಲ್ಯವಾಗಿವೆ." ಇದು ಆ ಲೇಖಕ ಬರೆದ ಲೇಖನದ ಸಂಕ್ಷೇಪವಾಗಿದೆ. ಈ ಲೇಖಕ ಜಕಾರ್ತ ವಿಶ್ವವಿದ್ಯಾಲಯದ ಲೆಕ್ಚರರ್ ಆಗಿದ್ದಾರೆ. ಜಕಾರ್ತ ಗ್ಲೋಬ್, ಜಕಾರ್ತ ಪೋಸ್ಟ್ ಮೊದಲಾದ ಪತ್ರಿಕೆಗಳು ಇದಕ್ಕೆ ಸಂಬಂಧಿಸಿದ ವಾರ್ತೆಗಳನ್ನು ನೀಡಿವೆ. ಈ ಕ್ರೂರಕೃತ್ಯವನ್ನು ಅತಿಶಕ್ತಿಯಾದ ಭಾಷೆಯಲ್ಲಿ ಖಂಡಿಸಿವೆ. ಕನಿಷ್ಠ ಪಕ್ಷ ಅಲ್ಲಿನ ಮಾಧ್ಯಮಗಳಲ್ಲೂ ವಿದ್ಯಾಸಂಪನ್ನರಲ್ಲೂ ದುಷ್ಕೃತ್ಯಕ್ಕೆ ವಿರುದ್ಧವಾಗಿ ಶಬ್ದವೆತ್ತುವ ಗುಣವಾದರೂ ಕಂಡುಬರುತ್ತದೆ. ಇದಕ್ಕೆ ವಿರುದ್ಧವಾಗಿ ಮಾತನಾಡಲು ಜನರಿದ್ದಾರೆ. ಇದು ಸಮೂಹದ ಅಭಿವೃದ್ಧಿಯ ಲಕ್ಷಣವಾಗಿದೆ. ಇಂತಹ ಧೀರತೆ ಪಾಕಿಸ್ಥಾನದ ವಿದ್ಯಾಸಂಪನ್ನರಿಗೂ ಸುದ್ದಿ ಮಾಧ್ಯಮಗಳಿಗೂ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ಅಹ್ಮದಿಯಾ ಜಮಾಅತಿನೊಡನೆ ಇರುವ ವಿರೋಧ ಇಂಡೋನೇಶ್ಯದಲ್ಲಿ ಹೊಸತಲ್ಲ. ದೈವಿಕ ಸಂಘಟನೆಗಳೊಂದಿಗೆ ತಾಗೂತಿ ಶಕ್ತಿಗಳು ಪೂರ್ವ ಕಾಲದಿಂದಲೇ ವರ್ತಿಸಿದ ರೀತಿ ಇದೇ ಆಗಿದೆ. ಇದು ಶೈತಾನನ ರೀತಿಯಾಗಿದೆ. ಅಹ್ಮದಿಯಾ ಜಮಾಅತಿಗೆ ಯಾವುದೇ ರೀತಿಯಲ್ಲಿ, ಮುಖ್ಯವಾಗಿ ಇಸ್ಲಾಮಿಕ ರಾಷ್ಟ್ರಗಳಲ್ಲಿ, ವಿರೋಧಗಳನ್ನು ಸಹಿಸಬೇಕಾಗಿ ಬಂದಿದೆ. ವಿರೋಧ ಉಂಟಾಗುತ್ತಲೇ ಇರುತ್ತದೆ. ಇಂಡೋನೇಶ್ಯದಲ್ಲಿ ಮುಲ್ಲಾಗಳು ಸನ್ಮಾರ್ಗದಿಂದ ಅಗಲಿಕೊಂಡೇ ಇರುತ್ತಾರೆ. ಇಂಡೋನೇಶ್ಯದಲ್ಲಿ ಅವರು ಅಹ್ಮದಿಯಾ ಜಮಾಅತನ್ನು ಸದಾ ವಿರೋಧಿಸುತ್ತಲೇ ಇದ್ದಾರೆ. ಮುಲ್ಲಾಗಳು ಯಾವ ಊರಿನಲ್ಲಿದ್ದರೂ ಅವರ ರೀತಿ ಇದೇ ಆಗಿದೆ. ಸತ್ಯವನ್ನು ಅವರು ಸ್ವೀಕರಿಸಲಾರರು. ಕಾರಣವೇನೆಂದರೆ, ಅವರ ವೈಯಕ್ತಿಕ ಆಸಕ್ತಿ ಇದರಲ್ಲಿ ಮರೆಯಾಗಿದೆ. ಸತ್ಯವನ್ನು ಅಂಗೀಕರಿಸಿದರೆ ಅವರ ವರಮಾನ ತಡೆಯಲ್ಪಡುವುದೆಂದೂ ಅವರ ಬೆಲೆ ಇಲ್ಲದಾಗುವುದೆಂದೂ ಅವರ ಜ್ಞಾನದ ಪೊಳ್ಳುತನ ಬಯಲಾಗುವುದೆಂದೂ ಅವರು ಭಯಪಡುತ್ತಾರೆ.....

ಇಂಡೋನೇಶ್ಯದ ಈ ಹುತಾತ್ಮರು ಉತ್ತಮ ಮಾದರಿ ತೋರಿಸುತ್ತಾ ಈ ಲೋಕವನ್ನು ತ್ಯಜಿಸಿ ಅವರ ಪ್ರಭುವಿನ ಸನ್ನಿಧಿಯಲ್ಲಿ ಹಾಜರಾಗಿದ್ದಾರೆ. ಖಾದಿಯಾನ್‌ನಿಂದ ಸಾವಿರಾರು ಮೈಲುಗಳಷ್ಟು ದೂರವಿದ್ದರೂ ಮಸೀಹ್ ಮೌಊದರ(ಅ) ಸತ್ಯತೆಯನ್ನು ಪ್ರಕಾಶಮಯವಾಗಿ ಬದಲಾಯಿಸಿದರು. ಆದರೆ ಬಾಕಿಯಾಗಿರುವ ನಾವು ಸಹ ನಮ್ಮ ವಿಶ್ವಾಸವನ್ನು ಸದಾ ಪರೀಕ್ಷಿಸಬೇಕಾಗಿದೆ. ಪ್ರತಿಯೊಂದು ಶಹಾದತ್‌ನ ಬಳಿಕ ನಾವು ಮಾಡಬೇಕಾದ ಪ್ರತಿಜ್ಞೆಯೇನೆಂದರೆ, ಈ ಆಕ್ರಮಣಗಳ ಕಾರಣವಾಗಿ ಎಂದಿಗೂ ನಮ್ಮ ವಿಶ್ವಾಸವನ್ನು ತ್ಯಜಿಸಲಾರೆವೆಂದು ಮಾತ್ರವಲ್ಲ, ವಿಶ್ವಾಸದಲ್ಲಿ ಮುನ್ನೇರಲು ಪ್ರಯತ್ನಿಸುವೆವು – ಇನ್‌ಶಾಅ್ ಅಲ್ಲಾಹ್. ನಮ್ಮ ಈ ಪಾರಂಪರ್ಯ ರೀತಿಗಾಗಲಿ ನಮ್ಮ ಅಭಿಮಾನಕ್ಕಾಗಲಿ ಕೇಡುಂಟಾಗುವ ಯಾವುದೇ ವರ್ತನೆ ನಮ್ಮಿಂದ ಉಂಟಾಗಲಿಕ್ಕಿಲ್ಲ. ನಮ್ಮ ದೇಶಪ್ರೇಮಕ್ಕೂ ಏನೂ ಕುಂದುಂಟಾಗಲಾರದು.

# ಪ್ರಕೃತಿ ಕ್ಷೋಭೆಯೋ ದೈವಿಕ ಶಿಕ್ಷೆಯೋ?

★ ಮೌಲಾನ ಮುಹಮ್ಮದ್ ಉಮರ್
ನಾಇಬ್ ನಾಝಿರ್ ಅಶ್‌ಲಾ, ಖಾದಿಯಾನ್

**ಜನರು ದುಷ್ಕರ್ಮಿಗಳಾಗುವಾಗ ದೇವನು ಪ್ರಕೃತಿಕ್ಷೋಭೆಯ ರೀತಿಯಲ್ಲೂ ಇನ್ನಿತರ ವಿಧಗಳಲ್ಲೂ ಶಿಕ್ಷಿಸುತ್ತಾನೆ. ಪವಿತ್ರ ಖುರ್‌ಆನ್ ಪುನರಾವರ್ತಿಸಿ ಎಚ್ಚರಿಸುವ ಈ ಪ್ರಕೃತಿ ನಿಯಮ ಈಗಲೂ ಜಾರಿಯಲ್ಲಿರುವುದೆಂದು ಪಾಕಿಸ್ಥಾನದ ಘಟನೆಗಳು ನಮ್ಮ ನೆನಪಿಗೆ ತರುತ್ತವೆ.**

ಚಿಕ್ಕ ಪ್ರಳಯವನ್ನು ನೆನಪಿಸುವ ವಿಧದಲ್ಲಿ ಪಾಕಿಸ್ಥಾನದಲ್ಲಿ ಪದೇ ಪದೇ ಘಟಿಸುತ್ತಿರುವ ಪ್ರಕೃತಿ ವಿಕೋಪಗಳೂ ದುರಂತಗಳೂ ನೀಡುವ ಪಾಠವೇನು? ಇವು ಬರೇ ಯಾದೃಚ್ಛಿಕ ಘಟನೆಗಳೇ? ಅಥವಾ ಆಕ್ರಮಣಗಳೂ ಅನೀತಿಯೂ ತಾಂಡವವಾಡುತ್ತಿರುವ ಒಂದು ದೇಶದಲ್ಲಿ ದೇವನಿಂದ ಉಂಟಾದ ತಿರುಗೇಟೇ? ದುಷ್ಕರ್ಮಿಗಳ ಮೇಲೆ ದೇವನಿಂದ ಎರಗಿದ ಶಿಕ್ಷೆಯ ಖುರ್‌ಆನಿಕ ಗುಣಪಾಠಗಳ ಆಧಾರದಲ್ಲಿ ಪಾಕಿಸ್ಥಾನದಲ್ಲಿ ಘಟಿಸುತ್ತಿರುವ ದುರಂತಗಳೂ ದೇಶೀಯ ನಷ್ಟಗಳೂ ದೇವಶಿಕ್ಷೆಯೆಂದು ಮನಗಾಣಲು ಪ್ರಯಾಸವಿಲ್ಲ.

2010 ಮೇ 28 ಶುಕ್ರವಾರ ಜುಮುಅ ನಮಾಝ್‌ಗೆ ಸ್ವಲ್ಪ ಮುಂಚೆ ಲಾಹೋರಿನ ದಾರುದ್ದಿಕ್ರ್, ಬೈತುನ್ನೂರ್ ಎಂಬೀ ಎರಡು

---

ನಾನು ಮೊದಲು ಹೇಳಿದಂತೆ ಇಂಡೋನೇಶ್ಯದ ನಿರ್ಮಾಣದಲ್ಲಿ ಸಹ ನಮ್ಮ ಜಮಾಅತ್ ದೊಡ್ಡ ಪಾತ್ರವಹಿಸಿದೆ. ಅಹ್ಮದಿಯಾ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಯಾವುದೇ ದೇಶದಲ್ಲಿ ವಾಸಿಸುವವ ನಾಗಿದ್ದರೂ ಆ ದೇಶದ ಪ್ರೇಮಿಯಾಗಿರುತ್ತಾನೆ – ಇನ್‌ಶಾಅ್ ಅಲ್ಲಾಹ್ – ಸದಾ ದೇಶಪ್ರೇಮಿಯಾಗಿರುತ್ತಾನೆ.

ದೇಶದ ಮೇಲಿನ ಪ್ರೇಮ, ದೇಶಕ್ಕಾಗಿ ಪ್ರಾರ್ಥಿಸಬೇಕೆಂದು ನಮ್ಮನ್ನು ಅಗತ್ಯಪಡಿಸುತ್ತದೆ. ನಮ್ಮ ದೇಶಗಳನ್ನು ಅಕ್ರಮಿಗಳ ಕೈಯಿಂದ ಅಲ್ಲಾಹನು ವಿಮುಕ್ತಗೊಳಿಸಲಿ. ಕರುಣೆ ತೋರಿಸಲು ತಿಳಿಯದ ಯಾವನೇ ವ್ಯಕ್ತಿಯನ್ನು ಅಲ್ಲಾಹನು ನಮ್ಮ ಮೇಲೆ ಆಡಳಿತೆಗಾರರನ್ನಾಗಿ ಮಾಡದಿರಲಿ. ಭೌತಿಕ ವಿಚಾರಗಳಿಗೋಸ್ಕರ ಕಾನೂನು ವ್ಯವಸ್ಥೆಯನ್ನು ನಾವು ಸಮೀಪಿಸುತ್ತೇವೆ. ಆದರೆ ಎಂದಿಗೂ ನಾವು ಕಾನೂನನ್ನು ಕೈಗೆತ್ತಿಕೊಳ್ಳುವುದಿಲ್ಲ. ನಮ್ಮ ಪ್ರಭುವಿನ ಮುಂದೆ ನಾವು ಸಾಷ್ಟಾಂಗ ಪ್ರಣಾಮ ಮಾಡುತ್ತೇವೆ. ಕಾನೂನು ಕ್ರಮಗಳ ಕಡೆಗೆ ಹೋಗುವುದಕ್ಕಿಂತ ಹೆಚ್ಚು ನಮ್ಮ ಆಶ್ರಯ ನಮ್ಮ ಪ್ರಭುವಿನ ಮುಂದೆ ಸಾಷ್ಟಾಂಗವೆರಗುವುದರಲ್ಲಾಗಿದೆ. ಅವನೊಡನೆ ಪ್ರಾರ್ಥಿಸುತ್ತಾ ಅವನ ಸಹಾಯದಲ್ಲಿ ನಾವು ಆಶ್ರಯ ಪಡೆಯುತ್ತೇವೆ. ಅವನ ಕಾರುಣ್ಯವನ್ನು ನಾವು ನಿರೀಕ್ಷಿಸುತ್ತೇವೆ. ಇನ್ನೂ ಸಹ ನಾವು ಅಲ್ಲಾಹನ ಪವಿತ್ರ ಸನ್ನಿಧಿಯಲ್ಲೇ ಸಾಷ್ಟಾಂಗ ವೆರಗುತ್ತೇವೆ. ಸದಾ ಹೀಗೆ ಪ್ರಾರ್ಥಿಸಿರಿ:

**"ರಬ್ಬನಾ ಅಫ್‌ರಿಗ್ ಅಲೈನಾ ಸಬ್‌ರನ್ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್‌ಕೌಮಿಲ್ ಕಾಫಿರೀನ್."** ಅಂದರೆ, ನಮ್ಮ ಪ್ರಭೂ, ನಮಗೆ ನೀನು ಸಹನೆಯನ್ನು ಕರುಣಿಸು. ನಮ್ಮ ಪಾದಗಳನ್ನು ನೀನು ದೃಢಪಡಿಸು. ಅವಿಶ್ವಾಸಿಗಳ ವಿರುದ್ಧ ನಮಗೆ ನೀನು ಸಹಾಯಮಾಡು."

ನಮ್ಮ ಪೈಕಿ ಯಾರಿಗೂ ಪಾದ ಶಕ್ತಿಗುಂದುವ ಒಂದು ಅವಸ್ಥೆಯನ್ನು ಅಲ್ಲಾಹನು ಉಂಟುಮಾಡದಿರಲಿ. ಹಝ್ರತ್ ಮಸೀಹ್ ಮೌಊದ್[ಅ] ಹಝ್ರತ್ ಪೈಗಂಬರರನ್ನು[ಸ] ಸ್ಮರಿಸುತ್ತಾ ಹೇಳುತ್ತಾರೆ: "ಪೈಗಂಬರ್[ಸ] ತನ್ನ ಶಿಷ್ಯರಿಗೆ ಸಹನೆ ಕೈಗೊಳ್ಳಲಿಕ್ಕೆಯೇ ಉಪದೇಶಿಸಿದ್ದರು. ಕೊನೆಗೆ ಎಲ್ಲ ಶತ್ರುಗಳು ನಾಶವಾದರು. ಒಂದು ಕಾಲ ಬರುವುದು. ಈ ದುಷ್ಕರ್ಮಿಗಳು ಸಹ ನಾಶವಾಗುವರು. ಈ ಪವಿತ್ರ ಜಮಾಅತನ್ನು ಲೋಕದಲ್ಲಿ ವ್ಯಾಪಿಸಲು ಅಲ್ಲಾಹು ಇಚ್ಛಿಸುತ್ತಾನೆ. ಅಲ್ಲಾಹನು ಉದ್ದೇಶಿಸಿದ್ದರೆ ಇವರು ನಮ್ಮನ್ನು ನೋಯಿಸುತ್ತಿರಲಿಲ್ಲ. ನೋಯಿಸುವವರು ಇರುತ್ತಿರಲಿಲ್ಲ. ಆದರೆ ಇವರ ಮೂಲಕ ಅಲ್ಲಾಹನು ಸಹನೆಯ ಅಧ್ಯಾಪನೆಯನ್ನು ನೀಡಲು ಉದ್ದೇಶಿಸುತ್ತಾನೆ. ನಮ್ಮನ್ನು ನೋಯಿಸುವವರು ಒಂದು ವೇಳೆ ಪಶ್ಚಾತ್ತಾಪಪಡುವರು ಅಥವಾ ನಾಶಗೊಳ್ಳುವರು. ನಮ್ಮನ್ನು ನೋಯಿಸುವವರಲ್ಲಿ ಕೆಲವರು ಸರಿಯಾಗುವರು. ಅವರು ಪಶ್ಚಾತ್ತಾಪ ಪಟ್ಟು ಮರಳುವರು ಅಥವಾ ನಾಶವಾಗುವರು."

ಆದುದರಿಂದ ಪ್ರಾರ್ಥನೆ ಮತ್ತು ಸಹನೆಯೊಂದಿಗೆ ನಮ್ಮ ಉದ್ದೇಶ ಸಾಧನೆಗೋಸ್ಕರ ಪ್ರತಿಯೊಬ್ಬ ಅಹ್ಮದಿ ಮುನ್ನುಗ್ಗಬೇಕಾದುದು ಕಡ್ಡಾಯವಾಗಿದೆ. ಅಲ್ಲಾಹು ನಮಗೆ ಸಹಿಸುವ ಮತ್ತು ಕ್ಷಮಿಸುವ ಶಕ್ತಿ ನೀಡಲಿ. ದುಷ್ಕರ್ಮಿಗಳನ್ನು ನಾಶಪಡಿಸಲಿ.

ಅಲ್ಲಾಹು ಹಝ್ರತ್ ಮಸೀಹ್ ಮೌಊದರಿಗೆ ನೀಡಿದ ವಾಗ್ದಾನಗಳು ಈಡೇರುವುದನ್ನು ನಾವು ಕಾಣುವವರಾಗಲಿ. ಅಲ್ಲಾಹು ಅವನ ಸಂರಕ್ಷಣೆಯಲ್ಲಿ ನಮ್ಮನ್ನು ಇರಿಸಲಿ. ಶತ್ರುಗಳನ್ನು ಹಿಡಿಯಲಿ. ನಮ್ಮ ಶತ್ರುಗಳಿಗೆ ನಮ್ಮೊಡನೆ ವೈಯಕ್ತಿಕವಾದ ವಿರೋಧವೇನೂ ಇಲ್ಲ. ಹಝ್ರತ್ ಮಸೀಹ್ ಮೌಊದರೊಡನೆ ಇರುವ ಶತ್ರುತೆ ಕಾರಣದಿಂದ ಇವರು ಹೀಗೆಲ್ಲ ಮಾಡುತ್ತಾರೆ. ಈ ಸ್ವಭಾವ ಎಲ್ಲ ಕಡೆಗಳಲ್ಲೂ ಅದರ ಪರಮ ಸೀಮೆಯನ್ನು ತಲಪುತ್ತಿದೆ. ಅಲ್ಲಾಹು ಶತ್ರುಗಳನ್ನು ಪಾಠ ಕಲಿಯುವಂತಹ ದೃಷ್ಟಾಂತವಾಗಿ ಮಾರ್ಪಡಿಸಲಿ. ಯಾರ ಬಗ್ಗೆ ಅವರು ಸುಧಾರಿಸಲ್ಪಡಲಾರರೆಂದು ಅಲ್ಲಾಹನು ಬಲ್ಲನೋ ಅವರನ್ನು ಬೇಗನೆ ಹಿಡಿಯುವ ವ್ಯವಸ್ಥೆಯನ್ನು ಅಲ್ಲಾಹನು ಸಿದ್ಧಗೊಳಿಸಲಿ.

ಗಾಯಗೊಂಡವರಿಗೋಸ್ಕರ ಸಹ ದುಆ ಮಾಡಿರಿ. ಅಲ್ಲಾಹು ಅವರನ್ನು ಬೇಗನೆ ಗುಣಪಡಿಸಲಿ. ಇಂಡೋನೇಶ್ಯನ್ ಅಹ್ಮದಿಯರೊಂದಿಗೆ ವಿಶಿಷ್ಟವಾಗಿ ನನಗೆ ಹೇಳಲಿಕ್ಕಿರುವುದೇನೆಂದರೆ, ಜಗತ್ತಿನಲ್ಲಿರುವ ಎಲ್ಲಾ ಅಹ್ಮದಿಯರ ದುಆ ನಿಮ್ಮೊಂದಿಗಿದೆ. ಅನೇಕ ಜನರಿಂದ ನನಗೆ ಪತ್ರಗಳು ಬರುತ್ತಿವೆ. ನಿಮ್ಮನ್ನು ನೆನೆಸಿ ಅವರು ಅಸ್ವಸ್ಥಗೊಂಡಿದ್ದಾರೆ. ವಿವಿಧ ವೆಬ್‌ಸೈಟ್‌ಗಳಲ್ಲಿ ತೋರಿಸಲಾದ ಕ್ರೂರತೆಯ ಆ ದೃಶ್ಯಗಳು ಪ್ರತಿಯೊಬ್ಬ ಅಹ್ಮದಿಯನ್ನು ನೋವು ಮತ್ತು ದುಃಖದಲ್ಲಿ ಮುಳುಗಿಸಿದೆ. ಆ ಕಾರಣದಿಂದ ಅವರು ನಿಮಗೋಸ್ಕರ ಪ್ರಾರ್ಥನಾನಿರತರಾಗಿದ್ದಾರೆ. ಅಲ್ಲಾಹು ಪ್ರತಿಯೊಬ್ಬ ಅಹ್ಮದಿಯನ್ನು ತನ್ನ ಸಂರಕ್ಷಣೆಯಲ್ಲಿರಿಸಲಿ. ಶತ್ರುಗಳ ಯೋಜನೆಗಳನ್ನು ಅವರ ವಿರುದ್ಧವೇ ತಿರುಗಿಸಲಿ.

☆

*(ಭಾಷಾಂತರ : ಮುಹಮ್ಮದ್ ಯೂಸುಫ್)*

ಅಹ್ಮದಿಯಾ ಮಸೀದಿಗಳಲ್ಲಿ ನಡೆದ ಭೀಕರ ಆಕ್ರಮಣದಲ್ಲಿ ನಿರ್ದೋಷಿಗಳೂ ನಿರಪರಾಧಿಗಳೂ ಆದ 86 ಅಹ್ಮದಿಯರು ಹುತಾತ್ಮರಾದರು ಮತ್ತು ಸುಮಾರು 120 ಮಂದಿ ಗಾಯಗೊಂಡರು. ಆ ಬಳಿಕ ಹಲವು ಪ್ರಕೃತಿ ದುರಂತಗಳು ಪಾಕಿಸ್ಥಾನವನ್ನು ಬೇಟೆಯಾಡುತ್ತಿವೆ. ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ ಹೀಗೆ ಹೇಳಿದರು:

"ವಿರೋಧಿಗಳು ಸುಸಂಘಟಿತವಾದ ರೀತಿಯಲ್ಲಿ ಅಹ್ಮದಿಯಾ ಜಮಾಅತಿಗೆ ನಷ್ಟವನ್ನುಂಟುಮಾಡಲು ಪ್ರಯತ್ನಿಸಿದುದಕ್ಕೆ ಪ್ರತಿಕಾರ ಮಾಡಲು ಅಲ್ಲಾಹು ಸರ್ವಶಕ್ತನಾಗಿದ್ದಾನೆ. ಯಾವ ರೀತಿಯಲ್ಲಿ ಅವನು ತನ್ನ ಸುಶಕ್ತ ಕೈಯನ್ನು ಪ್ರಯೋಗಿಸುವನೆಂದು ಹಾಗೂ ಈ ಗಲಭೆ ಮತ್ತು ದುಷ್ಕೃತ್ಯ ಮಾಡಿದವರನ್ನು ಹೇಗೆ ಹಿಡಿದು ಶಿಕ್ಷಿಸುವನೆಂಬ ವಿಚಾರ ಅಲ್ಲಾಹನಿಗೆ ಮಾತ್ರ ಗೊತ್ತು. ಆದರೆ ಈ ಜನರು ಪುನಃ ಪುನಃ ಅಲ್ಲಾಹನ ಅಭಿಮಾನಕ್ಕೆ ಸವಾಲೆಸೆಯುತ್ತಿದ್ದಾರೆ. ದುಷ್ಕೃತ್ಯಗಳಲ್ಲಿ ಮುನ್ನೇರುತ್ತಿದ್ದಾರೆ. ಖಂಡಿತವಾಗಿಯೂ ಅಲ್ಲಾಹು ಇವರಿಗೆ ಗುಣಪಾಠದ ದೃಷ್ಟಾಂತವನ್ನು ತೋರಿಸಿಕೊಡುವನು. ಇನ್‌ಶಾಅ್ ಅಲ್ಲಾಹ್. ನಿಶ್ಚಯವಾಗಿಯೂ ಇದು ಘಟಿಸುವುದು."

("ಅಲ್‌ಫಝ್ಲ್ ಇಂಟರ್‌ನೇಶನಲ್" - 4 ಜೂನ್ 2010)

ನಾವು ನಮ್ಮ ವಿಚಾರವನ್ನು ಅಲ್ಲಾಹನಿಗೆ ಒಪ್ಪಿಸಿರುವೆವೆಂದು ಅದರ ನಂತರದ ಶುಕ್ರವಾರ ಪ್ರವಚನದಲ್ಲಿ ಅವರು ಹೇಳಿದರು.


("ಅಲ್‌ಫಝ್ಲ್" 8 ಜೂನ್ 2010).

ಆ ಬಳಿಕ ಜರ್ಮನಿಯಲ್ಲಿ ನಡೆದ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಜೂನ್ 27ರಂದು ಮಾಡಿದ ಸಮಾರೋಪ ಪ್ರವಚನದಲ್ಲಿ ಹೀಗೆ ಹೇಳಿದರು:

"ಇಂದು ಸಹ ಪಾಕಿಸ್ಥಾನದಲ್ಲಿ ಅಹ್ಮದಿಯಾ ಜಮಾಅತಿಗೆ ವಿರುದ್ಧವಾಗಿ ಸುಸಂಘಟಿತವಾಗಿ ನಡೆಸಲಾಗುವ ಆಕ್ರಮಣ ಅತಿ ಮೃಗೀಯವೂ ಕ್ರೂರವೂ ಆದ ರೂಪದಲ್ಲಿ ಲಾಹೋರ್‌ನಲ್ಲಿ ಘಟಿಸಿತು. ಈ ಧಾಳಿ ದೈವಿಕಗೃಹವಾದ ಮಸ್ಜಿದ್‌ನಲ್ಲಿ ದೇವಾರಾಧನೆ ಮಾಡುತ್ತಿದ್ದ ನಿರಾಯುಧರಾದ ಅಹ್ಮದಿಯರ ಮೇಲೆ ನಡೆಸಲಾಯಿತು. ಆ ಪರಿಸ್ಥಿತಿ ಈಗಲೂ ಮುಂದುವರಿಯುತ್ತಿದೆ. ಅಹ್ಮದಿಯರು ಇಂದು ಸಹ ಪ್ರಾರ್ಥನೆಯಲ್ಲಿ ಮಗ್ನರಾಗಿದ್ದಾರೆ. ಏನು, ಅಲ್ಲಾಹನು ಈ ಪ್ರಾರ್ಥನೆಗಳನ್ನು ಸ್ವೀಕರಿಸಲಾರನೇ? ಖಂಡಿತವಾಗಿಯೂ ಅವನು ಈ ಪ್ರಾರ್ಥನೆಗಳನ್ನು ಆಲಿಸುವನು. ಇದು ಅವನ ವಾಗ್ದಾನವಾಗಿದೆ. ಅಲ್ಲಾಹನ ನಾಮದಲ್ಲಿ ಅಲ್ಲಾಹನೊಂದಿಗೆ ಸಂಬಂಧವಿರುವವರೊಡನೆ ಮಾಡಲಾದ ಈ ದುಷ್ಕೃತ್ಯ ಅಲ್ಲಾಹನ ಅಭಿಮಾನಕ್ಕೆ ಕ್ಷತವನ್ನುಂಟುಮಾಡದಿದ್ದೀತೇ? ನಿಶ್ಚಯವಾಗಿಯೂ ಅವನು ತನ್ನ ಅಭಿಮಾನವನ್ನು ಪ್ರದರ್ಶಿಸದಿರಲಿಕ್ಕಿಲ್ಲ. ಎಲೈ ಅಹ್ಮದಿಯರೇ, ನಿಮ್ಮ ಮೇಲೆ ನಡೆಸಲಾಗಿರುವ ಈ ದುಷ್ಕೃತ್ಯದಲ್ಲಿ ನೀವು ಪರವಶರಾಗದಿರಿ. ದೇವನೊಂದಿಗೆ ಸಂಬಂಧವಿದ್ದ ಜನರ ಮೇಲೆ ಸದಾ ಹೀಗೆ ವರ್ತಿಸಲಾಗಿತ್ತು. ಈ ದುಷ್ಕರ್ಮಿಗಳ ವಿಚಾರವನ್ನು ಅಲ್ಲಾಹನಿಗೆ ಒಪ್ಪಿಸಿರಿ. ಅಲ್ಲಾಹು ಈ ಅಕ್ರಮಿಗಳನ್ನು ಹಿಡಿಗೂಡುವನು. ಖಂಡಿತವಾಗಿಯೂ ಅವನು ಹಿಡಿಗೂಡುವನು. ನಮ್ಮ ಕರ್ತವ್ಯ ಅಲ್ಲಾಹನ ಪಾವನ ಸನ್ನಿಧಿಯಲ್ಲಿ ಶಿರಬಾಗುವುದಾಗಿದೆ. ಅವನ ಕರುಣೆಯನ್ನು ಬೇಡುವುದಾಗಿದೆ."

("ಅಲ್‌ಫಝ್ಲ್ ಇಂಟರ್‌ನೇಶನಲ್" - 30 ಜುಲಾಯಿ 2010)

ಆ ಬಳಿಕ ಅಲ್ಲಾಹನ ಶಕ್ತಿ ಪ್ರದರ್ಶನ ಪಾಕಿಸ್ಥಾನದಲ್ಲಿ ಎಲ್ಲೆಲ್ಲೂ ಉಂಟಾದ ಜಲಪ್ರಳಯದ ಮೂಲಕ ಆರಂಭಿಸಿತು. ಆ ಜಲಪ್ರಳಯದ



ಬಗ್ಗೆ ಪ್ರಧಾನ ಮಂತ್ರಿ ಯೂಸುಫ್‌ರಜಾ ಗೀಲಾನಿ, ಪಾಕಿಸ್ಥಾನದ ಚರಿತ್ರೆಯಲ್ಲಿ ಅತಿದೊಡ್ಡ ಆಪತ್ತೆಂದು ಹೇಳಿದರು. ಜಲಪ್ರವಾಹದಿಂದ ದೇಶಕ್ಕೆ 4300 ಕೋಟಿ ಡಾಲರ್‌ನ ನಷ್ಟವಾಯಿತು ಮತ್ತು 2 ಕೋಟಿಗಿಂತ ಮಿಕ್ಕಿದ ಜನರು ಬಾಧಿಸಲ್ಪಟ್ಟರು. 12 ಲಕ್ಷ ಮನೆಗಳೂ ಸಾವಿರಕ್ಕೆ ಮಿಕ್ಕಿ ಸೇತುವೆಗಳೂ 4000 ಕಿಲೋಮೀಟರ್ ರಸ್ತೆಗಳೂ 18 ಲಕ್ಷ ಎಕ್ರೆ ಕೃಷಿ ಸ್ಥಳಗಳೂ ನಾಶಗೊಂಡವೆಂದೂ ಗೀಲಾನಿ ಹೇಳಿದರು. ("ಜಂಗ್" ದೈನಿಕ, ಲಾಹೋರ್ - 1 ಸಪ್ಟೆಂಬರ್ 2010 - ಪುಟ 13)

ವಿಶ್ವಸಂಸ್ಥೆಯ ಒಂದು ಅವಲೋಕನ ಪ್ರಕಾರ 2000 ಮಂದಿ ಸಾವನ್ನಪ್ಪಿದರು. 2 ಕೋಟಿ 10 ಲಕ್ಷ ಮಂದಿಗೆ ಜಲಪ್ರವಾಹದ ಕೇಡು ಬಾಧಿಸಿತು. 17 ದಶಲಕ್ಷ ಎಕ್ರೆ ಭೂಮಿ ನಾಶವಾಯಿತು. 4 ಲಕ್ಷ ಮನೆಗಳು ವಾಸಕ್ಕೆ ಅನರ್ಹವಾದವು. 17600 ಶಾಲೆಗಳು ಮತ್ತು 486 ನಿರಾಶ್ರಿತ ಕೇಂದ್ರಗಳು ನಾಶವಾದವು. 12 ಲಕ್ಷಕ್ಕೆ ಮಿಕ್ಕಿದ ಜಾನುವಾರುಗಳು ಸತ್ತುಹೋದವು. Asian Developments Banksನ ಲೆಕ್ಕ ಪ್ರಕಾರ 69 ಬಿಲಿಯನ್ ಡಾಲರ್‌ನ ನಷ್ಟವಾಯಿತು.

ಇದು ದೇವನ ಕಡೆಯಿಂದ ಶಿಕ್ಷೆಯೆಂದು ಹಲವು ರಾಜಕೀಯ, ಧಾರ್ಮಿಕ ನೇತಾರರು ಹೇಳಿದರು. ಪಾಕಿಸ್ಥಾನ್ ಜಮಾಅತುಲ್ ಉಲಮಾಯೆ ಇಸ್ಲಾಮಿನ ಅಮೀರ್, ದೇವ್‌ಬಂದ್ ಪಂಡಿತ ಮತ್ತು ರಾಜಕೀಯ ನೇತಾರ ಮೌಲಾನ ಫಝ್‌ಲುರ್‌ರ್ರಹ್ಮಾನ್, ನಾಡಿನಲ್ಲಿ ಎಲ್ಲೆಲ್ಲೂ ಉಂಟಾದ ಜಲಪ್ರಳಯವು ಜನರು ದೈವಿಕ ಆಜ್ಞೆಗಳಿಂದ ಮುಖ ತಿರುಗಿಸಿದುದರ ಪರಿಣಾಮವೆಂದು ಹೇಳಿದರು.

(ದಿನಪತ್ರಿಕೆ "ಲಾಯಲ್‌ಪುರ್" ಪಾಕಿಸ್ಥಾನ್ - 15 ಆಗಸ್ಟ್, 2010)

ಮಿನ್‌ಹಾಜುಲ್ ಖುರ್‌ಆನ್ ಸಂಘಟನೆಯ ಸ್ಥಾಪಕ ನೇತಾರ ಮತ್ತು ಬರೇಲ್ವಿ ಸುನ್ನತ್ ಜಮಾಅತಿನ ಪಂಡಿತ ಅಲ್ಲಾಮ ತಾಜುಲ್ ಖಾದಿರಿ ಹೇಳಿದ್ದು, "ಲಕ್ಷಗಟ್ಟಲೆ ಮನೆಗಳನ್ನು ನಾಶಗೊಳಿಸಿದ ಈ ಪ್ರಳಯಹಾನಿ, ಪಾಕಿಸ್ಥಾನದಲ್ಲಿ ಉಂಟಾಗುತ್ತಿರುವ ಪ್ರಕೃತಿ ಕ್ಷೋಭೆಗಳು, ಹಠಾತ್ ಮರಣಗಳು, ಭೀಕರ ತಾಂಡವ ನೃತ್ಯ ಎಂಬಿವು ದೇವಕ್ರೋಧದ ಬಹಿರ್ ಪ್ರಕಟಣೆಗಳಾಗಿವೆ" ಎಂದಾಗಿದೆ.

("ಲಾಯಲ್‌ಪುರ್" - 15 ಆಗಸ್ಟ್ 2010)

ಪಾಕಿಸ್ಥಾನದ ಪಂಜಾಬ್ ಪ್ರಾಂತ್ಯದ ಜಮಾಅತೆ ಇಸ್ಲಾಮಿ ಅಮೀರ್ ಡಾಕ್ಟರ್ ವಸೀಂ ಅಖ್ತರ್ ಹೇಳಿದ್ದು, ಜಲಪ್ರಳಯದ ರೂಪದಲ್ಲಿ ಅಲ್ಲಾಹನ ಶಿಕ್ಷೆ ಈ ರಾಜ್ಯದಲ್ಲಿ ಎರಗಿದೆಯೆಂಬುದಾಗಿದೆ. ಆದುದರಿಂದ ಎಲ್ಲ ಜನರು ಮತ್ತು ಆಡಳಿತಾಧಿಕಾರಿಗಳು ಪಶ್ಚಾತ್ತಾಪಪಟ್ಟು ಅಲ್ಲಾಹನೊಡನೆ ಕ್ಷಮೆಯಾಚಿಸಬೇಕೆಂದೂ ಜನರು ನಮಾಝ್

ನಿಷ್ಠೆಯಿಂದ ನಿರ್ವಹಿಸಬೇಕೆಂದೂ ಹಾಗಿದ್ದರೆ ಮಾತ್ರ ಭಾವಿಕಾಲದಲ್ಲುಂಟಾಗಲಿರುವ ವಿಪತ್ತುಗಳಿಂದ ಪಾರಾಗಲು ಸಾಧ್ಯವೆಂದೂ ಅವರು ಹೇಳಿದರು.

("ದೀನ್' ದಿನಪತ್ರಿಕೆ, 16 ಆಗಸ್ಟ್ 2010)

"ಖಬರೇನ್" ಎಂಬ ಪತ್ರಿಕೆ ಬರೆಯುತ್ತದೆ: "ಜಲಪ್ರಳಯದ ಹಾನಿ ಮುಂದುವರಿಯುತ್ತಾ ಇದೆ. ಈಗ ಪಾಕಿಸ್ತಾನದ ಮೂರನೇ ಒಂದು ಭಾಗ ನೀರಿನಲ್ಲಿದೆ. ಎರಡು ಕೋಟಿಗಿಂತ ಹೆಚ್ಚು ಮಂದಿ ನೀರಿನಿಂದ ಕಷ್ಟಕ್ಕೊಳಗಾಗಿದ್ದಾರೆ." ("ಖಬರೇನ್", 28 ಆಗಸ್ಟ್ 2010)

ಭಯಾನಕವಾದ ಈ ಅವಸ್ಥೆ ಹೇಗುಂಟಾಯಿತು. ಇದು ಅವರ ದುಷ್ಕೃತ್ಯಗಳ ನಿಮಿತ್ತ ಉಂಟಾದ, ಅಲ್ಲಾಹನ ಕೋಪದ ಬಹಿರ್ ಪ್ರಕಟಣೆಯಲ್ಲದೆ ಇನ್ನೇನು?

ಜಲಪ್ರಳಯದ ಮೂಲಕ ದೇವಶಿಕ್ಷೆಗೆ ಗುರಿಯಾದವರ ಕುರಿತು ಪವಿತ್ರ ಖುರ್‌ಆನ್ ಹಲವೆಡೆ ಪ್ರಸ್ತಾಪಿಸಿದೆ.

ಪವಿತ್ರ ಖುರ್‌ಆನ್ ನೂಹ್ ಪ್ರವಾದಿಯ ಮತ್ತು ಫಿರ್‌ಔನನ ಸಮುದಾಯಗಳೂ ಸಬಾ ಸಮುದಾಯವೂ ಜಲಪ್ರಳಯದಲ್ಲಿ ನಾಶಗೊಂಡದ್ದಾಗಿ ಹೇಳುತ್ತದೆ:

**"ಆದರೆ ಅವರು ವಿಮುಖರಾದರು. ಆದ್ದರಿಂದ ವಿನಾಶಕಾರಿ ಯಾದೊಂದು ಪ್ರವಾಹವನ್ನು ನಾವು ಅವರ ಮೇಲೆ ಕಳುಹಿಸಿದೆವು. ಅವರ ಎರಡು ತೋಟಗಳನ್ನು ಕಹಿಹಣ್ಣುಗಳು, ಮುಳ್ಳು ಗಿಡಮರಗಳು ಮತ್ತು ಕೆಲವು ಬೋರಿ ಮರಗಳು ಇರುವ ಎರಡು ತೋಟಗಳಾಗಿ ಮಾರ್ಪಡಿಸಿದೆವು."**

**"ಅವರ ಕೃತಘ್ನತೆಯ ನಿಮಿತ್ತ ನಾವು ಅವರಿಗೆ ಈ ಪ್ರತಿಫಲವನ್ನು ಕೊಟ್ಟೆವು. ಕೃತಘ್ನರಿಗೆ ಹೊರತು ನಾವು (ಈ ರೀತಿಯ) ಪ್ರತಿಫಲವನ್ನು ನೀಡುವುದಿಲ್ಲ."**

(ಪವಿತ್ರ ಖುರ್‌ಆನ್, ಅಧ್ಯಾಯ ಸಬಅ್, ವಚನ : 17, 18)

ಹಝ್ರತ್ ಪ್ರವಾದಿ ನೂಹ್(ಅ) ತನ್ನ ಸಮುದಾಯದ ಬಗ್ಗೆ ವಿಲಾಪಿಸುತ್ತಾ ಅಲ್ಲಾಹನೊಡನೆ ಹೇಳಿದರು:

**"ನೀನು ಅವರನ್ನು ಕ್ಷಮಿಸುವಂತಾಗಲೆಂದು ನಾನು ಅವರನ್ನು ಕರೆದಾಗಲೆಲ್ಲ ಅವರು ತಮ್ಮ ಬೆರಳುಗಳನ್ನು ತಮ್ಮ ಕಿವಿಗಳಿಗೆ ತುರುಕಿಸಿದರು ಮತ್ತು ತಮ್ಮ ವಸ್ತ್ರಗಳಿಂದ ತಮ್ಮನ್ನೇ ಮುಚ್ಚಿಕೊಂಡರು. ಅವರು (ನಿರಾಕರಣೆಯಲ್ಲಿ) ಪಟ್ಟು ಹಿಡಿದು ಮುಂದುವರಿದರು ಮತ್ತು ಅತಿಯಾದ ದುರಂಹಕಾರವನ್ನು ತೋರಿಸಿದರು."** (ಅಧ್ಯಾಯ ನೂಹ್, ವಚನ 8)

ಈ ಕಾಲದಲ್ಲಿ ಆಗಮಿಸಿದ ವಾಗ್ದತ್ತ ಮಹ್‌ದೀ ಮಸೀಹ್‌ರನ್ನು ಸುಳ್ಳಾಗಿಸಿ, ಅವರನ್ನು ನಂಬಿದವರ ಮೇಲೆ ದೌರ್ಜನ್ಯವೆಸಗಿದ ಕಾರಣ ಹಲವಿಧ ದೈವಿಕ ಶಿಕ್ಷೆಗಳು ಲೋಕದಲ್ಲಿ ಪ್ರತ್ಯಕ್ಷಗೊಳ್ಳುತ್ತಿವೆ.

ಅಲ್ಲಾಹನು ಹಝ್ರತ್ ವಾಗ್ದತ್ತ ಮಸೀಹ್‌ರಿಗೆ ತನ್ನ ದಿವ್ಯಸಂದೇಶ ಮೂಲಕ ಹೀಗೆ ತಿಳಿಸಿದನು:

**"ದುನಿಯಾಮೆ ಏಕ್ ನದೀರ್ ಆಯ, ಪರ್ ದುನಿಯಾನೆ ಉಸೇ ಖಬೂಲ್ ನ ಕಿಯಾ. ಲೇಕಿನ್ ಖುದಾ ಉಸೇ ಖಬೂಲ್ ಕರೇಗಾ ಔರ್ ಬಡೇ ಝೋರ್ ಆವಾರ್ ಹಂಲೋಸೆ ಉಸ್ ಕೀ ಸಚ್ಚಾಯಿ ಝಾಹಿರ್ ಕರೇಗಾ."**

ಅಂದರೆ, "ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರ ಬಂದರು. ಆದರೆ ಲೋಕವು ಅವರನ್ನು ಸ್ವೀಕರಿಸಲಿಲ್ಲ. ಆದರೆ ಅಲ್ಲಾಹನು ಅವರನ್ನು ಸ್ವೀಕರಿಸುವನು ಮತ್ತು ಶಕ್ತಿಯುತವಾದ ಅಭಿಘಾತಗಳಿಂದ ಅವರ ಸತ್ಯತೆಯನ್ನು ಬಹಿರಂಗಪಡಿಸುವನು."

(ಬರಾಹೀನೆ ಅಹ್ಮದಿಯಾ – ರೂಹಾನಿ ಖಝಾಯಿನ್ ಸಂಪುಟ 1 ಪುಟ 665)

ಹಝ್ರತ್ ವಾಗ್ದತ್ತ ಮಸೀಹರ(ಅ) ವಾದದ ನಂತರ ದೇವನ ಕಡೆಯಿಂದ ಉಂಟಾಗುವ ಸುಶಕ್ತವಾದ ಅಭಿಘಾತಗಳ ಕುರಿತು ಅವರಿಗೆ ಅಲ್ಲಾಹನು ಮುನ್ನೆಚ್ಚರಿಕೆ ನೀಡುತ್ತಲಿದ್ದನು. ಅವರ ಸತ್ಯ ಸಾಕ್ಷ್ಯದ ಪ್ರಕಟನೆ ಇಲ್ಲಿ ಉದ್ದೇಶಿಸಲಾಗಿತ್ತು. ಪ್ಲೇಗ್, ಭೂಕಂಪ, ಜಲಪ್ರಳಯ, ಮಹಾ ಯುದ್ಧಗಳು ಎಂಬೀ ಹಲವಿಧ ದೇವಕ್ರೋಧಗಳು ಲೋಕದಲ್ಲಿ ಕಾಣಿಸಿಕೊಳ್ಳುತ್ತಿದ್ದವು. ಅವರು ಹೇಳಿದರು:

*"ನಾನು ಬಾರದಿರುತ್ತಿದ್ದರೆ ಈ ಆಪತ್ತುಗಳು ಘಟಿಸುವುದರಲ್ಲಿ ವಿಳಂಬವಾಗಬಹುದಿತ್ತು. ಆದರೆ ನನ್ನ ಆಗಮನದೊಂದಿಗೆ ಸುದೀರ್ಘ ಕಾಲ ಮರೆಯಾಗಿದ್ದ ದೇವಕ್ರೋಧದ ಉದ್ದೇಶಗಳು ಪ್ರಕಟಗೊಂಡವು. ಹೇಗೆಂದರೆ, ಅಲ್ಲಾಹು ಹೇಳುತ್ತಾನೆ:* ***'ಒಬ್ಬ ಸಂದೇಶವಾಹಕನನ್ನು ಕಳುಹಿಸುವ ತನಕ ನಾವು (ಜನರನ್ನು) ಶಿಕ್ಷಿಸುವುದಿಲ್ಲ.'"***

(ಪವಿತ್ರ ಖುರ್‌ಆನ್ 17 : 16)

*ಪ್ರಾಯಶ್ಚಿತ್ತ ಮಾಡುವವರನ್ನು ಸಮಾಧಾನಕ್ಕೊಳಪಡಿಸಲಾಗುವುದು. ಆಪತ್ತು ಬರುವುದಕ್ಕೆ ಮುಂಚೆ ಭಯಪಡುವವರ ಮೇಲೆ ಕರುಣೆ ತೋರಿಸಲಾಗುವುದು. ಭೂಕಂಪಗಳಿಂದ ನೀವು ಪಾರಾಗುವಿರೆಂದೂ ನೀವು ನಿಮ್ಮ ಉಪಾಯಗಳಿಂದಲೂ ತಂತ್ರಗಳಿಂದಲೂ ಸ್ವಯಂ ಸುರಕ್ಷಿತರಾಗುವಿರೆಂದೂ ನೀವು ಭಾವಿಸುತ್ತೀರಾ? ಎಂದಿಗೂ ನಿಮ್ಮಿಂದ ಸಾಧ್ಯವಿಲ್ಲ.... ಅಮೇರಿಕ ಮೊದಲಾದ ದೇಶಗಳಲ್ಲಿ ಭೂಕಂಪಗಳಾದರೂ ನಿಮ್ಮ ದೇಶ ಅವುಗಳಿಂದ ಸುರಕ್ಷಿತವೆಂದು ನೀವು ಭಾವಿಸಬೇಡಿರಿ. ಒಂದು ವೇಳೆ ಅವುಗಳಿಗಿಂತ ಹೆಚ್ಚು ಭಯಾನಕವಾದ ಆಪತ್ತುಗಳ ಮುಖದರ್ಶನ ಮಾಡುವಿರಿ. ಎಲೈ ಯುರೋಪ್ ನೀನು ಕೂಡ ಸಮಾಧಾನದಲ್ಲಿಲ್ಲ. ಎಲೈ ಏಶ್ಯಾ, ನೀನು ಕೂಡ ಸುರಕ್ಷಿತವಲ್ಲ. ಎಲೈ ದ್ವೀಪವಾಸಿಗಳೇ, ಯಾವ ಮಿಥ್ಯ ದೈವವಾಗಲಿ ನಿಮಗೆ ನೆರವಾಗದು. ಪಟ್ಟಣಗಳು ಕುಸಿಯುತ್ತಿರುವುದಾಗಿ ನಾನು ಕಾಣುತ್ತೇನೆ. ಜನ ನಿಬಿಡ ಸ್ಥಳಗಳು ಜನಶೂನ್ಯವಾಗುವುದನ್ನು ನಾನು ಕಾಣುತ್ತೇನೆ. ಆ ಏಕದೇವನು ಒಂದು ಕಾಲಘಟ್ಟ ತನಕ ಮೌನಾವಲಂಬಿಯಾಗಿದ್ದನು. ಅವನ ಕಣ್ಣುಗಳ ಮುಂದೆ ದ್ವೇಷಿಸಲ್ಪಡುವ ಹಲವು ಕೃತ್ಯಗಳು ಮಾಡಲ್ಪಡುತ್ತಿವೆ. ಅವನು ಮೌನವಹಿಸಿದ್ದನು. ಆದರೆ ಅವನು ಗಾಂಭೀರ್ಯದಿಂದ ತನ್ನ ಮುಖವನ್ನು ತೋರಿಸುವನು. ಕೇಳುವ ಕಿವಿಗಳಿರುವವರು ಆಲಿಸಲಿ. ಆ ಕಾಲ ವಿದೂರವಲ್ಲ. ದೇವನ ಸಂರಕ್ಷಣೆಯ ಅಧೀನದಲ್ಲಿ ಎಲ್ಲರನ್ನೂ ಒಂದುಗೂಡಿಸಲು ನಾನು ಕೈಲಾದಷ್ಟು ಪ್ರಯತ್ನಿಸಿದೆನು. ಆದರೆ ವಿಧಿಲಿಖಿತ ಈಡೇರಬೇಕಾದುದು ಅಗತ್ಯವಾಗಿದೆ. ಈ ದೇಶದ ಸರದಿ ಸಹ ಸಮೀಪವಾಗಿದೆ. ನೂಹರ ಕಾಲಘಟ್ಟ ನಿಮ್ಮ ಕಣ್ಣ ಮುಂದೆ ಬರುವುದು. ಲೂತರ ಭೂಮಿಯಲ್ಲಿ ನಡೆದ ಘಟನೆ ನೀವು ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ದೇವನು ತನ್ನ ಕೋಪ ಪ್ರಕಟಿಸುವುದರಲ್ಲಿ ನಿಧಾನಿಸುತ್ತಾನೆ. ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕೋಸ್ಕರ ಪಶ್ಚಾತ್ತಾಪಪಡಿರಿ. ಯಾರು ದೇವನನ್ನು ತ್ಯಜಿಸುತ್ತಾನೋ ಅವನು ಒಂದು ಕೀಟದಂತೆ; ಮನುಷ್ಯನಲ್ಲ. ದೇವನಿಗೆ ಭಯಪಡದವನು ಮೃತನು; ಜೀವಂತನಲ್ಲ." (ಹಖೀಖತುಲ್ ವಹ್ಯ್)*

ಮೇಲೆ ನೀಡಲಾದ ಮುನ್ನೆಚ್ಚರಿಕೆಯಲ್ಲಿ, ಪೂರ್ವ ಕಾಲದ ವಿಪತ್ತುಗಳನ್ನು ನೀವು ಸ್ವಂತ ಕಣ್ಣುಗಳಿಂದ ಕಾಣುವಿರೆಂಬ ಭವಿಷ್ಯ

ನುಡಿಗಳು ಇಂದು ಟೆಲಿವಿಷನ್ ಮೂಲಕ ಈಡೇರಿದೆ. ಇಂತಹ ಘಟನೆಗಳು ನಮಗೆ ಟೆಲಿವಿಷನ್ ಮೂಲಕ ನೇರವಾಗಿ ಕಾಣಲು ಸಾಧ್ಯವಾಗುತ್ತದೆ. ಇದು ವಾಗ್ದತ್ತ ಮಸೀಹರ ಭವಿಷ್ಯೋಕ್ತಿಯ ಈಡೇರಿಕೆಗೆ ಸ್ಪಷ್ಟವಾದ ಸಾಕ್ಷ್ಯವಾಗಿದೆ.

ಅಲ್ಲಾಹನಿಂದ ತನ್ನ ಪ್ರವಾದಿಗಳ ಮುಖೇನ ಲಭಿಸಿದ ಮುನ್ನೆಚ್ಚರಿಕೆಗಳ ನಂತರ ಒಂದು ಕಾಲಘಟ್ಟದ ವರೆಗೆ ಜನರಿಗೆ ಕಾಲಾವಧಿ ನೀಡಲಾಗುವುದೆಂದು ಪವಿತ್ರ ಖುರ್‌ಆನಿನಿಂದ ಮನವರಿಕೆಯಾಗುತ್ತದೆ. ಅಲ್ಲಾಹು ಹೇಳುತ್ತಾನೆ:

"ನಾವು ನಿನ್ನನ್ನು (ಮರಣ ಮೂಲಕ ಈ ಲೋಕದಿಂದ) **ಕೊಂಡೊಯ್ದರೆ ಕೂಡ ನಾವು ಅವರಿಗೆ ಪ್ರತಿಕಾರ ಮಾಡುವೆವು. ಅಥವಾ ಅವರಿಗೆ ನಾವು ಮುನ್ನೆಚ್ಚರಿಕೆ ನೀಡಿದುದನ್ನು (ಶಿಕ್ಷೆಯನ್ನು) ನಿನ್ನ ಜೀವಮಾನದಲ್ಲೇ ನಾವು ನಿನಗೆ ತೋರಿಸಿಕೊಡುವೆವು. ಹೇಗಿದ್ದರೂ ಅವರ ಮೇಲೆ ನಮಗೆ ಪೂರ್ಣ ಸಾಮರ್ಥ್ಯವಿದೆ."** (ಪವಿತ್ರ ಖುರ್‌ಆನ್ 43 : 42, 43)

ಪುನಃ ಅಲ್ಲಾಹು ಹೇಳುತ್ತಾನೆ:

**"ನಾವು ಅವರಿಗೆ ಮುನ್ನೆಚ್ಚರಿಕೆ ನೀಡುತ್ತಿರುವ (ಶಿಕ್ಷೆಗಳಲ್ಲಿ) ಕೆಲವನ್ನು (ನಿನ್ನ ಜೀವಮಾನದಲ್ಲೇ) ನಾವು ನಿನಗೆ ತೋರಿಸಿಕೊಟ್ಟರೆ, ಅಥವಾ (ಅದಕ್ಕಿಂತ ಮುಂಚೆಯೇ) ನಿನ್ನನ್ನು ಮೃತಪಡಿಸಿದರೆ, (ಹೇಗಿದ್ದರೂ) ನಮ್ಮೆಡೆಗೆಯೇ ಅವರ ಮರಳಿಕೆಯಾಗಿದೆ. ಅವರ ಕೃತ್ಯಗಳಿಗೆಲ್ಲ ಅಲ್ಲಾಹನು ಸಾಕ್ಷಿಯಾಗಿದ್ದಾನೆ."**
(ಪವಿತ್ರ ಖುರ್‌ಆನ್ 10: 47)

ಈ ಮೇಲಿನ ದೇವವಚನಗಳ ಪ್ರಕಾರ ಹಲವು ದುರಂತ ಘಟನೆಗಳು, ಉದಾಹರಣೆಗೆ, ಪ್ಲೇಗ್, ಭೂಕಂಪ ಮೊದಲಾದವು ಹಝ್ರತ್ ವಾಗ್ದತ್ತ ಮಸೀಹರ ಕಾಲದಲ್ಲೇ ಕಾಣಿಸಿವೆ. ಅವರ ಕಾಲದ ನಂತರ ಸಹ ಅವು ಘಟಿಸುತ್ತಲೇ ಇವೆ.

ವಾಸ್ತವದಲ್ಲಿ ಓರ್ವ ಪ್ರವಾದಿಯ ಆಗಮನವಾಗುವುದು ದೇವಶಿಕ್ಷೆಯನ್ನು ತರಲಿಕ್ಕಲ್ಲ. ಬದಲು, ದೇವಶಿಕ್ಷೆಗೆ ಗುರಿಯಾಗುವವರ ಕುರಿತು ಮುನ್ನೆಚ್ಚರಿಕೆ ನೀಡಲಿಕ್ಕಾಗಿದೆ. ಜನರು ಒಬ್ಬ ಪ್ರವಾದಿ ನೀಡುವ ಮುನ್ನೆಚ್ಚರಿಕೆಗಳನ್ನು ಅವಗಣಿಸಿ ಅಕ್ರಮ ವರ್ತನೆಗಳಿಂದ ಮುನ್ನೇರುತ್ತಿರುವಾಗ ಅವರು ದೇವಶಿಕ್ಷೆಗೆ ಈಡಾಗುತ್ತಾರೆ. ಆ ಬಗ್ಗೆ ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ, ಒಬ್ಬ ಪ್ರವಾದಿಯನ್ನು ಕಳುಹಿಸುವ ತನಕ ನಾವು ಶಿಕ್ಷೆ ಇಳಿಸುವುದಿಲ್ಲವೆಂದು ನುಡಿದಿದ್ದಾನೆ.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಜಲಪ್ರಳಯಕ್ಕೆ ಗುರಿಯಾದ ಜನರು ಏನು ತಪ್ಪು ಮಾಡಿದ್ದಾರೆ? ಯಥಾರ್ಥದಲ್ಲಿ ಮುನ್ನೆಚ್ಚರಿಕೆಯನ್ನು ಧಿಕ್ಕರಿಸುವ ರೀತಿಯಲ್ಲಿ ಒಂದು ಸಮೂಹದ ಜನರು ಅಕ್ರಮವಾಗಿ ವರ್ತಿಸುವವರಾದರೆ ಅದು ಆ ಜನಸಮೂಹದ ತಪ್ಪೆಂದು ವರ್ಣಿಸಲಾಗುತ್ತದೆ. ಅಲ್ಲಾಹು ಹೇಳುತ್ತಾನೆ:

"ಒಂದು ನಾಡನ್ನು ನಾವು ನಾಶಪಡಿಸಲು ಉದ್ದೇಶಿಸಿದರೆ ಅದರ ಸುಖಲೋಲುಪರಿಗೆ (ಪ್ರವಾದಿಗಳ ಮೂಲಕ) ನಾವು ಎಚ್ಚರಿಕೆ ನೀಡುತ್ತೇವೆ. ಆಗ ಅವರು (ಅದನ್ನು ಧಿಕ್ಕರಿಸಿ) ಆಜ್ಞಾಲಂಘನ ಮಾಡುತ್ತಾರೆ. ಆ ಕಾರಣದಿಂದ ಅದರ (ಆ ನಾಡಿನ) ಮೇಲೆ ನಮ್ಮ ಶಿಕ್ಷೆಯ ವಚನ ಪೂರ್ಣಗೊಳ್ಳುತ್ತದೆ. ಹಾಗೆ ನಾವು ಅದನ್ನು ಸಂಪೂರ್ಣವಾಗಿ ನಾಶಗೊಳಿಸುತ್ತೇವೆ." (ಪವಿತ್ರ ಖುರ್‌ಆನ್ 17:17)

ಇದರಿಂದ, ಸಮುದಾಯದ ನೇತಾರರ ಅವಿಧೇಯತೆ, ಧಿಕ್ಕಾರ ಮತ್ತು ಅವಗಣನೆ ಸಂಪೂರ್ಣ ಸಮುದಾಯವನ್ನು ಬಾಧಿಸುತ್ತದೆ ಎಂದು ಸಾಬೀತಾಗುತ್ತದೆ.

ಕಳೆದ ಕೆಲವು ದಶಕಗಳಲ್ಲಿ ಪಾಕಿಸ್ಥಾನದಲ್ಲಿ, ವಿಶಿಷ್ಟವಾಗಿ 2010ರ ಮೇ 28ರಂದು ಲಾಹೋರ್‌ನಲ್ಲಿ ಘಟಿಸಿದ ಅತಿ ಕ್ರೂರ ಕೃತ್ಯದ ಬಗ್ಗೆ ಅಲ್ಲಿನ ಜನರು ತೋರಿಸಿದ ಅನಾಸ್ಥೆ ಮತ್ತು ಮೌನ ಅವರನ್ನು ದೇವಶಿಕ್ಷೆಗೆ ಅರ್ಹರನ್ನಾಗಿ ಮಾಡಿದೆ. ಈ ಬಗ್ಗೆ ಒಬ್ಬ ಅಂಕಣಗಾರ ಐ. ಎ. ರಹ್ಮಾನ್ ಹೀಗೆ ಬರೆಯುತ್ತಾರೆ:

"ಅಹ್ಮದಿಯರು ಎದುರಿಸಬೇಕಾಗಿ ಬಂದ ಆಪತ್ತುಗಳ ಕುರಿತು ಸ್ವತಂತ್ರ ಚಿಂತಕರಾದ ಮುಸ್ಲಿಮರ ಮೌನ ಅಹ್ಮದಿಯರಿಗೆ ವಿರುದ್ಧವಾದ ಸುಸಂಘಟಿತ ಚಟುವಟಿಕೆಗಳಿಗೆ ಬಲ ನೀಡಿತು."

(The News Lahore - 6 June 2010)

ಅಹ್ಮದಿಯಾ ಜಮಾಅತಿನ ಪಂಚಮ ಖಲೀಫರು 44ನೇ ಯುನೈಟೆಡ್ ಕಿಂಗ್‌ಡಮ್ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ, ಲಾಹೋರ್ ಘಟನೆಯ ನಂತರ ಅಹ್ಮದಿಯರಲ್ಲುಂಟಾದ ಪರಿವರ್ತನೆ ಕುರಿತು ಹೀಗೆ ನುಡಿದರು:

"ಅಹ್ಮದಿಯಾ ಜಮಾಅತಿನ 120 ವರ್ಷಗಳ ಚರಿತ್ರೆ ಬಹಳ ಪ್ರಕಟವಾದ ರೀತಿಯಲ್ಲಿ ಸಾಕ್ಷ್ಯವಹಿಸುವುದೇನೆಂದರೆ, ಜಮಾತಿನ ಪ್ರತಿಯೊಂದು ಹೆಜ್ಜೆಯಲ್ಲಿ ಹಝ್ರತ್ ವಾಗ್ದತ್ತ ಮಸೀಹ್‌ರಿಗೂ ಜಮಾಅತಿಗೂ ಅಲ್ಲಾಹನ ಸಹಾಯವಿದೆ." ಅವರು ತನ್ನ ಭಾಷಣದಲ್ಲಿ ಹೀಗೂ ಹೇಳಿದರು:

"ಎಲೈ ಉಲಮಾ ನಾಮಧಾರಿಗಳೇ, ಅಹ್ಮದಿಯತನ್ನು ವಿರೋಧಿಸುತ್ತಾ ಶೈತಾನನ ಕಾಲಹೆಜ್ಜೆಗಳನ್ನು ಹಿಂಬಾಲಿಸುತ್ತಿರುವವರೇ, ಆಲಿಸಿರಿ. ನೀವು ಮಾಡುತ್ತಿರುವ ಆಕ್ರಮಣಗಳಿಂದ ನಮಗೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆ ಉಂಟಾಗದು. ನೀವು ಯಾವುದೇ ದಾರಿಯಿಂದ ಬನ್ನಿರಿ. ಎಂದಿಗೂ ವಿಶ್ವಾಸಿಯಾದ ಒಬ್ಬ ಅಹ್ಮದಿಯ ಕಾಲು ಮುಗ್ಗರಿಸುವಂತೆ ಮಾಡಲು ನಿಮ್ಮಿಂದ ಸಾಧ್ಯವಿಲ್ಲ. ನೆನಪಿಟ್ಟುಕೊಳ್ಳಿರಿ. ಅಂತ್ಯಕಾಲದ ಇಮಾಮರ ಕೈಯಲ್ಲಿ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಿದ ಭಾಗ್ಯಶಾಲಿಗಳಾದ ಸತ್ಯಾತ್ಮರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವರಿಷ್ಠ ದಾಸರಾದ ಹಝ್ರತ್ ಮಹ್‌ದೀ ಮಸೀಹರ ಅಧ್ಯಾಪನಗಳಲ್ಲಿ ಪ್ರಭಾವಿತರಾಗಿದ್ದಾರೆ. ಆ ಅಧ್ಯಾಪನೆಗಳು ನಮ್ಮನ್ನು ಈ ದೈವಿಕ ಸಂಘಟನೆಯ ಒಂದಂಶವನ್ನಾಗಿ ಮಾಡಿದೆ. ಅವರು ಆಖಿರೀಗಳಲ್ಲಿ (ಅಂತ್ಯಕಾಲದವರಲ್ಲಿ) ಪಾಲುಗಾರರಾಗಿ ಅಲ್ಲಾಹನ ಅನುಗ್ರಹಗಳ ಹಕ್ಕುದಾರರಾಗಿದ್ದಾರೆ. ನಮ್ಮ ಪೂರ್ವಿಕರಾದ ಮಹಾತ್ಮರುಗಳ ಔದಾರ್ಯದಿಂದ ನಾವು ವಾಗ್ದತ್ತ ಮಸೀಹರ ಜಮಾಅತಿನ ಜೀವಂತ ಶಾಖೆಗಳಾಗಿದ್ದೇವೆ."

ಮುಂದುವರಿದು ಅವರು ಹೇಳಿದರು:

"ಏನು, ನಿಮ್ಮ ಈ ದಜ್ಜಾಲಿ (ದುಷ್ಟ) ವರ್ತನೆಗಳಿಂದ ಅಹ್ಮದಿಯರ ವಿಶ್ವಾಸವನ್ನು ದುರ್ಬಲಗೊಳಿಸಲು ಸಾಧ್ಯವೇ? ನೆನಪಿಟ್ಟುಕೊಳ್ಳಿರಿ. ಅದು ನಿಮ್ಮ ಬರೇ ವ್ಯಾಮೋಹವಾಗಿದೆ. ನಮ್ಮ ಬಗ್ಗೆ ಈ ದುರ್ಭಾವನೆ ನಿಮ್ಮನ್ನು ಲಜ್ಜಿತರನ್ನಾಗಿ ಮಾಡುವುದು - ನಿಮ್ಮಲ್ಲಿ ನಾಚಿಕೆಯ ಮನಃಸಾಕ್ಷಿಯಿದ್ದರೆ. ಆದರೆ ನಿಮ್ಮ ಹೃದಯಗಳು ಅಲ್ಲಾಹನ ವಚನ ಪ್ರಕಾರ ಬಂಡೆ ಕಲ್ಲಿಗಿಂತ ಕಠಿಣವಾಗಿದೆ. ಕೆಲವು ಬಂಡೆ ಕಲ್ಲುಗಳಿಂದ ಜೀವದಾಯಕವಾದ ನೀರಿನ ಬುಗ್ಗೆ ಹೊರಡುತ್ತದೆ. ಆದರೆ ನಿಮ್ಮ ಹೃದಯಗಳಿಂದ ಮತ್ತು ನಾಲಗೆಗಳಿಂದ ಬರೇ ದ್ವೇಷ ಮತ್ತು ಶತ್ರುತ್ವದ ಲಾವ ಹೊರಡುತ್ತದೆ. ಇದರಿಂದ ನಷ್ಟ ಮತ್ತು ವಿನಾಶ ಹೊರತು

ಬೇರೇನೂ ಉಂಟಾಗುವುದಿಲ್ಲ. ಎಲ್ಲೈ ವಿರೋಧ ಮತ್ತು ವಿದ್ವೇಷದ ಅಗ್ನಿಸ್ಫುಲಿಂಗಗಳನ್ನು ಹರಡುವವರೇ, ನೀವು ಅಂಧಕಾರದ ಪೂಜಾರಿಗಳಾಗಿದ್ದೀರಿ. ನೀವು ಆಧ್ಯಾತ್ಮಿಕ ಪ್ರಕಾಶದಿಂದ ಅಗಲಿಹೋದವರಾಗಿದ್ದೀರಿ. ಖುರ್‌ಆನಿನ ಜ್ಞಾನ ತಮಗುಂಟೆಂದು ಕೊಚ್ಚಿಕೊಳ್ಳುವವರೇ, ಅಲ್ಲಾಹು ಇಂತಹವರ ಕುರಿತು ಏನು ಹೇಳುತ್ತಾನೆಂದು ಪವಿತ್ರ ಖುರ್‌ಆನಿನಲ್ಲಿ ಪರಿಶೋಧಿಸಿರಿ. ಇಂದು ಪ್ರತಿಯೊಬ್ಬ ಅಹ್ಮದಿ ಸ್ತ್ರೀಯೂ ಪುರುಷನೂ ಯುವಕನೂ ವೃದ್ಧನೂ ಬಾಲಕನೂ ತನ್ನ ವಿಶ್ವಾಸದಲ್ಲಿ ಶಕ್ತಿಗಳಿಸುತ್ತಾ ಬರುತ್ತಾರೆ. ಇಂದು ಸಹ ಧಾರಾಳ ಸತ್ಯಾತ್ಮಗಳು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಯಥಾರ್ಥ ಪ್ರೇಮಿಯೂ ವರಿಷ್ಠದಾಸನೂ ಆದ ವಾಗ್ದತ್ತ ಮಸೀಹರ ಜಮಾಅತಿನಲ್ಲಿ ಪ್ರವೇಶಿಸುತ್ತಿರುವುದಾಗಿ ನಾವು ಕಾಣುತ್ತೇವೆ. ಆದರೆ ನೀವು ಮನಃಪೂರ್ವಕ, ಅಜ್ಞರಾದ ಜನರನ್ನು ಸತ್ಯದಿಂದ ದೂರವಿಡಲಿಕ್ಕಾಗಿ ನೀಚವಾದ ವರ್ತನೆಗಳಲ್ಲಿ ತೊಡಗಿ ಆ ಆಧ್ಯಾತ್ಮಿಕ ಸಂಘಟನೆಗೆ ವಿರುದ್ಧವಾಗಿ ಗೂಢತಂತ್ರ ಹೂಡುತ್ತಿದ್ದೀರಿ. ಖಂಡಿತವಾಗಿಯೂ ನೀವು ಅಲ್ಲಾಹನ ಹಿಡಿತದಲ್ಲಿ ಅದುವಮಲ್ಪಡುವಿರಿ. ನಿಮ್ಮ ಮುಂದೆ ಬಹಳ ಸ್ಪಷ್ಟವಾದ ರೀತಿಯಲ್ಲಿ ಆಧಾರ – ಪ್ರಮಾಣ ಮಂಡಿಸಲ್ಪಟ್ಟಿದೆ. ಅಲ್ಲಾಹನ ಲಾಠಿ ಶಬ್ದರಹಿತವಾಗಿದೆಯೆಂದು ನೀವು ನೆನಪಿಟ್ಟುಕೊಳ್ಳಿರಿ. ಅದಕ್ಕೆ ಭಯಪಡಿರಿ. ಆ ಬಗ್ಗೆ ಚಿಂತನೆಮಾಡಿರಿ. ಪವಿತ್ರ ಖುರ್‌ಆನಿನ ದೃಷ್ಟಾಂತಗಳೂ ಹಝ್ರತ್ ಪೈಗಂಬರರ(ಸ) ಪರಿಶುದ್ಧ ಅಧ್ಯಾಪನೆಗಳೂ ಬುದ್ಧಿಪರ ಮತ್ತು ಪ್ರಮಾಣಪರ ಪುರಾವೆಗಳೂ ಭೂಮಿ ಮತ್ತು ಆಕಾಶದಲ್ಲಿ ಗೋಚರವಾಗುವ ದೃಷ್ಟಾಂತಗಳೂ ಅಲ್ಲಾಹನು ತೋರಿಸುತ್ತಿರುವ ಸಾಕ್ಷ್ಯಗಳೂ ಇಷ್ಟರವರೆಗೆ ಅವನಿಂದ ಅಹ್ಮದಿಯ್ಯತಿಗೆ ಲಭಿಸುತ್ತಿರುವ ಸಹಾಯಗಳೂ ನಿಮ್ಮ ಕಣ್ಣುಗಳನ್ನು ತೆರೆಯಿಸಲಿ."

ಹಝ್ರತ್ ಖಲೀಫರು ಮುಂದುವರಿದು ಹೇಳಿದರು:

"ಅದರೊಂದಿಗೆ ನಾನು ಮುಸ್ಲಿಮರೊಡನೆ ಹೇಳಲು ಬಯಸುವುದೇನೆಂದರೆ, ನನ್ನ ಈ ಮಾತುಗಳಿಗೆ ಕಿವಿಗೊಡಿರಿ. ನಿಮ್ಮ ಬುದ್ಧಿಯನ್ನು ಉಪಯೋಗಿಸಿರಿ. ಹಝ್ರತ್ ವಾಗ್ದತ್ತ ಮಸೀಹ್(ಅ) ನುಡಿದ ಪ್ರಕಾರ ಈ ವಿಚಾರದಲ್ಲಿ ಅಲ್ಲಾಹನಿಂದ ಮಾರ್ಗದರ್ಶನವನ್ನು ಬೇಡಿರಿ. ಸುಳ್ಳುವಾದಿ ಗಳಿಗೋಸ್ಕರ ಅಲ್ಲಾಹು ಈ ರೀತಿ ಸತ್ಯಸಾಕ್ಷ್ಯಗಳಿಗಿರುವ ಪುರಾವೆಗಳನ್ನೂ ದೃಷ್ಟಾಂತಗಳನ್ನೂ ಪ್ರಕಟಿಸುವುದಿಲ್ಲ. ನೆನಪಿಡಿರಿ. ತಮ್ಮನ್ನು ಈ ಉಲಮಾವರ್ಗ ದಾರಿ ತಪ್ಪಿಸಿದೆಯೆಂಬ ನೆವನ ಏನೂ ಪ್ರಯೋಜನಕ್ಕೆ ಬಾರದು. ಆದುದರಿಂದ ಕೇವಲ ನಾಮಧಾರಿಗಳಾದ ಈ ಉಲಮಾವರ್ಗದ ಮಾತುಗಳನ್ನು ಕಣ್ಣುಮುಚ್ಚಿ ನಂಬಬೇಡಿರಿ. ನಿಷ್ಪಕ್ಷವಾದ ರೀತಿಯಲ್ಲಿ ನಿಷ್ಕಳಂಕ ಹೃದಯದೊಂದಿಗೆ ಅಲ್ಲಾಹನ ಪವಿತ್ರ ಸನ್ನಿಧಿಯಲ್ಲಿ ವಿನೀತರಾಗಿ ಪ್ರಾರ್ಥಿಸಿರಿ. ಅವನಿಂದ ಮಾರ್ಗದರ್ಶನ ಕೇಳಿರಿ. ಆಗ ಖಂಡಿತವಾಗಿಯೂ ಅಲ್ಲಾಹು ಮಾರ್ಗದರ್ಶನ ಮಾಡುವನು. ತಮ್ಮ ಬುದ್ಧಿಯನ್ನು ಹಲವಿಧ ಸಂಶಯಗಳಿಂದ ಸಂಶುದ್ಧಗೊಳಿಸಿರಿ. ಓ

*(30ನೇ ಪುಟಕ್ಕೆ........)*

ಆರೋಗ್ಯ

## ಹೃದ್ರೋಗ ನಿಯಂತ್ರಿಸಲು ಪ್ರತಿದಿನ ಎರಡು ಸಾರಿ ಹಲ್ಲುಜ್ಜುವುದು ಪ್ರಯೋಜನಕರ

ಲಂಡನ್ ಯುನಿವರ್ಸಿಟಿಯ ಪ್ರೊಫೆಸರ್ ರಿಚರ್ಡ್ ವಾಟ್ ನೇತೃತ್ವದಲ್ಲಿ ನಡೆಸಲಾದ ಸರ್ವೇಕ್ಷಣೆಯು ಬ್ರಿಟಿಷ್ ಮೆಡಿಕಲ್ ಮ್ಯಾಗಸಿನ್‌ನಲ್ಲಿ ಪ್ರಕಟಿಸಲ್ಪಟ್ಟಿದೆ. ಅವರು ಹನ್ನೊಂದು ಸಾವಿರ ಜನರ ದೈನಂದಿನ ಚಟುವಟಿಕೆಗಳ ಸರ್ವೇಕ್ಷಣೆಯನ್ನು ಎಂಟು ವರ್ಷಗಳಲ್ಲಿ ಪೂರ್ತಿಗೊಳಿಸಿದರು. ಅವರು ಹೇಳುವುದು ಹೀಗೆ : ಪ್ರತಿದಿನ ಎರಡು ಸಲ ಬೆಳಗ್ಗೆ – ರಾತ್ರಿ ಹಲ್ಲುಜ್ಜುವವರಿಗೆ, ಹಾಗೆ ಎರಡು ಸಾರಿ ಹಲ್ಲುಜ್ಜದವರಿಗೆ ಹೋಲಿಸಿದರೆ ಶೇಕಡಾ 70ರಷ್ಟು ಹೃದ್ರೋಗ ಸಾಧ್ಯತೆ ಕಡಿಮೆಯಾಗಿದೆ. ಏಕೆಂದರೆ, ಹಲ್ಲುಗಳನ್ನು ಶುದ್ಧವಾಗಿ ಇಡದವರ ಬಾಯಿಯೊಳಗೆ ಬ್ಯಾಕ್ಟೀರಿಯಾ ಹೆಚ್ಚು ಪೋಷಣೆ ಪಡೆಯುತ್ತವೆ. ಅವುಗಳು ಹೃದಯದ ರೋಗಗಳು ವೃದ್ಧಿಯಾಗಲು ಕಾರಣವಾಗುತ್ತವೆ. ("ಮಲಯಾಳ ಮನೋರಮ" 29-5-2010)

ಹದಿನಾಲ್ಕು ನೂರು ವರ್ಷಗಳ ಹಿಂದೆ ನಮ್ಮ ನೇತಾರರಾದ ಸರ್ವಲೋಕಗಳಿಗೂ ಮಂಗಳದಾಯಕರಾದ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹಲ್ಲುಜ್ಜುವ ಬಗ್ಗೆ ಪದೇ ಪದೇ ಒತ್ತಿ ಹೇಳುತ್ತಿದ್ದರು. ಹಝ್‌ರತ್ ಆಯಿಶಾ(ರ) ಹೀಗೆ ವರದಿ ಮಾಡುತ್ತಾರೆ:

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದರು:

"ಹಲ್ಲುಜ್ಜುವುದು ಮತ್ತು ಬಾಯಿಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಅಲ್ಲಾಹನ ತೃಪ್ತಿಯನ್ನುಗಳಿಸಲು ಕಾರಣವಾಗಿದೆ." (ನಸಾಈ ಬಾಬುತ್ತರ್‌ಗೀಬ್ ಫಿಸ್ಸಿವಾಕ್)

ಹಝ್‌ರತ್ ಅನಸ್(ರ) ಹೀಗೆ ವರದಿ ಮಾಡಿದ್ದಾರೆ:

ಹಝ್‌ರತ್ ಪೈಗಂಬರ್(ಸ) ಹೇಳಿದರು: "ಹಲ್ಲುಜ್ಜುವ ಬಗ್ಗೆ ನಾನು ನಿಮಗೆ ಬಹಳ ಒತ್ತಿ ಹೇಳುತ್ತೇನೆ." (ಬುಖಾರಿ–ಕಿತಾಬುಲ್ ಜುಮುಅ–ಬಾಬುಸ್ಸಿವಾಕ್ ಯೌಮುಲ್ ಜುಮುಅ)

ಹಝ್‌ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ:

"ನನ್ನ ಸಮುದಾಯಕ್ಕೆ ಕಷ್ಟಕರವಾಗುವುದಿಲ್ಲವಾದರೆ ಪ್ರತಿಯೊಂದು ನಮಾಝಿಗೆ ಮೊದಲು ಹಲ್ಲುಜ್ಜಲು ನಾನು ಆಜ್ಞೆ ನೀಡುತ್ತಿದ್ದೆನು ಎಂದು ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು." (ಬುಖಾರಿ)

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಅಲೈಹಿ ವ ಅಲಾ ಆಲಿ ಮುಹಮ್ಮದಿನ್. ಇನ್ನಕ ಹಮೀದುನ್ ಮಜೀದ್

(ಡಾಕ್ಟರ್ ಅಶ್ರಫ್ ಅಲಿ, ಮೊಗ್ರಾಲ್, ಕೇರಳ)

# ಹಿಂದೆ ಸಂಭವಿಸಿದ ಘಟನೆಗಳಿಂದ ಪಾಠ ಕಲಿಯಿರಿ

- ಸಿದ್ದೀಖ್ ಅಶ್ರಫ್ ಅಲಿ, ಮೊಗ್ರಾಲ್

1974ರಲ್ಲಿ ಪಾಕಿಸ್ತಾನದ ಸಂವಿಧಾನದ ತಿದ್ದುಪಡಿ ಮೂಲಕ ಝುಲ್‌ಫಿಕರ್ ಅಲಿ ಭುಟ್ಟೋ ಅಹ್ಮದೀ ಮುಸ್ಲಿಮರನ್ನು ಮುಸ್ಲಿಮೇತರ ಅಲ್ಪಸಂಖ್ಯಾತರೆಂದು ಘೋಷಿಸಿದರು. ಆಗ ಭುಟ್ಟೋ "ನಾನು 90 ವರ್ಷಗಳ ಸಮಸ್ಯೆಯನ್ನು 90 ದಿನಗಳಲ್ಲಿ ಪರಿಹರಿಸಿದೆ" ಎಂದು ಹೆಮ್ಮೆಯಿಂದ ಹೇಳಿದ್ದರು. ಈ ತಿದ್ದುಪಡಿಯ ತೀರ್ಮಾನದ ಬಗ್ಗೆ ಪಾಕಿಸ್ತಾನದ "ನವಾಯೆ ವಕ್ತ್" ಎಂಬ ಪತ್ರಿಕೆ ಹೀಗೆ ಬರೆಯಿತು:

"ಇಸ್ಲಾಮಿನ ಸಮಗ್ರ ಚರಿತ್ರೆಯಲ್ಲಿ ಒಂದು ಮುಖ್ಯ ಪ್ರಶ್ನೆಯ ಬಗ್ಗೆ ಇಂತಹ ರೀತಿ ಸಾಮುದಾಯಿಕ ಐಕ್ಯ ಹಿಂದೆಂದೂ ಉಂಟಾಗಿರಲಿಲ್ಲ. ಸಾಮುದಾಯಿಕ ಐಕ್ಯತೆಯಿಂದ ತೀರ್ಪು ನೀಡಿದವರಲ್ಲಿ ದೇಶದ ದೊಡ್ಡ ಧಾರ್ಮಿಕ ವಿದ್ವಾಂಸರು, ಇಸ್ಲಾಮ್ ಧರ್ಮಶಾಸ್ತ್ರ ಪಂಡಿತರು, ಸಾಮಾನ್ಯ ರಾಜಕೀಯ ನಾಯಕರು, ಪ್ರತಿಯೊಂದು ಗುಂಪಿನ ರಾಜಕೀಯ ಮುಂದಾಳುಗಳು ಯೋಗ್ಯವಾದ ರೀತಿಯಲ್ಲಿ ಒಮ್ಮತ ಹೊಂದಿದರು. ಸೂಫೀ ಸಂಪ್ರದಾಯದ ಗಣ್ಯರು, ಅಲ್ಲಾಹನ ಬಗ್ಗೆ ಜ್ಞಾನಸಂಪನ್ನರು, ತಸವ್ವುಫ್ ಮತ್ತು ತರೀಖತ್ ಅನುಯಾಯಿಗಳೂ ಪೂರ್ಣವಾಗಿ ತಮ್ಮ ಸಹಮತವನ್ನು ಪ್ರಕಟಿಸಿದರು. ಖಾದಿಯಾನಿ ಪಂಗಡವನ್ನು ಹೊರತು ಪಡಿಸಿದರೆ ಮುಸ್ಲಿಮರಲ್ಲಿ 72 ಪಂಗಡಗಳಿವೆ ಎಂದು ಹೇಳಲಾಗುತ್ತಿದೆ. ಈ ಎಲ್ಲಾ ಪಂಗಡಗಳು ಈ ಸಮಸ್ಯೆಯ ಬಗ್ಗೆ, ಈ ರೀತಿಯ ಪರಿಹಾರದ ಬಗ್ಗೆ ಸಹಮತವನ್ನು ಹೊಂದಿದ್ದಾರೆ ಮತ್ತು ಸಂತೋಷಗೊಂಡಿದ್ದಾರೆ."

("**ನವಾಯೆ ವಕ್ತ್**", ಪಾಕಿಸ್ತಾನ್ 17-10-1974 ಪುಟ 4. ಖಾದಿಯಾನಿನ "ಬದ್ರ್" ವಾರಪತ್ರಿಕೆಯ 20-11-2002ರ ಸಂಚಿಕೆಯಲ್ಲಿ ನೀಡಿದ ಉದ್ಧರಣೆ)

ಆ ಸಮಯದಲ್ಲಿ ಪಾಕಿಸ್ತಾನದ ಪಾರ್ಲಿಮೆಂಟ್ ಸದಸ್ಯರನ್ನು ಸಂಬೋಧಿಸಿ ಅಹ್ಮದಿಯಾ ಜಮಾಅತಿನ ಆ ಕಾಲಘಟ್ಟದ ಇಮಾಮರಾದ ತೃತೀಯ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ (ರಹಿಮಹುಲ್ಲಾಹು) ಅವರಿಗೆ ಮುನ್ನೆಚ್ಚರಿಕೆ ನೀಡುತ್ತಾ ಹೇಳಿದರು:

"ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಮುಸ್ಲಿಮರ 72 ಪಂಗಡಗಳು ದಾರಿತಪ್ಪಿಹೋಗುವುವು ಎಂದೂ ಒಂದು ಪಂಗಡ ಮಾತ್ರ ಮೋಕ್ಷಗಳಿಸುವುದೆಂದೂ ಹೇಳಿದ್ದರು. ಆದುದರಿಂದ ಅಲ್ಲಾಹನಿಗೋಸ್ಕರ ಹಝ್ರತ್ ಪೈಗಂಬರರ(ಸ) ತೀರ್ಪಿಗೆ ವಿರುದ್ಧವಾಗಿ ದ್ರೋಹ ಮಾಡಬೇಡಿರಿ. ಹಾಗೆ ನೀವು ಮಾಡುವುದಾದರೆ ಅದರ ಅಂತಿಮ ಪರಿಣಾಮ ಒಳ್ಳೆಯದಾಗದು." ಆದರೆ ಆ ದುರದೃಷ್ಟ ಶಾಲಿಗಳು ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಅವರು ಮಾಡಿದ ಘೋರ ಪಾಪದ ಶಿಕ್ಷೆ ಇಂದು ಪಾಕಿಸ್ತಾನ ಅನುಭವಿಸುತ್ತಿದೆ.

ಪಾಕಿಸ್ತಾನದ ಲಾಹೋರಿನ "ಜಂಗ್" ದಿನಪತ್ರಿಕೆಯಲ್ಲಿ ಮಜೀದ್ ಸೇಠೀ ಹೀಗೆ ಬರೆದರು:

"ಝುಡ್. ಎ. ಭುಟ್ಟೋ ಆಕರ್ಷಕ ಮತ್ತು ಪ್ರತಿಜ್ಞಾಬದ್ಧ ವ್ಯಕ್ತಿತ್ವವುಳ್ಳವರಾಗಿದ್ದರು. ಅವರ ವಿರೋಧಿಗಳು ಸಹ ಅವರ ನೈಪುಣ್ಯತೆ ಮತ್ತು ಅವರ ವಾಕ್ಚಾತುರ್ಯವನ್ನು ಒಪ್ಪಿಕೊಳ್ಳುವವರಾಗಿದ್ದರು........ ಈ ಚುಂಬಕ ಶಕ್ತಿಯುಳ್ಳ ವಿಚಾರಶೀಲ ವ್ಯಕ್ತಿಯ ಪ್ರಗತಿ ಅಪ್ರತಿಮವಾಗಿತ್ತು. ಅವರ ಅಧಃಪತನ ಸಹ ನೀತಿಪಾಠದಾಯಕವಾಗಿತ್ತು. ಅವರ ಕುಟುಂಬದ ದ್ವಿತೀಯ ಮುಖ್ಯವ್ಯಕ್ತಿ ಎಂದರೆ ಒಬ್ಬ ಮಾಜಿ ಪ್ರಧಾನ ಮಂತ್ರಿಯ ಪತ್ನಿಯೂ ಇನ್ನೊಬ್ಬ ಮಾಜಿ ಪ್ರಧಾನ ಮಂತ್ರಿಯ ಮಾತೆಯೂ ಆಗಿದ್ದ ಆಕೆ ಅಪರಾಧ ಹೊರಿಸಲ್ಪಟ್ಟವರಾಗಿ ದೀರ್ಘ ಕಾಲದಿಂದ ದಯನೀಯ ಸ್ಥಿತಿಯಲ್ಲಿದ್ದಾರೆ. ಭುಟ್ಟೋರ ಒಬ್ಬ ಪುತ್ರ ಪರದೇಶದಲ್ಲಿ ನಿಗೂಢವಾಗಿ ಒಂದು ಫ್ಲ್ಯಾಟ್‌ನಲ್ಲಿ ಮೃತನಾಗಿ ಕಾಣಲ್ಪಟ್ಟನು. ಇನ್ನೊಬ್ಬ ಪುತ್ರ ತನ್ನ ಸಹೋದರಿಯೇ ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಪೋಲೀಸರ ಗುಂಡಿನಿಂದ ಹತನಾದನು. ಆತನ ಹತ್ಯೆಗೆ ಯಾರು ಹೊಣೆಗಾರರೆಂದು ಇನ್ನೂ ಪತ್ತೆಹಚ್ಚಲಾಗಿಲ್ಲ. ಭುಟ್ಟೋ ಪುತ್ರಿ ಪುನಃ ಪ್ರಧಾನ ಮಂತ್ರಿಯಾಗಿ ಆಯ್ಕೆಯಾದರೂ ಈಗ (ಎಂದರೆ 2001ರಲ್ಲಿ – ಲೇಖಕ) ಶಿಕ್ಷೆಗೆ ಗುರಿಪಡಿಸಲ್ಪಟ್ಟವಳೋ ಪಲಾಯನಗೈದವಳೋ ಗಡಿಪಾರು ಮಾಡಲ್ಪಟ್ಟವಳೋ ಆಗಿದ್ದಾಳೆ. ಆಕೆಯ ಪತಿ ಮಾಜಿ ಮಂತ್ರಿ (ಈಗಿನ ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಝರ್‌ದಾರಿ – ಲೇಖಕ) ಅನೇಕ ಮೊಕದ್ದಮೆಗಳಲ್ಲಿ ಹಿಡಿಗೂಡಲ್ಪಟ್ಟು ಏಳುವರ್ಷಗಳಿಂದ ಸೆರೆಮನೆ ಯಲ್ಲಿದ್ದಾರೆ. ಈ ಭಯಾನಕ ಮತ್ತು ದಾರುಣ ಮಾನವೀಯ ತಮಾಷೆ ಗಳು (ವಾಸ್ತವಿಕವಾಗಿ ವಿಪತ್ತುಗಳು – ಲೇಖಕ) ಇಂದಿನ ಸ್ಥಿತಿಗತಿಗಳನ್ನು ನೋಡುವ ಜನರಿಗೆ ಮತ್ತು ದೂರದರ್ಶಿಗಳಾದ ಜನರಿಗೆ ನೀತಿಪಾಠ ದಾಯಕವಾಗಿವೆ. ಈ ದೇಶದ ನಿವಾಸಿಗಳಿಗೆ ಈ ವಿಷಯವು ಚಿಂತಾರ್ಹ ವಾಗಿದೆ. ನಾವು ಸಾಮೂಹಿಕವಾಗಿ ಜೊತೆಗೂಡಿ ಮಾಡಿದ ಯಾವ ಪಾಪಕರ್ಮಕ್ಕೆ ನಮಗೆ ದೇವನಿಂದ ಕ್ಷಮಾಪಣೆಯು ಲಭಿಸುತ್ತಾ ಇಲ್ಲ?

("**ಜಂಗ್**", ಲಾಹೋರ್ 22-1-2001)

ಅನಂತರ ಭುಟ್ಟೋ ಪುತ್ರಿ ಬೇನಝೀರ್ ಭುಟ್ಟೋ ಭಯೋತ್ಪಾದಕರ ದಾಳಿಗೆ ತುತ್ತಾಗಿ ಕೊಲ್ಲಲ್ಪಟ್ಟರು.

ಝುಲ್‌ಫಿಕರ್ ಅಲಿ ಭುಟ್ಟೋ ನಂತರ ಝಿಯಾಉಲ್ ಹಕ್ ಅಧಿಕಾರಕ್ಕೆ ಬಂದರು. ಖಾದಿಯಾನಿಯತನ್ನು (ಅಹ್ಮದಿಯತ್) ನಾಶ ಪಡಿಸುವ ಕೆಲಸವನ್ನು ದೇವನು ತನಗೆ ವಹಿಸಿಕೊಟ್ಟಿರುವುದಾಗಿ ಅವನು ವಾದಿಸಿದನು. ಅವನು 1984ರಲ್ಲಿ ಕುಖ್ಯಾತ ಆರ್ಡಿನೆನ್ಸ್ ಮೂಲಕ ಅಹ್ಮದಿಯರಿಗೆ ಪಾಕಿಸ್ತಾನದಲ್ಲಿ ಜೀವಿಸುವುದನ್ನು ಕಷ್ಟಕರವನ್ನಾಗಿ ಮಾಡಿದನು. ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ (ರಹಿಮಹುಲ್ಲಾಹ್) ಲಂಡನಿಗೆ ವಲಸೆ ಹೋಗಲು ನಿರ್ಬಂಧಿಸಲ್ಪಟ್ಟರು. ಸಾವಿರಾರು ಅಹ್ಮದಿಯರು ಪಾಕಿಸ್ತಾನವನ್ನು ಬಿಟ್ಟು ಅನೇಕ ವಿದೇಶಗಳಿಗೆ ವಲಸೆ ಹೋಗಬೇಕಾಯಿತು. ಪಾಕಿಸ್ತಾನದಲ್ಲಿ ಉಳಿದಿರುವ ಅಹ್ಮದಿಯರು ಅನೇಕ ವರ್ಷಗಳಿಂದ ವಿವಿಧ ರೀತಿಯ ದೌರ್ಜನ್ಯಗಳನ್ನು ಸಹಿಸಬೇಕಾಯಿತು. ಆದರೆ ಅಲ್ಲಾಹನು ಅಹ್ಮದಿಯರನ್ನು ಕೈಬಿಡಲಿಲ್ಲ. 1984ರಲ್ಲಿ ಅಹ್ಮದಿಯಾ ಜಮಾಅತ್ 74 ದೇಶಗಳಲ್ಲಿ ತನ್ನ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸಿತ್ತು. ಆದರೆ ಈಗ ಅಲ್ಲಾಹನ ಅನುಗ್ರಹದಿಂದ 198 ದೇಶಗಳಲ್ಲಿ ಅಹ್ಮದಿಯಾ ಪ್ರಚಾರ ಕೇಂದ್ರಗಳು ಇವೆ. ಜಮಾಅತ್ ಸದಸ್ಯರ ಸಂಖ್ಯೆ ಅನೇಕ ಪಟ್ಟು

ವರ್ಧಿಸಿದೆ.

ಪಾಕಿಸ್ತಾನದ ಸಂವೇದನಾಶೀಲ ಸಂಪರ್ಕ ಮಾಧ್ಯಮಗಳು ಪುನಃ ಬರೆದುವು. ಅವರ ಮನಸ್ಸಾಕ್ಷಿ ಮೌನದಿಂದಿರಲು ಸಮ್ಮತಿಸಲಿಲ್ಲ. "ಜಂಗ್" ಪತ್ರಿಕೆ ಪುನಃ ಹೀಗೆ ಬರೆಯಿತು:

"ಪಾಕಿಸ್ತಾನದಲ್ಲಿ ದೌಲತಾನ ಸಾಹೇಬ್ ಪ್ರಥಮ ಬಾರಿ ಖಾದಿಯಾನಿ ಪ್ರಶ್ನೆಯನ್ನು ಕೈಗೆತ್ತಿಕೊಂಡರು.... ಅನಂತರ ಭುಟ್ಟೋ ಅವರ ಪಕ್ಷ ಅಹ್ಮದಿಯರ ಬೆಂಬಲ ಮತ್ತು ಸಹಾಯದಿಂದ ಅಧಿಕಾರಕ್ಕೇರಿತ್ತು. ಭುಟ್ಟೊ ತನ್ನ ಕುಂದಿ ಹೋಗುತ್ತಿದ್ದ ವರ್ಚಸ್ಸು, ಮುಳುಗಿ ಹೋಗುತ್ತಿರುವ ಅಧಿಕಾರವನ್ನು ರಕ್ಷಿಸಲು ಮತ್ತು ಅದನ್ನು ಮುಂದುವರಿಸಲು ತನಗೆ ಉಪಕಾರ ಮಾಡಿದ ಅಹ್ಮದಿಯಾ ಜಮಾಅತಿನ ಕೊರಳಿಗೆ ಹೊಡೆತ ನೀಡಿದರು. ಎಂತಹ ಹೊಡೆತವೆಂದರೆ 90 ವರ್ಷಗಳ ಸಮಸ್ಯೆಯನ್ನು ಪರಿಹರಿಸಲಾಯಿತು. .... ಅಧ್ಯಕ್ಷ ಝಿಯಾಉಲ್‌ಹಕ್ ಅಹ್ಮದಿಯತ್‌ನೊಂದಿಗೆ ವಿರೋಧವನ್ನು ಸ್ಪಷ್ಟವಾಗಿ ಪ್ರಕಟಿಸಿದರು. ಅಹ್ಮದಿಯರನ್ನು ಪ್ರಮುಖ ಹುದ್ದೆಗಳಿಂದ ದೂರಸರಿಸುವುದಾಗಿ ಪ್ರತಿಜ್ಞೆ ಮಾಡಿದರು. ಆದರೆ ಭೂತಕಾಲದ ಘಟನೆಗಳನ್ನು ಪರಾಮರ್ಶಿಸುವಾಗ ಹೃದಯ ಕಂಪಿಸುತ್ತದೆ. ಏಕೆಂದರೆ ಯಾರೆಲ್ಲಾ ಖಾದಿಯಾನಿ ಪ್ರಶ್ನೆಯನ್ನು ಎತ್ತಿದರೋ ಮತ್ತು ಅದರ ಬಗ್ಗೆ ಪ್ರಸ್ತಾಪಿಸಿದರೋ ಅವರೆಲ್ಲಾ ಅಧಿಕಾರವನ್ನು ಕಳೆದುಕೊಂಡರು. ಹೀಗೆ ಆಗುವುದಾದರೂ ಏಕೆ? ಇದರ ಹಿನ್ನೆಲೆಯಲ್ಲಿ ಯವ್ಯಾವ ಕಾರಣಗಳು ಅಥವಾ ಅದೃಶ್ಯ ಶಕ್ತಿಗಳು ಕೆಲಸಮಾಡುತ್ತಿವೆ ಎಂಬುದರ ಬಗ್ಗೆ ನಾವೆಲ್ಲರೂ ಚಿಂತಿಸಬೇಕಾಗಿದೆ."

("ಜಂಗ್" ಲಾಹೋರ್, 13-12-1983
"ಬದ್ರ್" ಪತ್ರಿಕೆ 23-03-2004ರ ಸಂಚಿಕೆಯಿಂದ ಉದ್ಧರಣೆ)

ಅಲ್ಲಾಹನ ಶಿಕ್ಷೆ ತಡವಾಗಿ ಬರುವುದಾದರೂ ಅದು ಬಂದೇ ತೀರುವುದು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**"ವ ಉಮ್‌ಲೀ ಲಹುಮ್ ಇನ್ನ ಕೈದೀ ಮತೀನ್" –**

**"ನಾನು ಅವರಿಗೆ ಕಾಲಾವಕಾಶ ನೀಡುತ್ತೇನೆ. ನಿಸ್ಸಂಶಯ ವಾಗಿಯೂ ನನ್ನ ಯೋಜನೆ ಸುಶಕ್ತವಾದುದು."** **(7 : 184)**

ಇದು ಅಲ್ಲಾಹನ ನಡೆವಳಿಕೆಯಾಗಿದೆ. ಖಂಡಿತವಾಗಿಯೂ ಹೀಗೆಯೇ ಸಂಭವಿಸುವುದು. ಅಲ್ಲಾಹನ ನಡೆವಳಿಕೆಯಲ್ಲಿ ಯಾವ ಬದಲಾವಣೆಯನ್ನೂ ಕಾಣಲಾರೆವು.

ಅನಂತರ ಜನರಲ್ ಝಿಯಾಉಲ್ ಹಕ್ ಮತ್ತು ಆತನ ಜೊತೆ ವಿಮಾನವೇರಿದವರಿಗೆ ಏನು ಸಂಭವಿಸಿತೆಂದು ಲೋಕದ ಜನರಿಗೆ ತಿಳಿದಿದೆ.

ಕಳೆದ ವರ್ಷ 2010 ಮೇ ದಿನಾಂಕ 28ರಂದು ಲಾಹೋರಿನಲ್ಲಿ ನಮಾಝ್‌ಗೋಸ್ಕರ ಮಸ್‌ಜಿದ್‌ನಲ್ಲಿದ್ದ ಸಾತ್ವಿಕರೂ ನಿರಾಯುಧರೂ ಆಗಿದ್ದ ಅಹ್ಮದಿಯರನ್ನು ನಿರ್ದಯವಾಗಿ ಹತ್ಯೆ ಮಾಡಲಾಯಿತು. ಸರಕಾರ ಈ ಘಟನೆಯ ಪ್ರೇಕ್ಷಕನಾಗಿ ನಿಂತು ನೋಡಿತು. ಹುತಾತ್ಮರಾದ ಈ ಅಹ್ಮದಿಯರು ಲೊಕದ ಮುಂದೆ ತಮ್ಮ ಧೈರ್ಯ ಮತ್ತು ಸಹನೆಯ ಎಂತಹ ಉದಾಹರಣೆಯಾದರೆಂದರೆ ಲೋಕಾಂತ್ಯದ ತನಕ ಇಸ್ಲಾಮ್ ಮತ್ತು ಅಹ್ಮದಿಯತಿನ ಹೆಸರನ್ನು ಚಿರಸ್ಥಾಯಿಯಾಗಿಯೂ ಪ್ರಕಾಶಮಾನವಾಗಿಯೂ ಇರಿಸುವಂತವರಾದರು.

ಸತ್ಯವಿಶ್ವಾಸಿಗಳ ನೇತಾರರಾದ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರ ಆದೇಶ ಅನುಸರಿಸಿ ಅಹ್ಮದಿಯರು ಯಾವುದೇ ಪ್ರತಿಭಟನೆಯ ಮೆರವಣಿಗೆ ನಡೆಸಲಿಲ್ಲ. ಹುತಾತ್ಮರ ಸಮೀಪದ ಬಂಧುಗಳು ಸಹನೆಯ ಎಂತಹ ಉನ್ನತ ಮಾದರಿಯನ್ನು ಪ್ರಕಟಿಸಿದರೆಂದರೆ ಲೋಕವು ಆಶ್ಚರ್ಯಚಕಿತವಾಯಿತು. ಆದರೆ ಈ ಹುತಾತ್ಮರ ರಕ್ತಪಾತ ನಿರರ್ಥಕವಾಗುವುದೇ? ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ (ರಹಿಮಹುಲ್ಲಾಹು) ಹೀಗೆ ದೇವ ನಿರ್ದೇಶ ಪ್ರಕಾರ ಹೇಳಿದರು:

ಖೂನೆ ಶಹೀದಾನೆ ಉಮ್ಮತ್ ಕಾ ಅಯೆ ಕಮ್ ನಝರ್
ರಾಯಿಗಾನ್ ಕಬ್ ಗಯಾ ಥಾ ಕೆ ಅಬ್ ಜಾಯೇಗ
ಹರ್ ಶಹಾದತ್ ತೇರೇ ದೇಖ್‌ತೇ ದೇಖ್‌ತೇ
ಫೂಲ್‌ಫಲ್ ಲಾಯೇಗಿ ಫೂಲ್‌ಫಲ್ ಜಾಯೇಗಿ

"ಓ ಸಂಕುಚಿತ ದೃಷ್ಟಿಹೊಂದಿದವನೇ, ಹುತಾತ್ಮರ ರಕ್ತ ವ್ಯರ್ಥವಾಗಿ ಹೋದುದಾದರೂ ಯಾವಾಗ? ಅದು ಈಗ ಸಹ ವ್ಯರ್ಥವಾಗಿ ಎಂದೂ ಹೋಗಲಾರದು. ಪ್ರತಿಯೊಂದು ಹುತಾತ್ಮ ಸಂಭವದ ನಂತರ ನೀನು ನೋಡುತ್ತಾ ಇರುವ ಹಾಗೆಯೇ ಅದರ ಪರಿಣಾಮವನ್ನು ಖಂಡಿತವಾಗಿಯೂ ಕಾಣುವೆ."

ಪಾಕಿಸ್ತಾನದ ಪ್ರಸಿದ್ಧ ವಿಮರ್ಶಕ ಜನಾಬ್ ಅಮ್‌ಜದ್ ಇಸ್ಲಾಮ್ ಅಮ್‌ಜದ್ ಸಾಹೇಬ್ ಹೀಗೆ ಬರೆದರು:

"ಝಿಯಾಉಲ್ ಹಕ್ ಕಾಲದಲ್ಲಿ ಆತನ ಧಾರ್ಮಿಕ ನಿಲುವುಗಳ ಕಾರಣ ಮೊದಲೇ ಜಾರಿಯಲ್ಲಿದ್ದ ವರ್ಗೀಯ ಮನೋಭಾವ ಇನ್ನಷ್ಟು ವರ್ಧಿಸಿತು ಎಂಬುದು ನಿಸ್ಸಂಶಯವಾಗಿದೆ..... ಝಿಯಾಉಲ್ ಹಕ್ ಎಂತಹ ನಾಣ್ಯವನ್ನು ಟಂಕಿಸಿದನೆಂದರೆ ಅದರ ಒಂದು ಬದಿಯಲ್ಲಿ ಜಿಹಾದ್ ಮತ್ತು ಇನ್ನೊಂದು ಬದಿಯಲ್ಲಿ ಭಯೋತ್ಪಾದಕ ಕೃತ್ಯ ಮುದ್ರಿತವಾಗಿತ್ತು. ಈ ನಾಣ್ಯದ ಮೂಲಕ ತಾಲಿಬಾನ್ ಮತ್ತು ಅಲ್‌ಖಾಯಿದ ಗುಂಪುಗಳು ಹುಟ್ಟಿದುವು..... ವಿವಿಧ ಸಿದ್ಧಾಂತಗಳ ನೆಲೆಯಲ್ಲಿ ತಮ್ಮವರೇ ಆಗಿರುವ ಮುಸ್ಲಿಮ್ ಸಹೋದರರೊಂದಿಗೆ ಅವರ ಎಲ್ಲಾ ಜಗಳಗಳು ನಡೆಯುತ್ತಾ ಇವೆ.

"ಈ ತಥಾಕಥಿತ ಇಸ್ಲಾಮಿನ ಸಂರಕ್ಷಕರು ಮಸ್ಜಿದ್‌ಗಳಲ್ಲಿ ನಮಾಝ್‌ನಲ್ಲಿ ಸಾಷ್ಟಾಂಗ ಪ್ರಣಾಮ ಮಾಡುತ್ತಿರುವ ನಿರಪರಾಧಿ ನಿಷ್ಕಳಂಕ ಮುಸ್ಲಿಮರನ್ನು ಹತ್ಯೆ ಮಾಡಿ ರಕ್ತದಿಂದ ಹೋಳಿಯಾಟ ಆಡುತ್ತಾರೆ. ಖಾದಿಯಾನಿಗಳ ಆರಾಧನಾಲಯಗಳ ಮೇಲೆ ನಡೆದ ಆಕ್ರಮಣಗಳು ಈ ಕುಕೃತ್ಯಗಳ ಸರಪಳಿಯ ಕೊಂಡಿಗಳಾಗಿವೆ. ಧಾರ್ಮಿಕ ಅತಿರೇಕ ವರ್ತನೆ ಮತ್ತು ಉಗ್ರವಾದ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂದು ನಾವು ಯೋಚಿಸಲೇ ಬೇಕಾದ ವಿಷಯವಾಗಿದೆ."

("ಎಕ್ಸ್‌ಪ್ರೆಸ್" ದಿನಪತ್ರಿಕೆ, ಪಾಕಿಸ್ತಾನ 30-05-2010
"ಬದ್ರ್" ಖಾದಿಯಾನ್ 24-06-2010ರ ಉದ್ಧರಣೆ)

ಲಾಹೋರಿನ ದುರಂತ ಘಟನೆಯ ನಂತರ ಪಾಕಿಸ್ತಾನದಲ್ಲಿ ವಿನಾಶಗಳ ಬಿರುಗಾಳಿ ಬೀಸಿತು. ಅಲ್ಲಿ ಎಂತಹ ಜಲಪ್ರಳಯ ಸಂಭವಿಸಿತೆಂದರೆ ಕಳೆದ ಒಂದು ನೂರು ವರ್ಷಗಳಲ್ಲಿ ಅಂತಹ ಜಲ ಪ್ರಳಯದ ಹಾವಳಿ ಸಂಭವಿಸಿರಲಿಲ್ಲ. ಅದರ ಬಗ್ಗೆ ಎಲ್ಲರೂ ಅದು

*(37ನೇ ಪುಟಕ್ಕೆ........)*

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಜುಮುಅ ನಮಾಝ್

ಶುಕ್ರವಾರ ಅಲ್ಲಾಹನ ಅನುಗ್ರಹಗಳಿಗೆ ಪಾತ್ರವಾದ ಒಂದು ಶುಭದಿನವಾಗಿದೆ. ಅದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಸೂರತುಲ್ ಜುಮುಅ ಎಂಬ ಒಂದು ಅಧ್ಯಾಯವೇ ಇದೆ. ಶುಕ್ರವಾರ ಮಧ್ಯಾಹ್ನ ನಮಾಝ್‌ಗಾಗಿ ಅಝಾನ್ ಕರೆ ನೀಡಲ್ಪಟ್ಟಾಗ ಎಲ್ಲ ಕೆಲಸಗಳನ್ನು ನಿಲ್ಲಿಸಿ ಕೂಡಲೇ ಮಸ್‌ಜಿದ್‌ಗಳಲ್ಲಿ ಸೇರಿ ಜುಮುಅ ನಮಾಝ್ ಮಾಡಬೇಕೆಂದು ಪವಿತ್ರ ಖುರ್‌ಆನಿನಲ್ಲಿ ಆಜ್ಞಾಪಿಸಲಾಗಿದೆ. ಜುಮುಅವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವುದು ಬಹಳ ದೊಡ್ಡ ಪಾಪಕೃತ್ಯವಾಗಿದೆ. ಜುಮುಅ ನಮಾಝ್‌ನಲ್ಲಿ ಪಾಲುಗೊಂಡು ಅದರ ಖುತ್‌ಬ (ಪ್ರವಚನ) ಶ್ರದ್ಧೆಯಿಂದ ಆಲಿಸಬೇಕು.

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಶುಕ್ರವಾರ ಫಜ್‌ರ್ ನಮಾಝ್‌ನಲ್ಲಿ ಸೂರತುಲ್ ಫಾತಿಹದ ನಂತರ ಒಂದನೆಯ ರಕ್‌ಅತಿನಲ್ಲಿ ಸೂರತುಸ್ಸಜ್ದ ಮತ್ತು ಎರಡನೆಯ ರಕ್‌ಅತಿನಲ್ಲಿ ಸೂರತುದ್ದಹ್‌ರ್ ಓದುತ್ತಿದ್ದರು.

ರೋಗಿಗಳು, ಪ್ರಯಾಣಿಕರು, ಸ್ತ್ರೀಯರು, ಮಕ್ಕಳು, ಅಂಧರು, ಸೆರೆಯಾಳುಗಳು ಇವರನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ಜುಮುಅ ನಮಾಝ್ ಕಡ್ಡಾಯವಾಗಿದೆ. ಆದರೆ ಇವರು ಸಹ ನಮಾಝ್‌ನಲ್ಲಿ ಭಾಗವಹಿಸಿದರೆ ಅದು ಅವರಿಗೆ ಪುಣ್ಯದಾಯಕವಾಗುವುದು.

ಜುಮುಅ ಪ್ರಾರ್ಥನೆಗೆ ಮಸ್‌ಜಿದ್‌ಗೆ ಪ್ರವೇಶಿಸಿದರೆ ಸ್ಥಳವಿರುವಲ್ಲಿ ಕುಳಿತುಕೊಳ್ಳಬೇಕು. ಕುಳಿತಿರುವ ಜನರ ಹೆಗಲಿನ ಮೇಲೆ ದಾಟಿಕೊಂಡು ಮುಂದೆ ಹೋಗಬಾರದು. ಎರಡು ಅಥವಾ ನಾಲ್ಕು ರಕ್‌ಅತ್ ಸುನ್ನತ್ ನಮಾಝ್ ಮಾಡಿ ದುಆ ಇಸ್ತಿಗ್‌ಫಾರ್, ಖುರ್‌ಆನ್ ಪಾರಾಯಣಗಳಲ್ಲಿ ನಿರತರಾಗಬೇಕು. ಅನಾವಶ್ಯಕವಾಗಿ ಮಾತನಾಡಬಾರದು. ಇಮಾಮ್ ಖುತ್‌ಬ ಪ್ರಾರಂಭಿಸಿದರೆ, ಮೌನವಾಗಿ ಶ್ರದ್ಧೆಯಿಂದ ಅದನ್ನು ಆಲಿಸುತ್ತಾ ಇರಬೇಕು.

ಖುತ್‌ಬದ ಸಮಯದಲ್ಲಿ ಯಾರೂ ಮಾತಾಡಬಾರದು. ಮಾತನಾಡಿದರೆ ಖುತ್‌ಬ ಕೇಳಿದ ಪುಣ್ಯ ನಷ್ಟವಾಗುವುದು.

ಜುಮುಅ ನಮಾಝ್ ಎರಡು ರಕ್‌ಅತ್‌ಗಳನ್ನೊಳಗೊಂಡಿದೆ. ಇಮಾಮ್ ಸೂರತುಲ್ ಫಾತಿಹ ಮತ್ತು ಇತರ ಸೂರತನ್ನು ಉಚ್ಚಸ್ವರದಲ್ಲಿ ಓದಬೇಕು. ಒಂದನೆಯ ರಕ್‌ಅತಿನಲ್ಲಿ ಸೂರತುಲ್ ಅಲ್‌ಲಾ ಮತ್ತು ಎರಡನೆಯ ರಕ್‌ಅತಿನಲ್ಲಿ ಸೂರತುಲ್ ಗಾಶಿಯ ಓದಬೇಕು ಅಥವಾ ಒಂದನೆಯ ರಕ್‌ಅತಿನಲ್ಲಿ ಸೂರತುಲ್ ಜುಮುಅ ಮತ್ತು ಎರಡನೆಯ ರಕ್‌ಅತಿನಲ್ಲಿ ಸೂರತುಲ್ ಮುನಾಫಿಖೂನ್ ಓದುವುದು ಸುನ್ನತಾಗಿದೆ. ಜುಮುಅ ನಮಾಝ್ ಮಾಡಿದ ನಂತರ 2 ಅಥವಾ 4 ರಕ್‌ಅತ್ ಸುನ್ನತ್ ನಮಾಝ್ ಮಾಡಬೇಕು.

ಝುಹ್‌ರ್ ನಮಾಝಿನ ಸಮಯ ಮತ್ತು ಜುಮುಅ ನಮಾಝಿನ ಸಮಯ ಒಂದೇ ಆಗಿದೆ. ಜುಮುಅ ನಮಾಝಿಗೆ ಹೋಗುವವರು ಸ್ನಾನ ಮಾಡಿ ಶುದ್ಧ ವಸ್ತ್ರಗಳನ್ನು ಧರಿಸಿ ಹೋಗಬೇಕು. ಸುಗಂಧ ದ್ರವ್ಯಗಳನ್ನು ಉಪಯೋಗಿಸುವುದು ಸಹ ಉತ್ತಮವಾಗಿದೆ. ಒಂದು ಸ್ಥಳದಲ್ಲಿ ಮೂವರು ಇದ್ದರೆ ಅವರು ಜುಮುಅ ನಮಾಝ್ ಮಾಡಬೇಕು.

ಯಾರಾದರೂ ಒಬ್ಬ ತಡವಾಗಿ ಬಂದು ಆತನಿಗೆ ಇಮಾಮ್ ಜೊತೆ ಒಂದು ರಕ್‌ಅತ್ ಮಾತ್ರ ನಮಾಝ್ ಮಾಡಲು ಸಾಧ್ಯವಾದರೆ ಇಮಾಮ್ ಸಲಾಮ್ ಹೇಳಿದ ನಂತರ ಇನ್ನೊಂದು ರಕ್‌ಅತನ್ನು ಆತನು ಪೂರ್ಣಗೊಳಿಸಿದರೆ ಆತನಿಗೆ ಜುಮುಅ ನಮಾಝ್ ಲಭಿಸಿದುದಾಗಿ ಎಣಿಸಲ್ಪಡುವುದು.

ಒಂದು ರಕ್‌ಅತ್ ಸಹ ಸಿಗದಿದ್ದರೆ ಅಂಥ ವ್ಯಕ್ತಿ ಝುಹ್‌ರ್ ನಮಾಝ್ ಮಾಡಬೇಕು. ಜುಮುಅ ನಮಾಝಿಗೆ ಮುಂಚೆ ಇಮಾಮ್ ಓದಬೇಕಾದ ಖುತ್‌ಬ:

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيكَ لَهُ
وَأَشْهَدُ أَنَّ مُحَمَّدًا عَبْدُهُ وَرَسُولُهُ أَمَّا بَعْدُ
فَأَعُوذُ بِاللّٰهِ مِنَ الشَّيْطَانِ الرَّجِيمِ
بِسْمِ اللّٰهِ الرَّحْمٰنِ الرَّحِيمِ

ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ವ ಅಶ್‌ಹದು ಅನ್ನ ಮುಹಮ್ಮದನ್
ಅಬ್ದುಹೂ ವ ರಸೂಲುಹೂ
ಅಮ್ಮಾ ಬಅ್‌ದು ಫಅಊಧು ಬಿಲ್ಲಾಹಿ ಮಿನಶ್ಶೈತಾನಿರ್ರಜೀಮ್
ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್

ಹೀಗೆ ಓದಿದ ನಂತರ ಸೂರತುಲ್ ಫಾತಿಹ ಓದಬೇಕು. ಅನಂತರ ಸಂದರ್ಭೋಚಿತವಾದ ಆವಶ್ಯಕತೆಗಳ ಕುರಿತು ಒಂದು ಪ್ರವಚನ ನೀಡಬೇಕು. ಅನಂತರ ಅಲ್ಪ ಸಮಯ ಕುಳಿತು ಪುನಃ ಎದ್ದು ಎರಡನೆಯ ಖುತ್‌ಬ ಈ ರೀತಿ ಓದಬೇಕು:

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ
وَنَتَوَكَّلُ عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَمِنْ سَيِّاٰتِ
اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا
هَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَحْدَهٗ لَاشَرِيْكَ
لَهٗ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ ، عِبَادَ اللّٰهِ رَحِمَكُمُ
اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ
تَذَكَّرُوْنَ ○ اُذْكُرُوا اللّٰهَ يَذْكُرْكُمْ وَادْعُوْهُ يَسْتَجِبْ
لَكُمْ وَلَذِكْرُ اللّٰهِ اَكْبَرُ ،

ಅಲ್‌ಹಮ್ದುಲಿಲ್ಲಾಹಿ ನಹ್‌ಮದುಹೂ ವನಸ್ತಈನುಹೂ ವ ನಸ್ತಗ್‌ಫಿರುಹೂ ವ ನೂಮಿನು ಬಿಹೀ ವ ನತವಕ್ಕಲ್ ಅಲೈಹಿ ವ ನಊಧುಬಿಲ್ಲಾಹಿ ಮಿನ್ ಶುರೂರಿ ಅನ್‌ಫುಸಿನಾ ವ ಮಿನ್ ಸಯ್ಯಿಆತಿ ಅಅ್‌ಮಾಲಿನಾ ಮನ್ ಯಹ್ದಿಹಿಲ್ಲಾಹು ಫಲಾ ಮುಝಿಲ್ಲ ಲಹೂ ವಮನ್ ಯುಝ್‌ಲಿಲ್‌ಹು ಫಲಾ ಹಾದಿಯ ಲಹೂ. ವ ನಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ವ ನಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ. ಇಬಾದಲ್ಲಾಹಿ ರಹಿಮಕುಮುಲ್ಲಾಹು ಇನ್ನಲ್ಲಾಹ ಯಅ್‌ಮುರು ಬಿಲ್‌ಅದ್‌ಲಿ ವಲ್ ಇಹ್‌ಸಾನಿ ವ ಈತಾಯಿ ಧಿಲ್ ಖುರ್‌ಬಾ ವ ಯನ್‌ಹಾ ಅನಿಲ್ ಫಹ್‌ಶಾಇ ವಲ್ ಮುನ್‌ಕರಿ ವಲ್ ಬಗ್‌ಯಿ ಯಇಝುಕುಮ್ ಲಅಲ್ಲಕುಮ್ ತಧಕ್ಕರೂನ್. ಉಧ್‌ಕುರುಲ್ಲಾಹ ಯಧ್‌ಕುರುಕುಮ್ ವದ್‌ಊಹು ಯಸ್ತಜಿಬ್‌ಲಕುಮ್ ವಲಧಿಕ್‌ರುಲ್ಲಾಹಿ ಅಕ್‌ಬರ್

ಅರ್ಥ : ಸರ್ವಸ್ತುತಿಗಳು ಅಲ್ಲಾಹನಿಗೆ. ನಾವು ಅವನನ್ನು ಸ್ತುತಿಸುತ್ತೇವೆ. ನಾವು ಅವನ ಸಹಾಯವನ್ನು ಯಾಚಿಸುತ್ತೇವೆ ಮತ್ತು ನಮ್ಮನ್ನು ಪಾಪದಿಂದ ವಿಮೋಚಿತರನ್ನಾಗಿ ಮಾಡಬೇಕೆಂದು ನಾವು ಕೋರುತ್ತೇವೆ. ನಾವು ಅವನನ್ನು ನಂಬುತ್ತೇವೆ. ನಾವು ಅವನ ಮೇಲೆ ಭರವಸೆ ಇಟ್ಟಿದ್ದೇವೆ. ನಮ್ಮ ಶಾರೀರಿಕವಾದ ಕೆಡುಕುಗಳಿಂದಲೂ ನಮ್ಮ ಕೃತ್ಯಗಳ ದುಷ್ಪರಿಣಾಮಗಳಿಂದಲೂ ನಮ್ಮನ್ನು ರಕ್ಷಿಸಬೇಕೆಂದು ನಾವು ಅಲ್ಲಾಹನನ್ನು ಬೇಡಿಕೊಳ್ಳುತ್ತಿದ್ದೇವೆ. ಅಲ್ಲಾಹನು ನೇರವಾದ ಮಾರ್ಗದಲ್ಲಿ ಯಾರನ್ನು ನಡೆಸುತ್ತಿರುವನೊ ಅವನನ್ನು ದುರ್ಮಾರ್ಗದಲ್ಲಿ ನಡೆಸಲು ಯಾರಿಗೂ ಸಾಧ್ಯವಿಲ್ಲ. ಯಾರನ್ನು ಅಲ್ಲಾಹನು ದುರ್ಮಾರ್ಗಿ ಎಂದು ಗಣಿಸಿರುವನೋ ಅವನನ್ನು ನೇರವಾದ ಮಾರ್ಗದಲ್ಲಿ ಯಾರೂ ನಡೆಸಲಾರರು. ಅಲ್ಲಾಹನ ಹೊರತು ಆರಾಧನೆಗೆ ಅನ್ಯರು ಯಾರೂ ಅರ್ಹರಲ್ಲವೆಂದೂ ಅವನು ಏಕನೆಂದೂ ಅವನಿಗೆ ಸಹಭಾಗಿ ಯಾರೂ ಇಲ್ಲವೆಂದೂ ನಾವು ಸಾಕ್ಷ್ಯವಹಿಸುತ್ತೇವೆ. ನಿಶ್ಚಯವಾಗಿಯೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವನ ದಾಸರೆಂದೂ ಸಂದೇಶವಾಹಕರೆಂದೂ ನಾವು ಸಾಕ್ಷ್ಯ ಹೇಳುತ್ತೇವೆ. ಅಲ್ಲಾಹನ ದಾಸರೇ, ಅಲ್ಲಾಹನು ನಿಮಗೆ ಕಾರುಣ್ಯದೋರಲಿ. ನ್ಯಾಯ ಪಾಲನೆ ಮಾಡಲು, ಒಳಿತನ್ನು ಮಾಡಲು, ಸಮೀಪದ ಸಂಬಂಧಿಕರಿಗೆ (ಅವರ ಹಕ್ಕುಗಳನ್ನು) ನೀಡಲು ಅಲ್ಲಾಹನು ನಿಮಗೆ ಆಜ್ಞಾಪಿಸುತ್ತಿದ್ದಾನೆ. ನೀಚ ಪ್ರವೃತ್ತಿಗಳನ್ನೂ ದುಷ್ಕರ್ಮಗಳನ್ನೂ ಅತಿರೇಕ ವರ್ತನೆಗಳನ್ನೂ ಅವನು ವಿರೋಧಿಸಿರುವನು. ನೀವು ಪ್ರಜ್ಞಾವಂತರಾಗಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ. ನೀವು ಅಲ್ಲಾಹನನ್ನು ಸ್ಮರಿಸಿರಿ. ಅವನು ನಿಮ್ಮನ್ನು ಸ್ಮರಿಸುವನು. ನೀವು ಅವನನ್ನು ಪ್ರಾರ್ಥಿಸಿರಿ. ಅವನು ನಿಮಗೆ ಉತ್ತರ ನೀಡುವನು. ಅಲ್ಲಾಹನನ್ನು ಸ್ಮರಿಸುವುದು ಬಹಳ ದೊಡ್ಡ ಸಂಗತಿಯಾಗಿದೆ.

★

*(............ 26ನೇ ಪುಟದಿಂದ)*

ಅಲ್ಲಾಹ್, ನೀನು ನಮಗೆ ಸರಿಯಾದ ದಾರಿಯನ್ನು ತೋರಿಸಿ ಕೊಡು ಎಂದು ಪ್ರಾರ್ಥಿಸುತ್ತಾ ಇರಿ. ಆಗ ಅಲ್ಲಾಹು ನಿಮಗೆ ಸತ್ಪಥ ತೋರಿಸಿಕೊಡುವನು. ಇಂದು ಅಹ್ಮದಿಯಾ ಜಮಾಅತಿಗೆ ಲಕ್ಷಗಟ್ಟಲೆ ಜನರು ಗುಂಪುಗುಂಪಾಗಿ ಸೇರುತ್ತಿದ್ದಾರೆ. ಈ ನಿಜಾಂಶ ಮನಗಾಣಿಸಿ ಕೊಡುವುದೇನೆಂದರೆ, ಹಝ್ರತ್ ವಾಗ್ದತ್ತ ಮಸೀಹ್[ಅ] ಖಂಡಿತ ವಾಗಿಯೂ ತನ್ನ ವಾದದಲ್ಲಿ ಸತ್ಯವಂತ ಮತ್ತು ಅವರು ದೇವನಿಯುಕ್ತರು.

"ನನಗೆ ಅಹ್ಮದಿಯರಿಗೆ ಪುನಃ ಹೇಳಲಿಕ್ಕಿರುವುದೇನೆಂದರೆ, ಇಂದು ವಿರೋಧ ಮತ್ತು ಪಿತೂರಿ – ಕಲಹಗಳ ಬಿರುಗಾಳಿ ಬಲವಾಗಿ ಬೀಸುತ್ತಿದೆ. ಪ್ರತಿಯೊಬ್ಬ ಅಹ್ಮದೀ ಸ್ತ್ರೀ, ಪುರುಷ, ಯುವಕ, ವೃದ್ಧ ಮತ್ತು ಬಾಲಕ ವಾಗ್ದತ್ತ ಮಸೀಹರ ವಾದಗಳಲ್ಲೂ ಸತ್ಯಸಾಕ್ಷ್ಯಗಳಲ್ಲೂ ದೃಢವಿಶ್ವಾಸ ಹೊಂದಲು ಪ್ರಾರ್ಥಿಸುತ್ತಾ ಇರಿ. ಅಲ್ಲಾಹು ನಮಗೆ ನಮ್ಮ ವಿಶ್ವಾಸದಲ್ಲಿ ಪೂರ್ವಾಧಿಕ ದೃಢತೆಹೊಂದಲು ಸೌಭಾಗ್ಯವನ್ನು ಅನುಗ್ರಹಿಸಲಿ. ಎಲ್ಲ ಮುಸ್ಲಿಮರೂ ಏಕ ಸತ್ಯಧರ್ಮವಾದ ಇಸ್ಲಾಮಿನಲ್ಲಿ ಒಂದುಗೂಡುವ ದೃಶ್ಯವನ್ನು ತೋರಿಸಿ ಕೊಡಲಿ. ಮುಸ್ಲಿಮರ ಕಳೆದುಹೋದ ಕೀರ್ತಿ ಮತ್ತು ಮಹತ್ವ ಪುನಃ ನಮಗೆ ನಮ್ಮ ಜೀವಿತದಲ್ಲೇ ತೋರಿಸಿಕೊಡಲಿ. ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ವಿಜಯಪತಾಕೆ ಅದರ ಪರಿಪೂರ್ಣ ಪ್ರತಾಪದೊಂದಿಗೆ ಲೋಕದಲ್ಲಿ ಪುನಃ ಹಾರಾಡುತ್ತಿರುವ ದೃಶ್ಯ ನಮಗೆ ಕಾಣಲು ಸಾಧ್ಯವಾಗಲಿ. ಆಮೀನ್." (ಅಲ್ ಫಝ್ಲ್ ಇಂಟರ್‌ನೇಶನಲ್, ಲಂಡನ್ – 15 ಅಕ್ಟೋಬರ್ 2010)

★

# ಅಹ್ಲು ಸುನ್ನತ್ ವಲ್ ಜಮಾಅತ್ ಯಾರು?

– ಕೆ. ಎಂ. ಉಮರ್, ಮಡಿಕೇರಿ

ಖೈರ ಉಮ್ಮತ್ – ಉತ್ತಮ ಸಮುದಾಯ ಎಂಬ ಸತ್ಯವಿಶ್ವಾಸಿಗಳ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಈ ರೀತಿ ಹೇಳುತ್ತಾನೆ:

ನಿಜವಾದ ಗೌರವ ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಸತ್ಯವಿಶ್ವಾಸಿಗಳಿಗೂ ಸಲ್ಲುತ್ತದೆ. (63 : 9)

ಇನ್ನೊಂದೆಡೆ ಅಲ್ಲಾಹನು ಹೇಳುತ್ತಾನೆ: ಸತ್ಯವಿಶ್ವಾಸಿಗಳಿಗೆ ನೆರವು ನೀಡುವುದು ನಮ್ಮ ಹೊಣೆಗಾರಿಕೆಯಾಗಿದೆ." (30:48) ಮತ್ತೊಂದೆಡೆ ಪವಿತ್ರ ಖುರ್‌ಆನ್ ಹೇಳುತ್ತದೆ: "ಅಲ್ಲಾಹನು ಅವಿಶ್ವಾಸಿಗಳಿಗೆ ವಿಶ್ವಾಸಿಗಳ ಮೇಲೆ ವಿಜಯದ ಮಾರ್ಗವನ್ನು ತೆರೆಯಲಾರನು." (4 : 142) ಇನ್ನೊಂದೆಡೆ ಈ ರೀತಿ ಹೇಳಿದೆ: "ನೀವು ಸತ್ಯವಿಶ್ವಾಸಿಗಳಾಗಿದ್ದರೆ ಖಂಡಿತ ವಾಗಿಯೂ ನೀವೇ ವಿಜಯಶಾಲಿಗಳು." (3: 140) ಅಲ್ಲಾಹನು ಇನ್ನೂ ಹೇಳುತ್ತಾನೆ: "ಅಲ್ಲಾಹು ಸತ್ಯವಿಶ್ವಾಸಿಗಳ ಮಿತ್ರನಾಗಿರುವನು" (3:69) ಆ ಪವಿತ್ರ ಗ್ರಂಥ ಇನ್ನೊಂದೆಡೆ ಈ ರೀತಿ ಹೇಳಿದೆ: "ನೀವು ಮನುಷ್ಯ ವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಅತಿ ಉತ್ತಮ ಸಮುದಾಯವಾಗಿದ್ದೀರಿ. (3:111)

ಪವಿತ್ರ ಖುರ್‌ಆನಿನ ವಾಕ್ಯಗಳಿಂದೆಲ್ಲಾ ತಿಳಿದು ಬರುವುದೇನೆಂದರೆ, ಗೌರವ ಹಾಗೂ ಪ್ರತಾಪದ ಅರ್ಹತೆ ಉಳ್ಳವರು ಸತ್ಯವಿಶ್ವಾಸಿ ಗಳಾಗಿರುವರು. ಅಲ್ಲಾಹುವಿನ ಸಹಾಯ ಯಾವಾಗಲೂ ಅವರಿಗೆ ಇದ್ದೇ ಇದೆ. ಅವರನ್ನು ಕಾಪಾಡುವ ಹೊಣೆ ಅಲ್ಲಾಹು ಸ್ವತಃ ವಹಿಸಿರುತ್ತಾನೆ. ಮಾತ್ರವಲ್ಲ, ಸತ್ಕರ್ಮಿಗಳಾದ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಮಹತ್ವವಾದ ಖಿಲಾಫತ್ ಸಹ ವಾಗ್ದಾನ ಮಾಡಿರುವನು. (ಸೂರತುನ್ನೂರ್)

ಆದರೂ ಮೇಲೆ ವಿವರಿಸಿದ ಪವಿತ್ರ ಖುರ್‌ಆನಿನ ಅನುಗ್ರಹಗಳು ಇಂದಿನ ನೂರು ಕೋಟಿಗೂ ಮಿಗಿಲಾದ ಅಥವಾ (ಬಹು ಸಂಖ್ಯಾತ) ಮುಸ್ಲಿಮರಲ್ಲಿ ಯಾರಿಗೆ ಲಭಿಸುತ್ತಿದೆ? ಉತ್ತಮ ಸಮುದಾಯ ಎಂದು ಪವಿತ್ರ ಖುರ್‌ಆನಿನಲ್ಲಿ ವರ್ಣಿಸಿರುವ ಮುಸ್ಲಿಂ ಸಮುದಾಯ ಇಂದು ದುಃಖದ ಹಾಗೂ ದುರಿತಗಳ ಭಯಾನಕವಾದ ದಿನಗಳನ್ನು ಅಭೀಮುಖೀಕರಿಸುತ್ತಲಿದೆ. ಮಹಾನಾದ ಪ್ರವಾದಿ ಹ! ಮುಹಮ್ಮದ್ ಮುಸ್ತಫಾ(ಸ) ಮಾನವ ಕುಲಕ್ಕೆ ಅಭಿಮಾನದಿಂದ ಸಮರ್ಪಿಸಿದ ದೀನುಲ್ ಇಸ್ಲಾಂ ಇಂದು ಲೋಕ ಚರಿತ್ರೆಯಲ್ಲಿ ಬೇರೊಂದು ಮತ ಸಮೂಹವೂ ಅನುಭವಿಸಿಲ್ಲದಂತಹ ಅಕ್ರಮ ಗಳಿಗೂ ದೌರ್ಜನ್ಯಗಳಿಗೂ ಗುರಿಯಾಗಿರು ವುದು. ಒಂದೆಡೆ ಇತರ ಶಕ್ತಿಗಳ ಕ್ರೂರಕೃತ್ಯ ಗಳನ್ನು ಅನುಭವಿಸುವಾಗ ಇನ್ನೊಂದೆಡೆ ಪರಿಪಾವನವಾದ ಇಸ್ಲಾಮಿನ ಅನುಯಾಯಿ ಗಳೆಂದೋ ಮಹಾನಾದ ಪ್ರವಾದಿ ಮುಹಮ್ಮದ್ ಮುಸ್ತಫಾರ(ಸ) ಉಮ್ಮತಿ ಗಳೆಂದೋ ಪವಿತ್ರ ಖುರ್‌ಆನನ್ನು ಮೈಗೂಡಿಸಿ ಕೊಂಡಿರುವ ಸತ್ಯವಿಶ್ವಾಸಿಗಳೆಂದೋ ಅಭಿಮಾನಗೊಳ್ಳಲು ಅರ್ಹತೆ ಇಲ್ಲದ ಪರಿಸ್ಥಿತಿಯಲ್ಲಿ ವಿಶ್ವಾಸವನ್ನು ಕೇವಲ ತುಟಿ ಗಳಲ್ಲಿ ಮಾತ್ರ ಉಳಿಸಿಕೊಂಡು ಆರಾಧನಾ ಕರ್ಮದಲ್ಲಿ ಅಶ್ರದ್ಧರೂ ಉದಾಸೀನರೂ ಆಗಿ ಸ್ವಾರ್ಥ ಉದ್ದೇಶಗಳಿಗೆ ಪರಿಶ್ರಮಿಸುವವರಾಗಿ ರೂಪುಗೊಂಡಿರುತ್ತಾರೆ. ಮುಸ್ಲಿಂ ಸಮುದಾಯದ ಈ ಪರಿತಾಪಕರ ಸ್ಥಿತಿ ಕೇವಲ ಯಾವುದಾದರೂ ಪಂಗಡದ ವರದ್ರೋ ಯಾವುದಾದರೂ ರಾಜ್ಯದ್ರೋ ಸಮಸ್ಯೆ ಅಲ್ಲ. ನೂರು ಕೋಟಿಗೂ ಮಿಗಿಲಾದ ಮುಸ್ಲಿಂ ಲೋಕದ ಸ್ಥಿತಿ ಇದಾಗಿದೆ. ಇದಕ್ಕೆಲ್ಲಾ ಕಾರಣ ವೇನು? ಇಂದಿನ ಮುಸ್ಲಿಮರೆಂದು ಹೇಳಿ ಕೊಳ್ಳುವವರು ಅಲ್ಲಾಹುವಿನ ಪವಿತ್ರ ಖುರ್‌ಆನನ್ನು ಕೈ ಬಿಟ್ಟಿರುವರು ಎಂಬು ದಾಗಿದೆ ಸತ್ಯ.

ಹ! ಮುಹಮ್ಮದ್ ಮುಸ್ತಫಾ(ಸ) ಈ ರೀತಿ ಹೇಳಿದರು: ಒಂದು ಕಾಲವು ಬರಲಿದೆ. ಆ ಕಾಲದಲ್ಲಿ ಖುರ್‌ಆನಿನ ಲಿಪಿ ಹಾಗೂ ಇಸ್ಲಾಮಿನ ಹೆಸರು ಮಾತ್ರ ಬಾಕಿ ಉಳಿಯುವುದು. ಅವರ ಆಲಿಮ್‌ಗಳು ಆಕಾಶದಡಿಯಲ್ಲಿ ಅತಿ ನಿಕೃಷ್ಟರಾಗುವರು. ಈ ಮಾತನ್ನು ಹೇಳಿದ್ದು ತನ್ನ ಉತ್ತಮ ಶಿಷ್ಯರೊಂದಿಗೆಯಾಗಿದೆ. ಪಾವನವಾದ ಇಸ್ಲಾಂ ದೀನಿಗಾಗಿ ತಮ್ಮ ಸ್ಥಾನ, ಮಾನ, ಧನ, ಜೀವವನ್ನೇ ಮುಡಿಪಾಗಿಟ್ಟಂತಹ ಉತ್ತಮ ಶಿಷ್ಯರನ್ನು ನೋಡಿ ಹೇಳಿದಂತಹ ಮಾತಾಗಿತ್ತು ಇದು. ನಶಿಸಿಹೋಗುತ್ತಿರುವ ಮುಸ್ಲಿಂ ಸಮೂಹವನ್ನು ನೋಡಿ ಆಡಿದ ಮಾತಲ್ಲ ಇದು. ಆಗ ಒಬ್ಬ ಸಹಾಬಿವರ್ಯರು ಕೇಳಿದರು: ಓ ಪೈಗಂಬರರೇ, ಅದು ಹೇಗೆ ಸಾಧ್ಯ? ನಾವೀಗ ಪವಿತ್ರ ಖುರ್‌ಆನ್ ಕಲಿತಿರುವೆವು. ಅದನ್ನು ನಾವು ನಮ್ಮ ಮಕ್ಕಳಿಗೂ ಕಲಿಸುವೆವು. ಅವರು ಅವರ ಮಕ್ಕಳಿಗೂ ಕಲಿಸುವರು. ಹೀಗೆ ಇದು ಪರಂಪರೆಯಾಗಿ ಜಾರಿಯಲ್ಲಿರುವಾಗ ತಾವು ಹೇಳಿದ ಹಾಗೆ ಸಂಭವಿಸುವುದಾದರೂ ಹೇಗೆ? ಪೈಗಂಬರ್(ಸ) ಮುಗುಳ್ನಗೆ ಬೀರಿ ಈ ರೀತಿ ಹೇಳಿದರು: ನಿಮಗೆ ಇಷ್ಟು ಬುದ್ಧಿ ಇಲ್ಲವೆಂದು ನಾನು ಭಾವಿಸಿರಲಿಲ್ಲ. ಹಾಗಾದರೆ ಈ ಯಹೂದಿ ನಸಾರಾಗಳು ತೌರಾತ್ ಮತ್ತು ಇಂಜೀಲ್‌ಗಳನ್ನು ಪಾರಾಯಣ ಮಾಡದವರಲ್ಲವಲ್ಲಾ. ಅವರು ಅವರ ಪ್ರಮಾಣ ಗ್ರಂಥವನ್ನು ಕೈ ಬಿಟ್ಟರು. ಆದ್ದರಿಂದ ಅವರು ಅಲ್ಲಾಹನ ಶಾಪಕ್ಕೆ ಗುರಿಯಾದರು.

ಪೈಗಂಬರರ(ಸ) ಈ ನುಡಿಮುತ್ತು ಇಂದಿನ ಮುಸ್ಲಿಮರಲ್ಲಿ ಸಂಪೂರ್ಣವಾಗಿ ಈಡೇರಿದೆ. ಅದರಿಂದಾಗಿ ಇಂದಿನ ಮುಸ್ಲಿಮರೆಂದು ಹೇಳಿ ಕೊಳ್ಳುವವರು ಖಿಲಾಫತ್ ಎಂಬ ಅನುಗ್ರಹ ದಿಂದ ವಂಚಿತರಾಗಿ ನಾಶದ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಲಿದ್ದಾರೆ. ಇವರು ಪವಿತ್ರ ಖುರ್‌ಆನಿನ ಆಜ್ಞೆಯನ್ನು ಮೂಲೆಗೆ ತಳ್ಳಿದರು. ಅಲ್ಲಾಹನು ಮಾನವರಿಗೆ ಅನುಗ್ರಹವಾಗಿ ಕಳುಹಿಸಿದಂತಹ ಸಂದೇಶವಾಹಕರನ್ನು ಧಿಕ್ಕರಿಸಿದರು. ಯಾರೊಡನೆ ಸ್ನೇಹ ಬೆಳೆಸಬೇಕು, ಯಾರೊಡನೆ ಸ್ನೇಹ ಬೆಳೆಸಬಾರದು. ಯಾರನ್ನು ಮಿತ್ರರನ್ನಾಗಿ ಮಾಡಬೇಕು. ಯಾರನ್ನು ಮಿತ್ರರನ್ನಾಗಿ ಮಾಡಬಾರದು ಎಂಬ ಪವಿತ್ರ ಖುರ್‌ಆನಿನ ವ್ಯಕ್ತವಾದ ಆಜ್ಞೆಯನ್ನು ಇವರು ಉಲ್ಲಂಘಿಸಿದರು. ಹ! ಮುಹಮ್ಮದ್ ಮುಸ್ತಫಾರ(ಸ) ನುಡಿಮುತ್ತುಗಳಿಗೆ ಅನ್ಯತಾ ವ್ಯಾಖ್ಯಾನ ನೀಡಿದರು. ಪವಿತ್ರ ಖುರ್‌ಆನಿನ ನಿಬಂಧನೆಗಳಿಗೆ ವಿರುದ್ಧವಾದ ದಾರಿಯಲ್ಲಿ ಮುನ್ನಡೆದರು. ಈ ಕಾರಣದಿಂದಾಗಿ ಇಂದಿನ ಮುಸ್ಲಿಮರು ದುಃಖದ ಹಾಗೂ ದುರಿತದ ರುಚಿಯನ್ನು ಅನುಭವಿಸುತ್ತಲಿರುವರು.

ಇಂತಹ ಒಂದು ಕಾಲವೂ ಬರಲಿದೆ, ಆ ಕಾಲದಲ್ಲಿ ಅಲ್ಲಾಹನು ತನ್ನ ಕಡೆಯಿಂದ ಒಬ್ಬ ಸಂದೇಶವಾಹಕನನ್ನು ಮಾನವರಿಗೆ ಅನುಗ್ರಹ ವಾಗಿ ಕಳುಹಿಸಿಕೊಡುವನೆಂದು ಪವಿತ್ರ ಖುರ್‌ಆನ್ ಮತ್ತು ಹ! ಮುಹಮ್ಮದ್ ಪೈಗಂಬರ್(ಸ) ತುಂಬಾ ವ್ಯಕ್ತವಾದ ಭಾಷೆ ಯಲ್ಲಿ ತಿಳಿಸಿದ ಪ್ರಕಾರ ಹದಿನಾಲ್ಕನೇ ಶತಮಾನದ ಮುಜದ್ದಿದಾಗಿ ಹ! ಮಿರ್ಝಾ ಗುಲಾಂ ಅಹ್ಮದ್‌ರನ್ನು(ಅ) ಅಲ್ಲಾಹು ಕಳುಹಿಸಿ ಕೊಟ್ಟನು. ಆ ಪುಣ್ಯಾತ್ಮರ ಆಗಮನದ ಕಾಲ, ಇಸ್ಲಾಂ ದೀನ್ ಅಧಃಪತನದಲ್ಲಿ ತೊಡಗಿ ಮುಸ್ಲಿಮರು ಒಬ್ಬ ಮಹಾಪುರುಷನ ಆಗಮನವನ್ನು ಕಾಯುತ್ತಲಿದ್ದ ಕಾಲವಾಗಿತ್ತು.

ಅನೇಕ ಮಹಾ ಪಂಡಿತರುಗಳು ತಮ್ಮ ಜ್ಞಾನದ ಆಧಾರದಲ್ಲಿ ಈ ರೀತಿ ಹೇಳಿದ್ದರು. ಹ। ಮುಹಮ್ಮದ್ ಮುಸ್ತಫ(ಸ) ಪ್ರವಾದನ ಮಾಡಿದ ಪ್ರಕಾರ ಮಹ್‌ದಿ ಬರಬೇಕಾದ ಎಲ್ಲಾ ಚಿಹ್ನೆಗಳು ಗೋಚರಿಸುತ್ತಾ ಬಂದಿವೆ. ಇನ್ನು ಅಲ್ಪ ಕಾಲದಲ್ಲಿಯೇ ಮಹ್‌ದಿ ಇಮಾಮರ ಆವಿರ್ಭಾವ ಉಂಟಾಗಲಿದೆ. ಹೀಗೆ ಅವರು ತಮ್ಮ ಗ್ರಂಥಗಳಲ್ಲಿ ಬರೆದರು.

ಪವಿತ್ರ ಖುರ್‌ಆನ್ ಈ ರೀತಿ ಹೇಳಿದೆ: "ಅಲ್ಲಾಹನನ್ನೂ ಅವನಿಂದ ಅವತೀರ್ಣವಾದ ಸತ್ಯವನ್ನೂ ಸ್ಮರಿಸಿ ತಮ್ಮ ಹೃದಯಗಳು ಭಯವಿಹ್ವಲಗೊಳ್ಳಲಿಕ್ಕೂ ಮುಂಚೆ ಗ್ರಂಥ ನೀಡಲ್ಪಟ್ಟವರು ದೀರ್ಘ ಕಾಲಾವಧಿಯ ಬಳಿಕ ಅವರ ಹೃದಯಗಳು ಕಠೋರವಾಗಿ ಅವರಲ್ಲಿ ಹೆಚ್ಚಿನವರು ಆಜ್ಞೋಲ್ಲಂಘಕರಾದಂತೆ ಆಗದಿರಲಿಕ್ಕೂ ಸತ್ಯವಿಶ್ವಾಸಿಗಳಿಗೆ ಇನ್ನೂ ಸಮಯವಾಗಿಲ್ಲವೇ?" (57:17)

ಮುಂಚೆ ಗ್ರಂಥ ನೀಡಲ್ಪಟ್ಟವರು ಕಠಿಣ ಹೃದಯದವರಾಗಿ ವೇದ ಪಾಠಗಳಿಂದ ದಾರಿ ತಪ್ಪಿ ಆಜ್ಞೋಲ್ಲಂಘಕರಾದಂತೆ ಮುಸ್ಲಿಂ ಸಮುದಾಯದ ಬಹು ಸಂಖ್ಯಾತ ಜನರು ನಾಮಧಾರಿ ಮುಸ್ಲಿಮರಾಗುವರು. ಖುರ್‌ಆನಿನ ನಿಜವಾದ ಪಾಠಗಳು ಅವರಿಂದ ಎತ್ತಲ್ಪಡುವುದು. ಅವರ ಮಸೀದಿಗಳು ಭಕ್ತಿ ಶೂನ್ಯವಾದ ನಮಾಝ್ ಮಾಡುವವರ ಸ್ಥಳವಾಗಿ ಮಾರ್ಪಡುವುದು. ಅವರ ಪಂಡಿತ ವರ್ಗವು ದುಸ್ಥಿತಿಯಲ್ಲಿರುವುದು. ಎಲ್ಲಾ ಕಲಹಗಳಿಗೂ ಕಾರಣಕರ್ತರು ಅವರಾಗುವರು. ಇಸ್ರಾಯೇಲ್ ಸಮುದಾಯದ ಯಹೂದ್ಯರಲ್ಲೂ ಕ್ರೈಸ್ತರಲ್ಲೂ ಸಂಭವಿಸಿರುವುದೆಲ್ಲಾ ಮುಸಲ್ಮಾನರಲ್ಲೂ ಸಂಭವಿಸುವುದು. ಮುಸ್ಲಿಮರು ಪಂಗಡ ಪಂಗಡಗಳಾಗಿ ಹರಿದು, ದುರ್ಬಲರಾಗಿ ಹೋಗುವರು.

ಹ। ಮುಹಮ್ಮದ್ ಪೈಗಂಬರರೂ(ಸ) ಅವರ ಸಹಾಬಿಗಳೂ ಜೀವಿಸಿದ ರೀತಿ ಜೀವಿಸುವ ವಿಭಾಗ ಹೊರತುಪಡಿಸಿ ಬೇರೆಲ್ಲಾ ವಿಭಾಗಗಳೂ ನರಕವಾಸಿಗಳಾಗುತ್ತಾರೆ. ಮುಸ್ಲಿಮರಿಂದ ಅಗಲಿಹೋದ, ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಅಲ್ಲಾಹು ಮರುಸ್ಥಾಪಿಸುವನು.

ಮೇಲೆ ವಿವರಿಸಿದ ಲಕ್ಷಣಗಳೆಲ್ಲಾ ಇಂದು ಮುಸ್ಲಿಂ ಸಮುದಾಯದಲ್ಲಿ ಈಡೇರಿವೆ ಎಂಬ ಸತ್ಯ ಎಲ್ಲಾ ಮುಸ್ಲಿಂ ಸಂಘಟನೆಗಳು ಒಪ್ಪುತ್ತವೆ. ಇಸ್ಲಾಂ ಧರ್ಮ ಇಂದು ಅತ್ಯಂತ ಶೋಚನೀಯಾವಸ್ಥೆಗ ತಲುಪಿದೆ ಎಂದು ರೋದಿಸದ ಒಂದು ಮುಸ್ಲಿಂ ಸಘಟನೆಯೂ ಭೂಮುಖದಲ್ಲಿಲ್ಲ. ಇಸ್ಲಾಮಿನ ಹೆಸರಿನಲ್ಲಿ ಸಂಘಟಿತವಾದ ಒಂದೊಂದು ವಿಭಾಗವೂ ಈ ಶೋಚನೀಯಾವಸ್ಥೆಯ ಪ್ರತ್ಯೇಕ ಉದಾಹರಣೆಗಳಾಗಿವೆ. ಇಸ್ಲಾಮನ್ನು ಅಧಃಪತನದಿಂದ ರಕ್ಷಿಸಲು ನಮ್ಮೊಂದಿಗೆ ಸೇರಿರಿ ಎಂದಲ್ಲವೇ ಒಂದೊಂದು ಸಂಘಟನೆಯೂ ಆಹ್ವಾನ ಮಾಡುತ್ತಿರುವುದು.

ಕಾಲಾನಂತರದಲ್ಲಿ ತಮ್ಮ ಸಮುದಾಯ ಅಭಿಮುಖೀಕರಿಸಲಿರುವ ಶೋಚನೀಯಾವಸ್ಥೆಯನ್ನು ವಿವರಿಸಿದರೊಂದಿಗೆ ಹ। ಮುಹಮ್ಮದ್ ಮುಸ್ತಫರು(ಸ) ಸ್ವರ್ಗಕ್ಕೆ ಅರ್ಹವಾದ ಒಂದು ವಿಭಾಗದ ಲಕ್ಷಣವನ್ನೂ ವಿವರಿಸಿರುವುದು ಗಮನಾರ್ಹವಾಗಿದೆ. ನಾನು ಮತ್ತು ನನ್ನ ಸಹಾಬಿಗಳು ನಡೆಯುವ ಹಾಗೆ, ನಡೆಯುವವರು ಎಂದಾಗಿದೆ ಆ ಲಕ್ಷಣ. ಯಾವ ಸಂಘಟನೆಯಲ್ಲಿ ಈ ಲಕ್ಷಣಗಳು ಈಡೇರಿದಂತೆ ಕಾಣುವುದು ಆ ಸಂಘಟನೆಯಲ್ಲಿ ಸೇರಿದವರಿಗೆ ಮಾತ್ರ ತಾವು ಮೋಕ್ಷಾರ್ಹರು ಮತ್ತು ಅಹ್ಲು ಸುನ್ನತ್ ವಲ್ ಜಮಾಅತ್‌ಗೆ ಸೇರಿದವರೆಂದು ಹೇಳಲು ಅರ್ಹತೆ ಇರುವುದು. ನಾನು ಮತ್ತು ನನ್ನ ಸಹಾಬಿಗಳೂ ಇರುವ ರೀತಿ ಇರುವವರು ಎಂದಾಗಿದೆ ಹ। ಪೈಗಂಬರ್(ಸ) ಮೋಕ್ಷಾರ್ಹ ವಿಭಾಗದ ಕುರಿತು ವಿಶೇಷವಾಗಿ ಹೇಳಿರುವುದು.

ಹ। ಮುಹಮ್ಮದ್ ಪೈಗಂಬರರಿಗೂ(ಸ) ಸಹಾಬಿಗಳಿಗೂ ಇದ್ದ ವಿಶೇಷತೆ ಏನೆಂದರೆ ದೇವ ನಿಯುಕ್ತರಾದ ಒಬ್ಬ ನೇತಾರರೂ ಅವರನ್ನು ಪರಿಪೂರ್ಣವಾಗಿಯೂ ಅನುಸರಿಸುವ ಶಿಷ್ಯವೃಂದವೂ ಎಂಬುದಾಗಿತ್ತು. ಸಹಾಬಿಗಳು ಪೈಗಂಬರರನ್ನು ಪರಿಪೂರ್ಣವಾಗಿಯೂ ಅನುಸರಿಸುವುದರರೊಂದಿಗೆ ಅನುಸರಣಾ ಪ್ರತಿಜ್ಞೆ (ಬೈಅತ್) ಮಾಡಿದ ಒಂದು ಸಮೂಹವಾಗಿತ್ತು. ಇದೇ ಸಮೂಹ ದೀರ್ಘ ಕಾಲದ ನಂತರ ಪಂಗಡ ಪಂಗಡಗಳಾಗಿ ಅಗಲುವರೆಂದೂ ಆಗ ತಾನು ಮತ್ತು ತನ್ನ ಸಹಾಬಿಗಳು ಇರುವ ರೀತಿ ನಡೆಯುವ ಒಂದು ವಿಭಾಗ ರೂಪುಗೊಳ್ಳುವುದೆಂದೂ ಹ। ಮುಹಮ್ಮದ್ ಪೈಗಂಬರ್(ಸ) ನುಡಿದರು. ಇಂದು ಯಾವ ಪಂಗಡ ಹ। ಪೈಗಂಬರರು(ಸ) ಮುಂದಾಗಿ ನುಡಿದ ಮೋಕ್ಷಾರ್ಹವಾದ ಪಂಗಡವೆಂದು ಏನೂ ಪ್ರಯಾಸವಿಲ್ಲದೆ ಯಾರಿಗೂ ತಿಳಿಯಬಹುದಾಗಿದೆ. ಹ। ಪೈಗಂಬರರು(ಸ) ಹೇಳಿದ ಮಾನದಂಡ ಪ್ರಕಾರವಿರುವ ಪಂಗಡ ಮಾತ್ರವಾಗಿರುತ್ತದೆ ಸ್ವರ್ಗಕ್ಕೆ ಅರ್ಹವಾದ ಯಥಾರ್ಥ ಸುನ್ನತ್ ಜಮಾಅತ್ ಪಂಗಡ.

ನಾನು ಮತ್ತು ನನ್ನ ಸಹಾಬಿಗಳು ನಡೆದ ರೀತಿ ನಡೆಯುವವರು ಎಂಬ ವಿಶಿಷ್ಟ ಚಿಹ್ನೆ ನೀಡಿರುವ ಸ್ಥಿತಿಗೆ ಮೋಕ್ಷಾರ್ಹವಾದ ಪಂಗಡ ಪೈಗಂಬರರ(ಸ) ಪ್ರತಿನಿಧಿಯಾದ ಓರ್ವ ಮಹಾತ್ಮರ ನೇತೃತ್ವದಲ್ಲಿರಬೇಕಾಗಿದೆ. ಪೈಗಂಬರರ ಪ್ರತಿನಿಧಿತ್ವವನ್ನು ವಹಿಸುವ ಆ ಮಹಾತ್ಮರಿಗೆ ಸಹಾಬಿಗಳ ಹಾಗೆ ಅನುಸರಿಸಿ ಒಂದೇ ಜಮಾಅತಾಗಿ ಸಾಗುವ ಶಿಷ್ಯಗಣವಿರಬೇಕು. ಪೈಗಂಬರರೂ ಸಹಾಬಿಗಳೂ ನಡೆದ ಹಾಗೆ ಬೈಅತ್ ಪ್ರತಿಜ್ಞೆ ಮಾಡಿದ ಸಮೂಹವಾಗಿ ಪ್ರವರ್ತಿಸುವವರಾಗಿರಬೇಕು. ಅವರಲ್ಲಿ ಅಲ್ಲಾಹನ ಮಹತ್ತಾದ ಅನುಗ್ರಹವಾಗಿರುವ ಖಿಲಾಫತ್ ಇರಬೇಕಾಗಿದೆ. ಈ ಚಿಹ್ನೆ ಪರಿಪೂರ್ಣವಾಗಿಯೂ ಒಂದೇ ಸಂಘಟನೆಯಲ್ಲಿ ಮಾತ್ರ ಮುಸ್ಲಿಮರ ನಡುವೆ ಕಾಣಲು ಸಾಧ್ಯವಿರುವುದು. ಅದು ಅಹ್ಮದಿಯಾ ಮುಸ್ಲಿಂ ಜಮಾಅತ್ ಮಾತ್ರವಾಗಿದೆ. ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿರುವುದು ಹ। ಮುಹಮ್ಮದ್ ಮುಸ್ತಫರ(ಸ) ಪ್ರತಿಪುರುಷನಾದ ಮಹ್‌ದೀ ಇಮಾಂ ಹ। ಮಿರ್ಝಾ ಗುಲಾಂ ಅಹ್ಮದ್(ಅ) ಅವರ ಮುಖಾಂತರವಾಗಿದೆ. ಅವರಲ್ಲಿ ಬೈಅತ್ ಮಾಡಿದ ಅಹ್ಮದೀ ಮುಸ್ಲಿಮರು ಆ ಮಹಾನುಭಾವರ ಕಾಲನಂತರ ನುಬುವ್ವತಿನ ರೀತಿಯಲ್ಲಿರುವ ಖಲೀಫರ ಕೈಯಲ್ಲಿ ಬೈಅತ್ ಮಾಡಿಕೊಂಡು ಅಲ್ಲಾಹನ ಪ್ರೀತಿಗೆ ಪಾತ್ರರಾಗಿರುತ್ತಾರೆ. ಅವರಿಗೆ ಅಲ್ಲಾಹನ ಅನುಗ್ರಹವಾಗಿರುವ ಈ ಖಿಲಾಫತ್ ಅಡೆತಡೆಯಿಲ್ಲದೆ ಲಭಿಸುತ್ತಲಿದೆ. ಮುಂದೆಂದೂ ಲಭಿಸುತ್ತಾ ಇರುವುದು. (ಇನ್‌ಶಾಅ್ ಅಲ್ಲಾಹ್)

ಹ। ಮುಹಮ್ಮದ್ ಪೈಗಂಬರ್ ಈ ರೀತಿ ಹೇಳಿದರು:

ನೀವು ಮಹ್‌ದೀ ಇಮಾಮರು ಬಂದಿರುವರು ಎಂದು ತಿಳಿದರೆ, ಮಂಜುಗಡ್ಡೆಯ ಮೇಲೆ ತೆವಳಿಕೊಂಡಾದರೂ ಹೋಗಿ ಅವರಲ್ಲಿ ಬೈಅತ್ ಮಾಡಿರಿ. ಅವರನ್ನು ಅನುಸರಿಸುವವರು ನನ್ನನ್ನು ಅನುಸರಿಸುವರು. ಅವರನ್ನು ಧಿಕ್ಕರಿಸುವವರು ನನ್ನನ್ನು ಧಿಕ್ಕರಿಸುವರು. (ಇಬ್ನುಮಾಜ)

ವಾಗ್ದತ್ತ ಮಹ್‌ದೀ ಮಸೀಹ್ ಹ। ಅಹ್ಮದ್(ಅ) ಹೇಳುತ್ತಾರೆ: ನನ್ನನ್ನು ನಿರಾಕರಿಸುವವನು, ನನ್ನನ್ನು ಕಳಿಸಿರುವವನನ್ನು ನಿರಾಕರಿಸಿದ ಹಾಗೆ. ನನ್ನೊಡನೆ ಸ್ನೇಹ ಬೆಳೆಸುವವನು ನಾನು ಯಾರ ಸನ್ನಿಧಿಯಿಂದ ಬಂದೆನೋ ಅವನೊಡನೆ ಸ್ನೇಹ ಬೆಳೆಸುವನು. ನನ್ನ ಕೈಯಲ್ಲಿ ಒಂದು ಪ್ರಕಾಶ (ಜ್ಯೋತಿ) ಇದೆ. ನನ್ನ ಸನಿಹಕೆ ಬರುವವರಿಗೆ ಆ ಪ್ರಕಾಶದಲ್ಲಿ ಖಂಡಿತವಾಗಿಯೂ ಪಾಲು ಇದೆ. ಆದರೆ ಸಂಶಯದ ಭಾವನೆಯ ಕಾರಣ ಯಾರು ದೂರ ಓಡಿ ಹೋಗುವರೋ ಅವರು ಅಂಧಕಾರದೆಡೆಗೆ ಎಸೆಯಲ್ಪಡುವರು. (ಫತ್‌ಹೆ ಇಸ್ಲಾಂ)

★

## ಓದಿದ್ದು

### ತಸ್ಲೀರ್ ಅಂತ್ಯಕ್ರಿಯೆ ನೇತೃತ್ವ : ಇಮಾಮರ ನಕಾರ

**ಇಸ್ಲಾಮಾಬಾದ್:** ಧರ್ಮ ನಿಂದನೆ ಕಾನೂನನ್ನು ವಿರೋಧಿಸಿದ ಕಾರಣಕ್ಕೆ ತನ್ನ ಅಂಗರಕ್ಷಕನಿಂದ ಹತ್ಯೆಗೀಡಾದ ಪಂಜಾಬ್ ಗವರ್ನರ್ ಸಲ್ಮಾನ್ ತಸ್ಲೀರ್ ಅವರ ಅಂತ್ಯಸಂಸ್ಕಾರದ ನೇತೃತ್ವ ವಹಿಸಲು ಲಾಹೋರ್‌ನ ಪ್ರಮುಖ ಇಮಾಮರು ನಿರಾಕರಿಸಿದ್ದಾರೆ.

ಹತ್ಯೆಗೀಡಾದ ಗವರ್ನರ್ ಸಲ್ಮಾನ್ ತಸ್ಲೀರ್ ಅವರ ಅಂತ್ಯಸಂಸ್ಕಾರದ ವಿಧಿಯಲ್ಲಿ ಪಾಲ್ಗೊಳ್ಳಬಾರದು ಹಾಗೂ ಅದರ ನೇತೃತ್ವ ವಹಿಸಬಾರದು ಎಂದು ಮುಸ್ಲಿಮರಿಗೆ 500ಕ್ಕೂ ಹೆಚ್ಚು ಮತಪಂಡಿತರನ್ನು ಹೊಂದಿರುವ ಜಮಾತ್-ಎ-ಅಹ್ಲ್-ಎ-ಸುನ್ನತ್ ಸಲಹೆ ನೀಡಿದೆ. ಧರ್ಮನಿಂದನೆ ಕಾನೂನಿಗೆ ವಿರೋಧ ವ್ಯಕ್ತಪಡಿಸಿರುವ ತಸ್ಲೀರ್ ಹತ್ಯೆಗೆ ಅನುಕಂಪ ಸೂಚಿಸುವ ವ್ಯಕ್ತಿಯನ್ನು ಸಹ ಧರ್ಮ ವಿರೋಧಿ ಎಂದು ಪರಿಗಣಿಸುವುದಾಗಿ ಅದು ಹೇಳಿದೆ.

ಸಂಘಟನೆಯ ಬಹಿರಂಗ ಎಚ್ಚರಿಕೆ ಹಿನ್ನೆಲೆಯಲ್ಲಿ ಲಾಹೋರ್‌ನ ಬಾದ್‌ಶಾಹಿ ಮಸೀದಿಯ ಪ್ರಧಾನ ಧರ್ಮ ಗುರು ಸೇರಿದಂತೆ ಬಹುತೇಕ ಇಮಾಮರು ತಸ್ಲೀರ್ ಅಂತ್ಯ ಸಂಸ್ಕಾರದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ.

ಕೊನೆಯಲ್ಲಿ ಪಾಕಿಸ್ಥಾನ್ ಪೀಪಲ್ಸ್ ಪಾರ್ಟಿಯ ಪಂಜಾಬ್ ಶಾಖೆಯ ಉಲೇಮಾ ಘಟಕದ ಪ್ರಧಾನ ಕಾರ್ಯದರ್ಶಿ ಅಲ್ಲಮಾ ಅಫ್ಜಲ್ ಚಿಸ್ತಿ ಅವರು ತಸ್ಲೀರ್ ಅಂತಿಮವಿಧಿಯನ್ನು ನೆರವೇರಿಸಿದರು. ಮತೀಯ ಸಂಘಟನೆಗಳ ಬೆದರಿಕೆ ನಡುವೆ ತಸ್ಲೀರ್ ಅಂತ್ಯಸಂಸ್ಕಾರದಲ್ಲಿ ಪ್ರಧಾನಿ ಯೂಸುಫ್ ರಜಾ ಗೀಲಾನಿ ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

#### ಹತ್ಯೆ ಆರೋಪಿಗೆ ಪುಷ್ಪವೃಷ್ಟಿ

**ಇಸ್ಲಾಮಾಬಾದ್ :** ಪಂಜಾಬ್ ಪ್ರಾಂತದ ಗವರ್ನರ್ ತಸ್ಲೀರ್ ಅವರನ್ನು ಹತ್ಯೆಗೈದ ಆರೋಪಿಯನ್ನು ಗುರುವಾರ ವಿಚಾರಣೆ ಸಲುವಾಗಿ ಕೋರ್ಟ್‌ಗೆ ಹಾಜರುಪಡಿಸಿದ ಸಂದರ್ಭ ವಕೀಲರು ಹಾಗೂ ಸಾರ್ವಜನಿಕರು ಆತನಿಗೆ ಗುಲಾಬಿ ಪಕಳೆಗಳ ವೃಷ್ಟಿಗೈದರು.

ಖಾದ್ರಿಯನ್ನು ಗುರುವಾರ ವಿಚಾರಣೆ ಸಲುವಾಗಿ ಕೋರ್ಟ್‌ಗೆ ಹಾಜರುಪಡಿಸಲಾಯಿತು. ಈ ಸಂದರ್ಭ ತನ್ನ ಕೃತ್ಯದ ಬಗ್ಗೆ ಯಾವುದೇ ಪಶ್ಚಾತ್ತಾಪ ಭಾವನೆ ವ್ಯಕ್ತಪಡಿಸದ ಖಾದ್ರಿಗೆ, ಕೋರ್ಟ್ ಆವರಣದಲ್ಲಿ ಆತನಿಗಾಗಿ ಕಾದು ನಿಂತಿದ್ದ ವಕೀಲರು ಹಾಗೂ ಸಾರ್ವಜನಿಕರು ಗುಲಾಬಿ ಪಕಳೆಗಳ ವೃಷ್ಟಿಗರೆದರು. ಬಿಗಿ ಭದ್ರತೆಯ ನಡುವೆಯೂ ಆತನ ಬೆನ್ನು ತಟ್ಟಿದ ವಕೀಲರು ಹಾಗೂ ಅಭಿಮಾನಿಗಳು ಕೆನ್ನೆಗೆ ಮುತ್ತಿಕ್ಕುವ ಮೂಲಕ ತಸ್ಲೀರ್ ಹತ್ಯೆಗೆ ಪರೋಕ್ಷ ಬೆಂಬಲ ವ್ಯಕ್ತಪಡಿಸಿದರು.

("ಉದಯವಾಣಿ", ದೈನಿಕ - 7 ಜನವರಿ 2011)

### ಪಾಕ್ : ಶೆರ್ರಿ ಹತ್ಯೆಗೆ ಫತ್ವಾ

**ಕರಾಚಿ :** ಪಂಜಾಬ್ ಗವರ್ನರ್ ಸಲ್ಮಾನ್ ತಸ್ಲೀರ್ ಹತ್ಯೆ ಬೆನ್ನಲ್ಲಿಯೇ ಧರ್ಮನಿಂದನೆ ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಆಗ್ರಹಿಸಿರುವ ಸಂಸದೆ ಹಾಗೂ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ನಾಯಕಿ ಶೆರ್ರಿ ರೆಹಮಾನ್ ಅವರನ್ನು ಮುಸ್ಲಿಂ ವಿರೋಧಿ ಎಂದು ಘೋಷಿಸಿರುವ ಮತೀಯ ಸಂಘಟನೆ ಆಕೆಗೆ ಗಲ್ಲು ಶಿಕ್ಷೆ ನೀಡುವಂತೆ ಆಗ್ರಹಿಸಿದೆ.

ಪಾಕಿಸ್ತಾನದ ವಿವಾದಾತ್ಮಕ ಧರ್ಮ ನಿಂದನೆ ಕಾಯ್ದೆಗೆ ತಿದ್ದುಪಡಿ ಬಯಸಿ 2010ರ ನವೆಂಬರ್‌ನಲ್ಲಿ ರಾಷ್ಟ್ರೀಯ ಶಾಸನಸಭೆಯ ಕಾರ್ಯದರ್ಶಿಗೆ ಶೆರ್ರಿರೆಹಮಾನ್ ಖಾಸಗಿ ಮಸೂದೆಯನ್ನು ಮಂಡಿಸಿದ್ದಾರೆ.

("ಉದಯವಾಣಿ" – 10 ಜನವರಿ 2011)

### ದಾಡಿಗೆ ಕತ್ತರಿ; ಅಮಾನತು

**ಢಾಕಾ :** ದಾಡಿ ಕತ್ತರಿಸಿಕೊಂಡು ಬಂದ 15 ವಿದ್ಯಾರ್ಥಿಗಳಿಗೆ ತರಗತಿಗೆ ಹಾಜರಾಗದಂತೆ ನಿರ್ಬಂಧ ವಿಧಿಸಲಾಗಿದೆ ಎಂದು ಬಾಂಗ್ಲಾ ದೇಶದ ಇಸ್ಲಾಮಿಕ್ ಶಾಲೆಯ ಮುಖ್ಯ ಶಿಕ್ಷಕರು ಹೇಳಿದ್ದಾರೆ.

ಎರಡು ಇಂಚುಗಳಷ್ಟು ಉದ್ದಕ್ಕೆ ದಾಡಿ ಬೆಳೆಸಿಕೊಂಡು ಬಂದಲ್ಲಿ ಮಾತ್ರವೇ ತರಗತಿಗೆ ಹಾಜರಾಗಲು ಅವಕಾಶ ನೀಡುವುದಾಗಿ ಈ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ ಎಂದು ಢಾಕಾದ ತಫೀಜುಲ್ ಖುರಾನುಲ್ ಕರೀಮ್ ಫಾಜಿಲ್ ಮದ್ರಸದ ಮುಖ್ಯ ಶಿಕ್ಷಕ ಮೊಹಮ್ಮದ್ ಮುದಸ್ಸರ್ ಹುಸೇನ್ ಹೇಳಿದ್ದಾರೆ.

ವಿದ್ಯಾರ್ಥಿಗಳು ಗಡ್ಡ ಕತ್ತರಿಸಿಕೊಳ್ಳುವ ಮೂಲಕ ಮದ್ರಸದ ಸಮವಸ್ತ್ರ ನಿಯಮವನ್ನು ಉಲ್ಲಂಘಿಸಿದ್ದು, ಶಾಲಾ ನಿಯಮದಂತೆ ಅವರ ಗಡ್ಡ ಎರಡು ಇಂಚು ಬೆಳೆಯುವ ತನಕ ತರಗತಿಗೆ ಹಾಜರಾಗದಂತೆ ನಿರ್ಬಂಧ ವಿಧಿಸಲಾಗಿದೆ ಎಂಬುದನ್ನು ವಿದ್ಯಾರ್ಥಿಗಳ ಹೆತ್ತವರ ಗಮನಕ್ಕೂ ತರಲಾಗಿದೆ ಎಂದು ಅವರು ಹೇಳಿದ್ದಾರೆ.

("ಉದಯವಾಣಿ" – 10 ಜನವರಿ 2011)

**ಓದಿದ್ದು**

## ಧರ್ಮನಿಂದೆ ಕಾನೂನು ರದ್ದತಿಗೆ ಪೋಪ್ ಆಗ್ರಹ

**ವ್ಯಾಟಿಕನ್ ಸಿಟಿ :** ಪಂಜಾಬ್ ಗವರ್ನರ್ ಸಲ್ಮಾನ್ ತಸ್ಸೀರ್ ಅವರ ಹತ್ಯೆ ಹಿನ್ನೆಲೆಯಲ್ಲಿ ಧರ್ಮನಿಂದೆ ಕಾನೂನನ್ನು ರದ್ದುಗೊಳಿಸುವಂತೆ ಪೋಪ್ 16ನೇ ಬೆನೆಡಿಕ್ಟ್ ಪಾಕಿಸ್ಥಾನಕ್ಕೆ ಕರೆ ನೀಡಿದ್ದಾರೆ ಹಾಗೂ ಈ ಕಾನೂನು ಅನ್ಯಾಯಕ್ಕೆ ಒಂದು ನೆವ ಎಂದಿದ್ದಾರೆ.

ಈ ಕಾನೂನು ರದ್ದುಗೊಳಿಸಲು ಅವಶ್ಯ ಕ್ರಮ ಕೈಗೊಳ್ಳಲು ಆ ದೇಶದ ನಾಯಕರಿಗೆ ತಾನು ಇನ್ನೊಮ್ಮೆ ಆಗ್ರಹಿಸುತ್ತೇನೆ. ಈ ನಿಟ್ಟಿನಲ್ಲಿ ಪ್ರಗತಿ ಸಾಧಿಸುವ ತ್ವರಿತ ಅಗತ್ಯ ಇರುವುದನ್ನು ಪಂಜಾಬ್ ಗವರ್ನರ್ ಅವರ ಹತ್ಯೆ ಸೂಚಿಸುತ್ತದೆ ಎಂದು ಪೋಪ್ ಅಭಿಪ್ರಾಯಪಟ್ಟಿದ್ದಾರೆ.

**(ಉದಯವಾಣಿ 11 ಜನವರಿ 2011)**

## ತಸ್ಸೀರ್ ಹಂತಕ ತಪ್ಪೊಪ್ಪಿಗೆ

**ಇಸ್ಲಾಮಾಬಾದ್ :** ಪಂಜಾಬ್ ಗವರ್ನರ್ ಸಲ್ಮಾನ್ ತಸ್ಸೀರ್ ಅವರನ್ನು ಹತ್ಯೆಗೈದ ಮುಮ್ತಾಜ್ ಖಾದ್ರಿ ಪಾಕಿಸ್ಥಾನದ ನ್ಯಾಯಾಲಯವೊಂದರಲ್ಲಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ ಹಾಗೂ ತಸ್ಸೀರ್ ಅವರ ಹತ್ಯೆಯನ್ನು ತಾನೊಬ್ಬನೇ ನಡೆಸಿದ್ದಾಗಿ ಹೇಳಿದ್ದಾನೆ.

ರಾವಲ್ಪಿಂಡಿಯಲ್ಲಿ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡ ಬಳಿಕ ತಸ್ಸೀರ್ ಅವರನ್ನು ತಾನು ಹತ್ಯೆಗೈದೆ. ತಸ್ಸೀರ್ ಧರ್ಮನಿಂದೆ ಮಾಡುತ್ತಿರುವರೆಂದು ಸಭೆಯಲ್ಲಿ ಮಾತನಾಡಿದ ಭಾಷಣಕಾರರು ಆರೋಪಿಸಿದ ಬಳಿಕ ಅವರನ್ನು ಕೊಲ್ಲಲು ನಿರ್ಧರಿಸಿದೆ ಎಂದು ತಸ್ಸೀರ್ ಅವರ ಅಂಗರಕ್ಷಕ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಖಾದ್ರಿ ನ್ಯಾಯಾಲಯಕ್ಕೆ ತಿಳಿಸಿದನು.

**("ಉದಯವಾಣಿ" – 11 ಜನವರಿ 2011)**

## ಉಗ್ರರ ಜತೆ ಜರ್ದಾರಿ

**ಇಸ್ಲಾಮಾಬಾದ್ :** ಪಾಕಿಸ್ತಾನದ ಅಧ್ಯಕ್ಷ ಅಸೀಫ್ ಅಲಿ ಜರ್ದಾರಿ ತಾಲಿಬಾನಿ ಉಗ್ರರ ಉನ್ನತಮಟ್ಟದ ತಂಡವನ್ನು ಕಳೆದ ವರ್ಷ ಎಪ್ರಿಲ್‌ನಲ್ಲಿ ರಹಸ್ಯವಾಗಿ ಭೇಟಿ ಮಾಡಿ, ಸರಕಾರದ ವತಿಯಿಂದ ಸಂಪೂರ್ಣ ನೆರವು ನೀಡುವುದಾಗಿ ಅಭಯ ನೀಡಿದ್ದ ವಿಷಯ ಇದೀಗ ಬಹಿರಂಗವಾಗಿದೆ.

ಅಫ್ಘಾನಿಸ್ತಾನದಲ್ಲಿನ ಬೆಳವಣಿಗೆಗಳ ಬಗ್ಗೆ ಅಧ್ಯಯನ ಮಾಡುತ್ತಿರುವ ಹಾರ್ವರ್ಡ್ ವಿವಿಯ ಮಾನವ ಹಕ್ಕುಗಳ ಯೋಜನಾ ಕೇಂದ್ರದ ಮ್ಯಾಟ್ ವಾಲ್ಡ್‌ಮನ್ ಎಂಬ ಸಂಶೋಧಕರೊಬ್ಬರು ತಮ್ಮ ವರದಿಯಲ್ಲಿ ಈ ವಿಷಯವನ್ನು ಉಲ್ಲೇಖಿಸಿದ್ದಾರೆ.

2010 ಏಪ್ರಿಲ್‌ನಲ್ಲಿ ರಹಸ್ಯ ಜೈಲಿನಲ್ಲಿ ನಡೆದ ಈ ಭೇಟಿಯನ್ನು ಅಫ್ಘಾನಿಸ್ತಾನದಲ್ಲಿ ಅಮೆರಿಕ ನಡೆಸುತ್ತಿರುವ ಸೇನಾ ಕಾರ್ಯಾಚರಣೆಯ ಉನ್ನತಾಧಿಕಾರಿಯೊಬ್ಬರು ತಮಗೆ ಖಚಿತಪಡಿಸಿದ್ದರು. ಪಾಕ್ ಐಎಸ್‌ಐನ ಆಣತಿ ಮೇರೆಗೆ ಈ ಭೇಟಿ ನಡೆದಿರುವುದಾಗಿ ತಿಳಿದು ಬಂದಿತು ಎಂದು ವರದಿಯಲ್ಲಿ ತಿಳಿಸಿದ್ದಾರೆ.

**(ವಿಜಯಕರ್ನಾಟಕ 19 ಜನವರಿ 2011)**

## 2030ಕ್ಕೆ ಭಾರತದಲ್ಲಿ ಮುಸ್ಲಿಮರ ಸಂಖ್ಯೆ ಶೇ. 1 ರಷ್ಟು ಹೆಚ್ಚಳ

**ವಾಷಿಂಗ್ಟನ್ :** ಮುಂದಿನ 20 ವರ್ಷಗಳಲ್ಲಿ ಭಾರತದ ಒಟ್ಟು ಜನಸಂಖ್ಯೆಯ ಶೇ. 16 ರಷ್ಟು ಮಂದಿ ಮುಸಿಮರಾಗಿರುತ್ತಾರೆ ಎಂದು ಅಧ್ಯಯನ ವರದಿ ತಿಳಿಸಿದೆ. ಪ್ರಸಕ್ತ ವರ್ಷಕ್ಕೆ ಹೋಲಿಸಿದರೆ, 2030ರ ವೇಳೆಗೆ ಭಾರತದಲ್ಲಿ ಮುಸ್ಲಿಮರ ಸಂಖ್ಯೆಯಲ್ಲಿ ಶೇ. 1 ರಷ್ಟು ಹೆಚ್ಚಳ ಕಂಡು ಬರಲಿದೆ. ಇದೇ ವೇಳೆ, ವಿಶ್ವದಲ್ಲಿ ಅತೀ ಹೆಚ್ಚು ಮುಸ್ಲಿಮರಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಪಾಕ್ ಅಗ್ರಸ್ಥಾನ ಪಡೆಯಲಿದೆ. ಪ್ರಸ್ತುತ ಅತೀ ಹೆಚ್ಚು ಮುಸ್ಲಿಮರಿರುವ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಂಡೋನೇಶಿಯಾವನ್ನು 2030ರಲ್ಲಿ ಪಾಕ್ ಹಿಂದಿಕ್ಕಲಿದೆ ಎಂದು ಅದು ತಿಳಿಸಿದೆ.

2030ರ ವೇಳೆಗೆ ಭಾರತದಲ್ಲಿನ ಮುಸ್ಲಿಮರ ಸಂಖ್ಯೆ 23,61,82,000ರಷ್ಟಾಗಲಿದೆ ಎಂದು ಧಾರ್ಮಿಕ ಹಾಗೂ ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಪೇವ್ ಫೋರಂ ತಯಾರಿಸಿದ ಅಧ್ಯಯನ ವರದಿ ಹೇಳಿದೆ. ಈ ಅವಧಿಯಲ್ಲಿ ಭಾರತದ ಒಟ್ಟು ಜನಸಂಖ್ಯೆಯ ಶೇ. 16ರಷ್ಟು ಮಂದಿ ಮುಸ್ಲಿಮರಾಗಿರುತ್ತಾರೆ ಎಂದು ಅದು ತಿಳಿಸಿದೆ.

2010ರ ಅಂದಾಜಿನನ್ವಯ ಭಾರತದಲ್ಲಿ 17,72,86,000 ಮುಸ್ಲಿಮರಿದ್ದಾರೆ. ಇದು ಒಟ್ಟು ಜನಸಂಖ್ಯೆಯ ಶೇ. 14.6ರಷ್ಟಾಗುತ್ತದೆ ಎಂದು ಅದು ತಿಳಿಸಿದೆ. ಅಂತೆಯೇ ಪಾಕಿಸ್ಥಾನದಲ್ಲಿ 2030ರ ವೇಳೆಗೆ ಮುಸ್ಲಿಮರ ಜನಸಂಖ್ಯೆ 25,61,17,000ರಷ್ಟಕ್ಕೆ ಏರುವ ಅಂದಾಜಿದೆ. 2010ರಲ್ಲಿ 17,80,97,000 ಮಂದಿ ಮುಸ್ಲಿಮರು ಪಾಕಿಸ್ಥಾನದಲ್ಲಿದ್ದಾರೆ.

**("ಉದಯವಾಣಿ" – 29 ಜನವರಿ 2011)**

ಓದಿದ್ದು

## 'ಮಕ್ಕರ ವಿಳಕ್ಕ್' ಮಾನವ ಸೃಷ್ಟಿ : ಟಿಡಿಬಿ

**ತಿರುವನಂತಪುರ :** ಶಬರಿಮಲೆ ದೇವಸ್ಥಾನದ 'ಮಕರ ವಿಳಕ್ಕ್' ಕುರಿತು ವಿವಾದಕ್ಕೆ ಮಹತ್ವ ನೀಡ ಬಯಸದ ತಿರುವಾಂಕೂರು ದೇವಸ್ವಂ ಮಂಡಲಿ (ಟಿಡಿಬಿ), ಅದು ಮಾನವ ನಿರ್ಮಿತ ಬೆಂಕಿಯೆಂದು ಹೆಚ್ಚಿನ ಭಕ್ತರಿಗೆ ತಿಳಿದಿರುವ ವಿಚಾರ. ಆದರೆ ಹಿಂದೂ ನಂಬಿಕೆಯೊಂದು ಇದರ ಹಿಂದಿದೆ ಎಂದು ಹೇಳಿದೆ.

"ಮಕರ ವಿಳಕ್ಕ್ ಎಂದರೆ ಪೊನ್ನಂಬಲಮೇಡುವಿನಲ್ಲಿ ಮನುಷ್ಯರು ಹಚ್ಚುವ ಬೆಂಕಿಯೆಂದು ಎಲ್ಲರಿಗೆ ತಿಳಿದಿರುವ ವಿಚಾರವಾಗಿದೆ ಮತ್ತು ಟಿಡಿಬಿ ಕೂಡ ಇದನ್ನು ಮಾನ್ಯ ಮಾಡುತ್ತದೆ" ಎಂದು ಟಿಡಿಬಿ ಅಧ್ಯಕ್ಷ ಎಂ. ರಾಜಗೊಪಾಲನ್ ನಾಯರ್ ಇಲ್ಲಿ ಸುದ್ದಿಗಾರರೊಂದಿಗೆ ಹೇಳಿದರು. ಆದರೆ ಈ ಕುರಿತು ಜನರಲ್ಲಿ ನಂಬಿಕೆಯೊಂದು ಮನೆ ಮಾಡಿರುವುದರಿಂದ ಅದು ಮಾನವಸೃಷ್ಟಿಯೆಂದು ಪ್ರಚಾರ ಮಾಡಲು ಮಂಡಲಿ ಮುಂದಾಗುವುದಿಲ್ಲ. ಜನರ ನಂಬಿಕೆಯೊಂದಿಗೆ ಚೆಲ್ಲಾಟವಾಡಲು ಮಂಡಲಿ ಬಯಸಿಲ್ಲ ಎಂದರು. ಅಯ್ಯಪ್ಪ ಭಕ್ತರು ಜ. 14ರಂದು ಮಕರವಿಳಕ್ಕ್ ವೀಕ್ಷಿಸಿ ಮರಳುತ್ತಿದ್ದ ವೇಳೆ ಪುಲಿಮೇಡುವಿನಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 102 ಮಂದಿ ಬಲಿಯಾದ ಹಿನ್ನೆಲೆಯಲ್ಲಿ ಮಕರ ವಿಳಕ್ಕ್ ಮಾನವ ಸೃಷ್ಟಿಯೇ ಅಥವಾ ದಿವ್ಯಜ್ಯೋತಿಯೇ ಎಂಬುದನ್ನು ಸ್ಪಷ್ಟಪಡಿಸುವಂತೆ ಕೇರಳ ಹೈಕೋರ್ಟು ಟಿಡಿಬಿಗೆ ಸೂಚಿಸಿತ್ತು. ದೇಗುಲದ ಪ್ರಮುಖ ಅರ್ಚಕರು, ತಿರುವಾಂಕೂರು ಮತ್ತು ಪಂದಳಂ ಅರಮನೆಗಳ ಸದಸ್ಯರು ಹಾಗೂ ದೇಗುಲದ ವಿಧಿಗಳಿಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮಂಡಲಿ ಸಭೆ ನಡೆಸಿದ ಬಳಿಕ ನಾಯರ್ ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದರು.

**(ಉದಯವಾಣಿ 01 ಫೆಬ್ರವರಿ 2011)**

## ಮಕ್ಕಳಿಗೆ ಲೈಂಗಿಕ ಕಿರುಕುಳ 21 ಪಾದ್ರಿಗಳ ಅಮಾನತು

**ನ್ಯೂಯಾರ್ಕ್ :** ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಆಪಾದನೆ ತನಿಖೆಯಲ್ಲಿ ಸಾಬೀತುಗೊಂಡ ಹಿನ್ನೆಲೆಯಲ್ಲಿ ಫಿಲಡೆಲ್ಫಿಯಾದ 21 ರೋಮನ್ ಕ್ಯಾಥೊಲಿಕ್ ಪಾದ್ರಿಗಳನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಚರ್ಚ್ ಆಡಳಿತ ಮಂಡಳಿ ಹೇಳಿದೆ.

ಪ್ರಕರಣದಲ್ಲಿ 37 ಮಂದಿ ಹಾಲಿ ಹಾಗೂ ಮಾಜಿ ಪಾದ್ರಿಗಳು ತಪ್ಪಿತಸ್ಥರು ಎಂಬ ಗ್ರ್ಯಾಂಡ್ ಜೂರಿ ವರದಿ ಹಿನ್ನೆಲೆಯಲ್ಲಿ 21 ಪಾದ್ರಿಗಳನ್ನು ಅಮಾನತು ಮಾಡಲಾಗಿದೆ. ವಿಶೇಷವಾಗಿ ಪಾದ್ರಿಗಳು ಹಾಗೂ ಚರ್ಚ್‌ನ ಇತರ ಸದಸ್ಯರು ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ್ದಕ್ಕಾಗಿ ತಾನು ದುಃಖಿತನಾಗಿದ್ದೇನೆ ಎಂದು ಫಿಲಡೆಲ್ಫಿಯಾದ ಕಾರ್ಡಿನಲ್ ಜಸ್ಟಿನ್ ರಿಗಾಲಿ ಹೇಳಿದ್ದಾರೆ.

ಪ್ರಕರಣದ ತನಿಖಾ ವರದಿ ಬಂದ ಬಳಿಕ 21 ಪಾದ್ರಿಗಳನ್ನು ಸೇವೆಯಿಂದ ಅಮಾನತುಗೊಳಿಸಲಾಗಿದ್ದು, ಇತರ ಮೂವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ ಎಂದವರು ತಿಳಿಸಿದ್ದಾರೆ.

**("ಉದಯವಾಣಿ" – 10 ಮಾರ್ಚ್ 2011)**

## ಲೈಂಗಿಕ ಕಿರುಕುಳ ಹಿಂದೂ ಗುರುವಿಗೆ ಜೈಲು

**ಹ್ಯೂಸ್ಟನ್ :** ಆಶ್ರಮದ ಆವರಣದಲ್ಲಿ ತಿರುಗಾಡುತ್ತಿದ್ದ ಯುವತಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆಪಾದನೆ ಹಿನ್ನೆಲೆಯಲ್ಲಿ ತಲೆಮರೆಸಿಕೊಂಡಿದ್ದ ಭಾರತೀಯ ದೇವಮಾನವ ಶ್ರೀ ಸ್ವಾಮೀಜಿ ಎಂದೇ ಪ್ರಸಿದ್ಧನಾಗಿದ್ದ ಪ್ರಕಾಶಾನಂದ ಸರಸ್ವತಿ ಸ್ವಾಮೀಜಿಗೆ ಅಮೆರಿಕ ಕೋರ್ಟ್ 14 ವರ್ಷಗಳ ಜೈಲು ಹಾಗೂ ಆತನ ಮೇಲಿನ 20 ಆರೋಪಗಳಿಗೆ ತಲಾ 10 ಸಾವಿರ ಡಾಲರ್ ದಂಡ ವಿಧಿಸಿದೆ.

1990ರಲ್ಲಿ ಡ್ರಿಫ್ಟ್‌ವುಡ್‌ನ ಬರ್ಸನ ಧಾಮ ಆಶ್ರಮದಲ್ಲಿ ಇಬ್ಬರು ಯುವತಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿದ 20 ಆರೋಪಗಳು ಸಾಬೀತಾಗಿದ್ದು, ಪ್ರಸ್ತುತ ತಲೆ ಮರೆಸಿಕೊಂಡಿರುವ 82ರ ಸ್ವಾಮೀಜಿಗೆ ಪ್ರತಿಯೊಂದು ಆರೋಪಗಳ ಮೇಲೂ ತಲಾ 14 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಬರ್ಸನಧಾಮ ಆಶ್ರಮವು ಭಾರತ ಹಾಗೂ ಇತರ ರಾಷ್ಟ್ರಗಳಲ್ಲಿ ಹಲವು ದೇಗುಲಗಳು ಹಾಗೂ ಆಸ್ಪತ್ರೆಗಳನ್ನು ನಿರ್ವಹಿಸುತ್ತಿದೆ. ಸ್ವಾಮೀಜಿಯನ್ನು ಈ ಹಿಂದೆ 10 ಲಕ್ಷ ಡಾಲರ್ ನಗದು ಬಾಂಡ್ ಮೇಲೆ ಬಿಡುಗಡೆ ಮಾಡಲಾಗಿತ್ತು.

**("ಉದಯವಾಣಿ" – 10 ಮಾರ್ಚ್ 2011)**

## ಹಿಂದೂ – ಭೀತಿವಾದ ನಂಟು ಸಲ್ಲದು

**ನಾಗಪುರ :** 'ಕೇಸರಿ ಭೀತಿವಾದ' ಅಥವಾ 'ಹಿಂದೂ ಭೀತಿವಾದ' ಎಂಬ ಹೆಸರುಗಳನ್ನು ಬಳಸುವುದಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದೆ ಹಾಗೂ ಹಿಂದೂಗಳಿಗೂ ಭೀತಿವಾದಕ್ಕೂ ಸಂಬಂಧವನ್ನು ಕಲ್ಪಿಸಲಾಗದು ಎಂದಿದೆ.

ಭೀತಿವಾದ ಮತ್ತು ಹಿಂದೂಗಳು ತದ್ವಿರುದ್ಧ ದಿಕ್ಕುಗಳಲ್ಲಿ ಇರುವಂತಹವು. ಅವುಗಳಲ್ಲಿ ಸಂಬಂಧ ಹುಟ್ಟಿಕೊಳ್ಳದು. ಇದು ಭಾರತದಲ್ಲಿ ಹಿಂದೂಗಳ ಬಲವನ್ನು ಕುಗ್ಗಿಸಲು ನಡೆಸಿದ ಪ್ರಯತ್ನವಾಗಿದೆ ಹಾಗೂ ಇದೇ ವೇಳೆ; ಮುಸ್ಲಿಮರನ್ನು ತುಷ್ಟೀಕರಿಸುವ ಪ್ರಯತ್ನವಾಗಿದೆ ಎಂದು ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು. ಕೈ ಬೆರಳಣಿಕೆಯ ಹಿಂದೂಗಳು ಭೀತಿವಾದಿ ಚಟುವಟಿಕೆಗಳಲ್ಲಿ ಒಳಗೊಂಡಿರುವುದು ವರದಿಯಾಗಿದೆ. ಆದರೆ ಅದಕ್ಕಾಗಿ ಇಡೀ ಹಿಂದೂ ಸಮುದಾಯವನ್ನೇ ದೂರುವುದು ನ್ಯಾಯಯುತವಲ್ಲ ಮತ್ತು ಸೂಕ್ತವಲ್ಲ. ಹಿಂದೂಗಳು ಸಾಮಾನ್ಯವಾಗಿ ಭೀತಿವಾದದಲ್ಲಿ ಒಳಗೊಳ್ಳುವುದಿಲ್ಲ ಎಂದು ಭಾಗವತ್ ತಿಳಿಸಿದರು.

**("ಉದಯವಾಣಿ" – 18 ಅಕ್ಟೋಬರ್ 2010)**

## ಓದಿದ್ದು

## ಪಾಕ್ : ಅಲ್ಪಸಂಖ್ಯಾಕ ಸಚಿವ ಭಟ್ಟಿ ಹತ್ಯೆ

**ಇಸ್ಲಾಮಾಬಾದ್** : ವಿವಾದಿತ ಧರ್ಮನಿಂದ ಕಾಯ್ದೆಗೆ ತಿದ್ದುಪಡಿ ತರಲು ಬಯಸಿದ್ದ ಪಾಕಿಸ್ತಾನ ಅಲ್ಪಸಂಖ್ಯಾಕ ವ್ಯವಹಾರಗಳ ಸಚಿವ, ಕ್ರೈಸ್ತ ಸಮುದಾಯಕ್ಕೆ ಸೇರಿದ ಶಾಬಾಜ್ ಭಟ್ಟಿ ಅವರನ್ನು ಬುಧವಾರ ತಾಲಿಬಾನ್ ಉಗ್ರರು ಗುಂಡಿಕ್ಕಿ ಹತ್ಯೆಗೈದಿದ್ದಾರೆ. ಸಚಿವರಿದ್ದ ಕಾರಿನ ಮೇಲೆ ಹೊಂಚು ದಾಳಿ ನಡೆಸಿದ ಉಗ್ರರು ಸಚಿವರ ಮೇಲೆ ಮನಬಂದಂತೆ ಗುಂಡು ಹಾರಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಕಳೆದೆರಡು ತಿಂಗಳಲ್ಲಿ ಆಡಳಿತಾರೂಢ ಪಿಪಿಪಿಯ ಉನ್ನತ ನಾಯಕನೋರ್ವನ ಹತ್ಯೆ ನಡೆದಿರುವುದು ಇದು 2ನೇ ಬಾರಿ.

ಗೀಲಾನಿ ಸಂಪುಟದಲ್ಲಿ ಭಟ್ಟಿ ಕ್ರೈಸ್ತ ಸಮುದಾಯಕ್ಕೆ ಸೇರಿದ ಏಕೈಕ ಸಚಿವರಾಗಿದ್ದರು. 42ರ ಹರೆಯದ ಭಟ್ಟಿ ಅವರಿಗೆ ಕಳೆದೊಂದು ವರ್ಷದಿಂದ ಜೀವ ಬೆದರಿಕೆ ಕರೆಗಳು ಬರುತ್ತಿದ್ದವು. ದಾಳಿ ಹೊಣೆಯನ್ನು ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ ಹೊತ್ತುಕೊಂಡಿದೆ.ಜನವರಿ 4 ರಂದು ಧರ್ಮನಿಂದೆ ಕಾಯ್ದೆಗೆ ವಿರೋಧ ವ್ಯಕ್ತಪಡಿಸಿದರೆಂಬ ಕಾರಣಕ್ಕೆ ಪಂಜಾಬ್ ಗವರ್ನರ್ ಸಲ್ಮಾನ್ ತಸ್ಸೀರ್ ಅವರನ್ನು ಅವರದೇ ಭದ್ರತಾ ಪಡೆಯ ಯೋಧ ಗುಂಡಿಕ್ಕಿ ಹತ್ಯೆಗೈದಿದ್ದ.

**("ಉದಯವಾಣಿ" - 3 ಮಾರ್ಚ್ 2011)**

## ಮೆದುಳಿನ ಆರೋಗ್ಯಕ್ಕೆ ಪದಬಂಧ?

**ಪಿಟಿಐ ಲಂಡನ್** : ನೀವು ಮೆದುಳಿನ ಆರೋಗ್ಯದ ಕುರಿತು ಕಾಳಜಿ ವಹಿಸುವವರಾಗಿದ್ದರೆ ದಿನ ನಿತ್ಯವೂ ಪದಬಂಧ ಸ್ನೇಹಿಯಾಗಿರಿ ಅನ್ನುತ್ತಾರೆ ತಜ್ಞರು.

ದೇಹಕ್ಕೆ ವಿಶ್ರಾಂತಿ ಅಗತ್ಯವಿರುವಂತೆ ಮೆದುಳಿಗೂ ವಿಶ್ರಾಂತಿ, ಆರೈಕೆಯ ಅಗತ್ಯವಿದೆ. ಹೊಸ ಸವಾಲುಗಳು, ಹೊಸ ಪ್ರವೃತ್ತಿ, ಕೌಶಲಗಳನ್ನು ಒಡ್ಡದಿದ್ದರೆ ಮೆದುಳಿನ ಜೀವಕೋಶಗಳು ಸೊರಗಲಾರಂಭಿಸುತ್ತವೆ. ಜೀವಕೋಶಗಳು ಸೊರಗಲಾರಂಭಿಸಿದರೆ ಚಟುವಟಿಕೆಗಳು ಕುಂಠಿತಗೊಳ್ಳುತ್ತವೆ. ಭಾವನೆಗಳನ್ನು ಅಭಿವ್ಯಕ್ತಿಸುವ ಸಂಕೇತ ಸಾಮರ್ಥ್ಯಕ್ಕೂ ಧಕ್ಕೆಯಾಗುತ್ತದೆ. ದೇಹಕ್ಕೆ ಪೌಷ್ಟಿಕಾಂಶ, ಆಮ್ಲಜನಕ ಸರಬರಾಜಾಗುವ ಪ್ರಕ್ರಿಯೆ ಕ್ರಮೇಣ ಕುಸಿಯುತ್ತದೆ. ಸುಡೊಕೊವನ್ನು ಬಿಡಿಸುವುದರಲ್ಲಿ ತೊಡಗಿಸಿಕೊಂಡರೆ ಮೆದುಳಿಗೆ ಚೈತನ್ಯ ದೊರೆಯುವ ಜತೆಗೆ ಅಲ್ಜೀಮರ್ ಕಾಯಿಲೆಯನ್ನು ದೂರವಾಗಿಸುತ್ತದೆ ಎಂದು ಮನೋವಿಜ್ಞಾನಿ ಜಾನ್ ಜಿ. ಗೋಲ್ಡ್‌ಮನ್ ತಿಳಿಸಿರುವುದಾಗಿ 'ಡೈಲಿ ಮೇಲ್' ವರದಿ ಮಾಡಿದೆ.

ನಾವು ಸಂಘ ಜೀವಿಗಳಾಗಿ ವಿಕಸನ ಹೊಂದಿರುವವರು. ಹೀಗಾಗಿ ಗುಂಪಿನೊಂದಿಗೆ ಪದಬಂಧದ ಮಾದರಿಯ ಆಟಗಳನ್ನು ಆಡುವುದರಿಂದ ಮೆದುಳಿನ ನರಗಳು ಚುರುಕುಗೊಳ್ಳುವ ಜತೆಗೆ ನೆನಪಿನ ಶಕ್ತಿಯೂ ವರ್ಧಿಸುತ್ತದೆ. ನಾವು ನಮ್ಮ ದೈಹಿಕ ಆರೋಗ್ಯಕ್ಕಾಗಿ ದೇಹವನ್ನು ಏರೋಬಿಕ್ಸ್‌ಗೆ ಒಡ್ಡುವಂತೆ ಮೆದುಳಿನ ಆರೋಗ್ಯಕ್ಕೆ ಗುಂಪಾಗಿ ಈ ಬಗೆಯ ಆಟಗಳಿಗೆ ಒಡ್ಡಬೇಕು ಎನ್ನುತ್ತಾರೆ ಜಾನ್ ಜಿ. ಗೋಲ್ಡ್‌ಮನ್. ಈ ವಾದದಲ್ಲಿ ವಿಜ್ಞಾನವೂ ಇದೆ ಎನ್ನುತ್ತಾರೆ ಕೇಂಬ್ರಿಡ್ಜ್‌ನ ಪ್ರೊ. ಫೆಲಿಶಿಯಾ ಹಪ್ಪರ್ಟ್.

**(ವಿಜಯಕರ್ನಾಟಕ 19 ಫೆಬ್ರವರಿ 2011)**

## 2030ರ ವೇಳೆಗೆ ಶೇ. 20 ತರುಣರಿಗೆ ಬಾಳಸಂಗಾತಿ ಸಿಗುವ ಸಂಭವ ವಿರಳ

**ಟೊರಾಂಟೊ** : ಭಾರತ ಮತ್ತು ಚೀನದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಹೆಚ್ಚುತ್ತಿರುವ ಕಾರಣದಿಂದ 20 ವರ್ಷಗಳ ಬಳಿಕ ಹತ್ತರಿಂದ ಇಪ್ಪತ್ತು ಶೇಕಡಾದಷ್ಟು ತರುಣರು ಬಾಳ ಸಂಗಾತಿಗಳನ್ನು ಪಡೆಯುವ ಸಂಭವ ವಿರಳ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

ಕೆನಡಿಯನ್ ಮೆಡಿಕಲ್ ಅಸೋಸಿಯೇಶನ್ ಜರ್ನಲ್(ಸಿಎಂಎಜೆ)ನಲ್ಲಿ ಪ್ರಕಟವಾದ ಸಮೀಕ್ಷೆಯೊಂದು ಭಾರತ, ಚೀನ ಮತ್ತು ದಕ್ಷಿಣ ಕೊರಿಯಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಹೆಚ್ಚುತ್ತಲಿದ್ದು ಮುಂದಿನ ಎರಡು ದಶಕಗಳಲ್ಲಿ ಇಲ್ಲಿ ಹತ್ತರಿಂದ ಇಪ್ಪತ್ತು ಶೇಕಡಾ ತರುಣರಿಗೆ ಬಾಳಸಂಗಾತಿಗಳು ಸಿಗದೆ ಪರದಾಟವಾಗಲಿದೆ ಎಂದು ಹೇಳಿದೆ. ಹೆಣ್ಣು ಭ್ರೂಣ ಹತ್ಯೆಯ ಕಾರಣದಿಂದ ಇಲ್ಲಿ ಗಂಡು ಮತ್ತು ಹೆಣ್ಣುಗಳ ಮಧ್ಯೆ ಅಸಮತೋಲನ ಏರ್ಪಡಲಿದೆ ಎಂದಿರುವ ವರದಿ ಮುಂದೆ 105 ಜನ ತರುಣರಿಗೆ 100 ಮಂದಿ ತರುಣಿಯರಷ್ಟೇ ಸಿಗಲಿದ್ದಾರೆ ಎಂದಿದೆ. ಈ ಪ್ರಮಾಣ ಕೊರಿಯಾದಲ್ಲಿ 125 ಮತ್ತು ಚೀನಾದಲ್ಲಿ 130 ಆಗಲಿದೆ.

**("ಉದಯವಾಣಿ" - 15 ಮಾರ್ಚ್ 2011)**

## ಚೀನ : ಒಂದೇ ಮಗು ನೀತಿ ಸಡಿಲ?

**ಬೀಜಿಂಗ್** : ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ವಿವಾದಾತ್ಮಕ ನೀತಿಯ ಮೂವತ್ತನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ, ಈ ನೀತಿಗೆ ಜನಸಂಖ್ಯೆ ಪ್ರಮಾಣ ಕಡಿಮೆ ಇರುವ ಕೆಲವೊಂದು ಆಯ್ದ ಪ್ರಾಂತಗಳಲ್ಲಿ ತುಸು ರಿಯಾಯಿತಿ ನೀಡುವ ಕುರಿತು ಸರಕಾರ ಚಿಂತನೆ ನಡೆಸಿದೆ.

2033ರಲ್ಲಿ ಜನಸಂಖ್ಯೆ 165 ಶತಕೋಟಿಗೆ ಏರಿಕೆಯಾಗುವ ನಿರೀಕ್ಷೆಯಿದ್ದರೂ ಕಳೆದ ಮೂರು ದಶಕಗಳಿಂದ ಜಾರಿಯಲ್ಲಿರುವ ಜನವಿರೋಧಿ ನೀತಿಯನ್ನು ಕೈಬಿಡುವ ವಿಚಾರದಲ್ಲಿ ಚೀನ ಎಚ್ಚರಿಕೆಯಿಂದ ಹೆಜ್ಜೆಯಿಡಲಿದೆ ಎಂದು ವಕ್ತಾರರು ಹೇಳಿದ್ದಾರೆ.

**("ಉದಯವಾಣಿ" - 27 ಸೆಪ್ಟೆಂಬರ್ 2010)**

ಓದಿದ್ದು

## ಪಾಕ್ ಅಪಾಯಕಾರಿ ರಾಷ್ಟ್ರ : ಮುಶ್

ನ್ಯೂಯಾರ್ಕ್ : ಪಾಕಿಸ್ಥಾನ ಒಂದು "ಅತ್ಯಂತ ಅಪಾಯಕಾರಿ" ರಾಷ್ಟ್ರ ಎಂದು ಮಾಜಿ ರಾಷ್ಟ್ರಾಧ್ಯಕ್ಷ ಪರ್ವೇಜ್ ಮುಶರ್ರಫ್ ಹೇಳಿದ್ದಾರೆ.

ಪಾಕ್ ಅತ್ಯಂತ ಅಪಾಯಕಾರಿ ರಾಷ್ಟ್ರ ಎಂಬುದನ್ನು ತಾನು ಒಪ್ಪಿಕೊಳ್ಳುತ್ತೇನೆ ಎಂದು ಟೈಮ್ ಮ್ಯಾಗಜಿನ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ. ಮುಶ್ ಪ್ರಕಾರ ಅಫ್ಘಾನಿಸ್ತಾನ ಅತ್ಯಂತ ಅಪಾಯಕಾರಿ ರಾಷ್ಟ್ರ. ಪ್ರಸಕ್ತ ಪಾಕಿಸ್ತಾನಕ್ಕೆ ಬಂಡುಕೋರರು ಹಾಗೂ ಭಯೋತ್ಪಾದನೆಯೇ ಪ್ರಬಲ ಶತ್ರುಗಳಾಗಿದ್ದಾರೆ. ಆದರೆ ಇದು ಶಾಶ್ವತ ಬೆದರಿಕೆಯಲ್ಲ. ಭಾರತೀಯ ಪಡೆಯಲ್ಲಿನ 90ರಷ್ಟು ಮಂದಿ ಪಾಕ್ ವಿರುದ್ಧವಿದ್ದಾರೆ. ಭಾರತದಿಂದ ಎದುರಾಗಬಹುದಾದ ಬೆದರಿಕೆಯನ್ನು ನಾವು ನಿರ್ಲಕ್ಷಿಸುವಂತಿಲ್ಲ ಎಂದೂ ಅವರು ತಿಳಿಸಿದ್ದಾರೆ.

("ಉದಯವಾಣಿ" – 28 ಮಾರ್ಚ್ 2011)

## ಹಿಟ್ಲರ್ ಮತ್ತು ಅಹ್ಮದಿಯಾ ಜಮಾಅತ್

ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮುಹಮ್ಮದ್ ಅಹ್ಮದ್(ರ) ಹೇಳುತ್ತಾರೆ:

ಜರ್ಮನಿಯ ಸ್ವೇಚ್ಛಾಧಿಕಾರಿಯಾಗಿದ್ದ ಹಿಟ್ಲರ್ ಅಧಿಕಾರಕ್ಕೆ ಬರುವ ಕೆಲವು ವರ್ಷಗಳ ಮೊದಲು ಮೈನ್ ಕಾಂಫ್ ಎಂಬ ಹೆಸರಿನಲ್ಲಿ ಒಂದು ಪುಸ್ತಕ ಬರೆದಿದ್ದ. ಇದು ತುಂಬಾ ಕೌತುಕಕರವೂ ರಸಮಯವೂ ಆದ ಪುಸ್ತಕವಾಗಿದೆ. ವರ್ಷಗಳ ಕಾಲ ನಾನು ಅದನ್ನು ಹುಡುಕಿದರೂ ಲಭಿಸಿರಲಿಲ್ಲ. ಕಳೆದ 2, 3 ವರ್ಷಗಳಲ್ಲಿ ಈ ಪುಸ್ತಕ ಇಂಡಿಯಾಕ್ಕೆ ಬಂದಿದ್ದರೂ ನನಗೆ ಸಿಕ್ಕಿರಲಿಕ್ಕಿಲ್ಲ. ಈಗ ಲಾಹೋರಿಗೆ ಹೋಗಿದ್ದಾಗ ಅದು ನನಗೆ ದೊರಕಿತು. ನಾನು ಅದನ್ನು ಓದಿದೆ. ನನಗೆ ಈ ಪುಸ್ತಕದ ಒಂದು ವಾಕ್ಯ, ಅದು ಆತ ಉದ್ದೇಶಪೂರ್ವಕ ಬರೆದಿರಲು ಸಾಧ್ಯತೆಯಿಲ್ಲದಿದ್ದರೂ ಆಕರ್ಷಕವಾಗಿ ಅನುಭವವಾಯಿತು. ಅದರಲ್ಲಿ ಅಹ್ಮದಿಯತಿನ ಶಕ್ತಿಯನ್ನು ಎತ್ತಿ ಹೇಳಲಾಗಿದೆ.

ಈ ಪುಸ್ತಕದಲ್ಲಿ ಹಿಟ್ಲರ್, ಕ್ರೈಸ್ತರ ಕುರಿತು ಹೀಗೆ ಬರೆದಿದ್ದಾನೆ: ".... ಏಶ್ಯಾದಲ್ಲೂ ಆಫ್ರಿಕಾದಲ್ಲೂ ಅವರು ತಮ್ಮ ಮತ ಪ್ರಚಾರ ನಡೆಸಲು ಹೆಚ್ಚು ಶ್ರಮಪಡುವವರಾದರೂ ಅವರ ಪ್ರಯತ್ನ ಪರಾಜಯಗೊಳ್ಳುತ್ತದೆ. ಕಾರಣವೇನೆಂದರೆ, ಅಲ್ಲಿ ಮುಸ್ಲಿಂ ಮಿಶನರಿಗಳು ಜನರನ್ನು ಇಸ್ಲಾಮಿಗೆ ಮರಳಿ ತರುತ್ತಾರೆ. ಕ್ರೈಸ್ತ ಮಿಶನರಿಗಳಿಗಿಂತ ಜಯಗಳಿಸುತ್ತಾರೆ."

ಇಸ್ಲಾಮಿನ ಯಥಾರ್ಥ ಸೇವೆ ಮಾಡುವ ಮಿಶನರಿಗಳು, ಕ್ರೈಸ್ತರನ್ನು ಎದುರಿಸಿ ಜನರನ್ನು ಇಸ್ಲಾಮಿಗೆ ಮರಳಿ ತರುವವರು ಅಹ್ಮದಿಯರಲ್ಲದೆ ಇನ್ನ್ಯಾರು!

ಈ ವಾಕ್ಯದಲ್ಲಿ ಅಹ್ಮದಿಯಾ ಜಮಾಅತ್ ಹಿಟ್ಲರ್‌ನ ಮನಸ್ಸಿನಲ್ಲಿ ಇಲ್ಲದಿರಬಹುದು. ಆದರೂ ಆತ ಅಹ್ಮದಿಯಾ ಜಮಾಅತಿನ ಶಕ್ತಿಯನ್ನು ಅಂಗೀಕರಿಸುತ್ತಾನೆ. ಏಶ್ಯಾದಲ್ಲೂ ಆಫ್ರಿಕದಲ್ಲೂ ಇಸ್ಲಾಮಿನ ಸಂದೇಶವನ್ನು ತಲುಪಿಸಿ ಅವರು ಜನರನ್ನು ಮರಳಿ ಇಸ್ಲಾಮಿಗೆ ತರುತ್ತಾರೆ; ಅವರ ಪರಿಶ್ರಮದ ಮುಂದೆ ಕ್ರೈಸ್ತ ಮಿಶನರಿಗಳು ಪರಾಜಿತರಾಗುತ್ತಾರೆ ಎಂದು ಆತ ಬರೆದಿದ್ದಾನೆ.

(ಮಶ್‌ಅಲೆರಾಹ್, ಪುಟ 82, 83/1)

(...............28ನೇ ಪುಟದಿಂದ)

ದೈವಿಕ ಶಿಕ್ಷೆ ಎಂದು ಹೇಳಿದರು. ಹೀಗಿದ್ದರೂ ಪಾಕಿಸ್ತಾನದ ಆಕ್ರಮಿಗಳಿಗೆ ಬುದ್ಧಿ ಬರಲಿಲ್ಲ. ಅಹ್ಮದಿಯರ ಕೈಗಳಲ್ಲಿ ಭಿಕ್ಷಾಪಾತ್ರೆ ಹಿಡಿಸುವೆನೆಂದು ಝಿಯಾಉಲ್ ಹಕ್ ಹೇಳಿದ್ದನು. ಆದರೆ ಇಂದು ಜಲಪ್ರಳಯ ದಿಂದುಂಟಾದ ನಾಶದ ಕಾರಣ ಪಾಕಿಸ್ತಾನದ ಸರಕಾರ ತನ್ನ ಎರಡು ಕೈಗಳಲ್ಲೂ ಭಿಕ್ಷಾಪಾತ್ರೆಗಳನ್ನು ಹಿಡಿದು ಲೋಕದ ವಿವಿಧ ದೇಶಗಳಲ್ಲಿ ಭಿಕ್ಷೆ ಬೇಡುತ್ತಾ ಇದೆ. ಆದರೆ ಲೋಕದ ದೇಶಗಳು ಭಯ ಪಡುವುದೇನೆಂದರೆ, ಪಾಕಿಸ್ತಾನ ಸರಕಾರದ ಅಧಿಕಾರಿಗಳು ಈ ಭಿಕ್ಷೆಯನ್ನು ಸಹ ಸಂತ್ರಸ್ತರಿಗೆ ನೀಡದೆ ಸ್ವತಃ ಜೀರ್ಣಿಸಿಕೊಳ್ಳವರೋ ಎಂದು.

ಜನರಲ್ ಝಿಯಾಉಲ್ ಹಕ್ ಅಹ್ಮದಿಯತನ್ನು ಕ್ಯಾನ್ಸರ್ ಎಂದು ಹೇಳಿದ್ದನು. ಆದರೆ ಇಂದು ಪಾಕಿಸ್ತಾನದ ಜನತೆ ಝಿಯಾಉಲ್ ಹಕ್ ಪೋಷಿಸಿದ ಭಯೋತ್ಪಾದನೆಯನ್ನು ಪಾಕಿಸ್ತಾನಕ್ಕೆ ತಗಲಿದ ಕ್ಯಾನ್ಸರ್ ಎಂದು ಹೇಳುತ್ತಾರೆ. ಅದು ತಾಲಿಬಾನ್ ಮತ್ತು ಅಲ್‌ಖಾಯಿದ ಎಂಬ ಹೆಸರಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಜನಾಬ್ ಖ್ವಾಜಾ ಅಬ್ದುಲ್ ಮೂಮಿನ್ ಸಾಹೇಬರು ನಾರ್ವೇಯ ಓಸ್ಲೋದಿಂದ ಹೀಗೆ ಬರೆಯುತ್ತಾರೆ:

ಜೋ ಖೂನೆ ಶಹೀದೋಂ ಕಾ ಬಹಾ ಬೈಠೆ ಖುದಾ ಮೇಂ  
ಉತ್‌ರೀ ಹೈ ಯೇ ಉಸ್ ಕೀ ಹೀ ಸಝಾ ಹೋಶ್‌ಮೇಂ ಆವೋ  
ಯೆ ನೂಹ್ ಕಾ ತೂಫಾನ್ ಹೈ ಜೋ ಖಹ್ರೆ ಖುದಾ ಹೈ  
ಅಬ್ ನೂಹ್ ಕೀ ಕಿಶ್ತೀ ಹೈ ಪನಾಹ್ ಹೋಶ್‌ಮೇಂ ಆವೋ.

"ಮಸ್‌ಜಿದ್‌ನಲ್ಲಿ ಹುತಾತ್ಮರ ರಕ್ತ ಹರಿಸಿದುದರ ಶಿಕ್ಷೆಯಾಗಿ ಈ ಜಲಪ್ರಳಯ ಉಂಟಾಗಿದೆ. ನೀವು ಎಚ್ಚರಗೊಳ್ಳಿರಿ. ಇದು ನೂಹ್‌ರ ಕಾಲದ ತೂಫಾನ್ ರೂಪದಲ್ಲಿ ದೇವನ ಕೋಪದ ಪ್ರಕಟಣೆಯಾಗಿ ಬಂದಿದೆ. ನಿಮಗೆ ರಕ್ಷಣೆ ಬೇಕಾದರೆ ನೂಹರ ನೌಕೆಯನ್ನೇರಿರಿ. ನೀವು ಎಚ್ಚರಗೊಳ್ಳಿರಿ."

★

## ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಖಾದಿಯಾನ್: 2010 ಡಿಸೆಂಬರ್ 26, 27, 28 ದಿನಾಂಕಗಳಲ್ಲಿ ಜರಗಿದ ಅಹ್ಮದಿಯಾ ಮುಸ್ಲಿಂ ಜಮಾಅತಿನ 119ನೇ ಜಲಸಾ ಸಾಲಾನ (ವಾರ್ಷಿಕ ಸಮ್ಮೇಳನ) ವಿಜಯಕರವಾಗಿ ಸಮಾಪ್ತವಾಯಿತು. 26ರಂದು ಬೆಳಿಗ್ಗೆ 10ಗಂಟೆಗೆ ನಾಝಿರ್ ಅಲ್‌ಲಾ ಮೌಲಾನ ಮುಹಮ್ಮದ್ ಇನಾಂ ಘೋರಿ ಸಾಹೇಬ್ ಪತಾಕೆ ಹಾರಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಉಪಗ್ರಹ ಮೂಲಕ ಸಮಾರೋಪ ಭಾಷಣ ಮಾಡಿದರು. 30 ವಿದೇಶಗಳಿಂದ ಬಂದ ಪ್ರತಿನಿಧಿಗಳ ಸಹಿತ 17000ಕ್ಕೆ ಮಿಕ್ಕಿದ ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸಿದರು.

ದೇವಾಸ್ತಿತ್ವ, ಪೈಗಂಬರರ ಜೀವನ ಚರಿತ್ರೆ, ಜಗತ್ತಿನ ವಿವಿಧ ಸಮಸ್ಯೆಗಳಿಗೆ ಇಸ್ಲಾಮಿನ ಪರಿಹಾರ ಮಾರ್ಗಗಳು, ಧರ್ಮ ಸಹಿಷ್ಣುತೆ, ಇಸ್ಲಾಂ ಮತ್ತು ಕುಟುಂಬ ಜೀವನ ಮೊದಲಾದ ವಿಷಯಗಳ ಕುರಿತು ಮೌಲಾನ ಮುನೀರ್ ಅಹ್ಮದ್ ಖಾದಿಂ ಸಾಹೇಬ್, ಮೌಲಾನ ಮುಬಶ್ಶಿರ್ ಅಹ್ಮದ್ ಕಹ್ಲೋನ್ ಸಾಹೇಬ್, ಮೌಲಾನ ಗುಲಾಂ ನಬಿ ನಿಯಾಝ್ ಸಾಹೇಬ್, ಮೌಲಾನ ಹಮೀದ್ ಕೌಸರ್ ಸಾಹೇಬ್, ಮೌಲಾನ ಸುಲ್ತಾನ್ ಅಹ್ಮದ್ ಝಫರ್ ಸಾಹೇಬ್, ಶಿರಾಝ್ ಅಹ್ಮದ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

ದ್ವಿತೀಯ ದಿನ ಜರಗಿದ ಸರ್ವ ಧರ್ಮ ಸಮ್ಮೇಳನದಲ್ಲಿ ಭಾರತದ ಪ್ರಮುಖ ಸಾಮಾಜಿಕ ಸಾಂಸ್ಕೃತಿಕ ಸೇವಾಕರ್ತ ಸ್ವಾಮಿ ಅಗ್ನಿವೇಶ್ ಸಹಿತ ಪ್ರಮುಖ ಧರ್ಮ ಮುಖಂಡರು ಮಾತನಾಡಿದರು.

ಸೃಷ್ಟಿ ಸೇವೆ ಮಾಡುತ್ತಾ ದೇವ ಸಂಪ್ರೀತಿಯನ್ನು ಗಳಿಸಲು ಸಮಾರೋಪ ಪ್ರವಚನದಲ್ಲಿ ಖಲೀಫತುಲ್ ಮಸೀಹ್ ಬೋಧಿಸಿದರು. ಸತ್ಯಥದೆಡೆಗೆ ಮನುಷ್ಯರನ್ನು ಮುನ್ನಡೆಸುವುದು ಧರ್ಮ ಸಂಘಟನೆಗಳ ಗುರಿ. ಆದರೆ ಸತ್ಯದ ಶತ್ರುಗಳು ಅವುಗಳ ವಿರೋಧ ಅಕ್ರಮವಾಗಿ ವರ್ತಿಸುತ್ತವೆ. ದೇವನು ಸರ್ವಶಕ್ತನೆಂದು ಈ ಜನರು ತಿಳಿದಿರಬೇಕಾಗಿದೆ. ನಮ್ಮ ಲಕ್ಷ್ಯ ಅಧಿಕಾರ ಕಸಿಯುವುದಲ್ಲ; ನಿಸ್ವಾರ್ಥವಾಗಿ ಮನುಷ್ಯ ವಂಶದ ಸೇವೆ ಮಾಡುವುದು ಎಂದು ಖಲೀಫರು ನುಡಿದರು.



ವೇದಿಕೆಯ ಒಂದು ದೃಶ್ಯ



ಸ್ವಾಮಿ ಅಗ್ನಿವೇಶ್ ಭಾಷಣ ಮಾಡುತ್ತಿರುವುದು

## ಮುಸ್ಲಿಮರು ಶಾಂತಿಗೋಸ್ಕರ

ಇಸ್ಲಾಂ ಎಂದರೆ ಶಾಂತಿ, ಸಮಾಧಾನ, ಸಂಪೂರ್ಣ ಸಮರ್ಪಣೆ ಎಂಬಿತ್ಯಾದಿ ಅರ್ಥ. ಆದರೆ ಇಂದು ಇಸ್ಲಾಂ ಎಂಬ ಪದಕ್ಕೆ ಭೀಕರವಾದ, ತೀವ್ರವಾದ ಎಂಬ ಅರ್ಥ ವ್ಯತ್ಯಾಸ ಉಂಟಾಗಿದೆ. ಈ ಪರಿಸ್ಥಿತಿಯ ಸಂಬಂಧಿಸಿ ಅಧ್ಯಯನ, ವಿಮರ್ಶೆ, ಪರಾಮರ್ಶೆ ನಡೆಸಿ, ಭಿನ್ನತೆಯನ್ನು ಹೆಚ್ಚಿಸುವುದಕ್ಕೆ ಬದಲು ಗಾಯಗಳನ್ನು ಹೊಲಿಯುವ ಒಂದು ಪ್ರಚಾರವನ್ನು ನ್ಯೂಯೋರ್ಕ್‌ನಲ್ಲಿ ಅಹ್ಮದಿಯಾ ಮುಸ್ಲಿಂ ಸಂಘಟನೆ ಇದೇ ವರ್ಷ ಜನವರಿ ಮಾಸದಲ್ಲಿ ಆರಂಭಿಸಿತ್ತು.

"ಮುಸ್ಲಿಮರು ಶಾಂತಿಗೋಸ್ಕರ" (Muslims for Peace Compaign) ಎಂಬ ಈ ಅಭಿಯಾನದ ಅಂಗವಾಗಿ ಅಮೇರಿಕದ ಟೈಮ್ಸ್ ಸ್ಕ್ವಾಯರ್ ಸಮೀಪ 42ನೇ ಬೀದಿಯಲ್ಲಿ ಸ್ಥಾಪಿಸಿದ ಬಿಲ್‌ಬೋರ್ಡ್‌ನಲ್ಲಿ ಬಿಳಿ ಪಾರಿವಾಳಗಳ ಶಾಂತಿ ಚಿಹ್ನೆ ಮತ್ತು ಅಮೇರಿಕದ ಪತಾಕೆಯ ಹಿನ್ನೆಲೆಯಲ್ಲಿ " MUSLIMS FOR LOVE, LOYALTY, PEACE" ಎಂಬ ಸಂದೇಶವನ್ನು ಬಿತ್ತರಿಸಲಾಯಿತು. ಬೆಳಿಗ್ಗೆ 6 ಗಂಟೆಯಿಂದ ಮಧ್ಯರಾತ್ರೆ ತನಕ ಎಡೆ ಬಿಟ್ಟು ತೋರಿಸುವ ಈ ಸಂದೇಶ ಜನವರಿ 17ರ ವರೆಗೆ ಮುಂದುವರಿಯಿತು. ಇಸ್ಲಾಂ-ಕರುಣೆ ಮತ್ತು ಶಾಂತಿಯ ಧರ್ಮವೆಂದೂ ವಿಶ್ವಶಾಂತಿಗೋಸ್ಕರ ಅದು ನೆಲೆಗೊಂಡಿದೆಯೆಂದೂ ಲೋಕಕ್ಕೆ ಮನಗಾಣಿಸಿಕೊಡುವ ಪ್ರಯತ್ನದ ಅಂಶವಾಗಿದೆ ಈ ಅಭಿಯಾನ. ಈ ಸಂದೇಶವನ್ನು ಹೊಂದಿದ ಕಿರುಹೊತ್ತಗೆಗಳನ್ನು ಸಹ ಹಂಚಲಾಯಿತು.

## ಬ್ರಿಟನ್‌ನಲ್ಲಿ ಇಸ್ಲಾಮಿಕ ಮುನ್ನಡೆ

ಬಿಳಿ ಮೈಬಣ್ಣ ಮತ್ತು ನೀಲಿ ಕಣ್ಣುಗಳಿರುವ ಲೋರ ಈಗ ಆಯಿಶ. ಜೀನ್ಸ್ ಧರಿಸುತ್ತಿದ್ದ ಅವಳು ಈಗ ಪರದಾ ಧರಿಸುತ್ತಾಳೆ; ಪವಿತ್ರ ಖುರ್‌ಆನ್ ಓದುತ್ತಾಳೆ; ಐದು ಹೊತ್ತು ನಮಾಝ್ ಮಾಡುತ್ತಾಳೆ. ಇವರ ಜೀವಿತದಲ್ಲಿ ನಾಟಕೀಯ ಮಾರ್ಪಾಟುಗಳು ಘಟಿಸುತ್ತಿವೆ. ಈ ಬದಲಾವಣೆ ಆಯಿಶಳಿಗೆ ಮಾತ್ರವಲ್ಲ. ಲೈಲ, ಸಮೀಹ, ಹನಾನ್, ಸಾರಾ ಜೋಸೆಫ್, ಮೇರಿ, ಟೋನಿಬ್ಲೇರ್‌ನ ನಾದಿನಿ ಲೋರಿನ್‌ಬೂತ್..... ಹಾಗೆ ಅನೇಕ ಬ್ರಿಟಿಷ್ ಯುವತಿಯರಿಗೆ ಪರಿವರ್ತನೆ ಸಂಭವಿಸುತ್ತದೆ.

ಬ್ರಿಟಿಷ್ ಸಮೂಹದಲ್ಲಿ, ವಿಶಿಷ್ಟವಾಗಿ ಸ್ತ್ರೀಯರೆಡೆಯಲ್ಲಿ ಇಸ್ಲಾಮಿಗೆ ಉತ್ತಮ ಅಂಗೀಕಾರ ಲಭಿಸುತ್ತಿದೆ ಎಂದು ಬಿಬಿಸಿ ಏಶ್ಯನ್ ನೆಟ್‌ವರ್ಕ್ ವರದಿ ಮಾಡಿದೆ. ಇಸ್ಲಾಮಿಗೆ ನಡೆಯುತ್ತಿರುವ ಮತಪರಿವರ್ತನೆಗಳ ಕುರಿತು "ಫೈತ್ ಮ್ಯಾಟರ್ಸ್" (Faith Matters) ಕಾರ್ಯಕ್ರಮಕ್ಕೋಸ್ಕರ ಸ್ವಾನ್‌ಸಿಯ (Swansea) ಯುನಿವರ್ಸಿಟಿ ನಡೆಸಿದ ಅಧ್ಯಯನದಲ್ಲಿ ಈ ವಿಚಾರ ಬಹಿರಂಗವಾಯಿತು. 2001ರಿಂದ 2010ರ ವರೆಗಿನ ಕಾಲದಲ್ಲಿ ಇಸ್ಲಾಮಿಗೆ ಪರಿವರ್ತಿತರಾದವರ ಸಂಖ್ಯೆ 60,000 ದಿಂದ 1,00,000ಕ್ಕೆ ತಲಪಿದೆ. 2001ರ ಜನಗಣತಿ ವಿವರಗಳು, ಯುರೋಪಿನ ಮತಪರಿವರ್ತನ ಸ್ಥಿತಿ ವಿವರಗಳು ಮತ್ತು ಬ್ರಿಟನಿನ ಸುಮಾರು 250 ಮಸೀದಿಗಳಿಂದ ಲಭಿಸಿದ ವರದಿಗಳ ಆಧಾರದಲ್ಲಿ ಅಧ್ಯಯನ ಮಾಡಲಾಯಿತು.

ಇಸ್ಲಾಂ ಸ್ವೀಕರಿಸಿದ ವ್ಯಕ್ತಿಗಳೊಂದಿಗೆ ಮಾತನಾಡಿದಾಗ ಅವರು ತಮ್ಮ ಕುಟುಂಬಗಳಿಂದ ಶಕ್ತಿಯಾದ ವಿರೋಧಗಳನ್ನು ಅನುಭವಿಸುತ್ತಿದ್ದಾರೆಂದು ಸಂಶೋಧಕರಿಗೆ ವ್ಯಕ್ತವಾಯಿತು. ಪರಿವರ್ತಿತರಾದ ಬ್ರಿಟಿಷ್ ಯುವತಿಯರ ಇಸ್ಲಾಂ ಧರ್ಮ ಸ್ವೀಕಾರಕ್ಕೆ ಮುಂಚೆ ಮತ್ತು ನಂತರದ ಅವರ ಜೀವನ ಕುರಿತು ಸ್ಪಷ್ಟವಾಗಿ ತಿಳಿಯುವ ಆ ದೇಶದ ಬ್ರಿಟಿಷ್ ಸಮೂಹಕ್ಕೆ ಇಸ್ಲಾಮಿಕ ಜೀವಿತದ ಮಹತ್ವವನ್ನು ಹೆಚ್ಚು ಸಮೀಪದಿಂದ ತಿಳಿಯಲು ಇವರು ಮುಖೇನ ಸಾಧ್ಯವಾಗುತ್ತದೆ.

## ಅಹ್ಮದಿಗೆ ಲಾರ್ಡ್‌ಶಿಪ್



ಬ್ರಿಟಿಷ್ ಕನ್ಸರ್‌ವೇಟಿವ್ ಪಾರ್ಟಿಯ ವೈಸ್ ಚೇರ್‌ಮ್ಯಾನ್ ತಾರೀಖ್ ಅಹ್ಮದ್‌ರಿಗೆ ಹೌಸ್ ಆಫ್ ಲಾರ್ಡ್ಸ್‌ನ ಲೈಫ್ ಪೀರ್ (Life Peer) ಪದವಿ ನೀಡಿ ಗೌರವಿಸಲಾಗಿದೆ. ಬ್ರಿಟಿಷ್ ರಾಣಿಯಿಂದ ಈ ಪಡವಿ ಲಭಿಸುವ ಮೊತ್ತ ಮೊದಲಿನ ಅಹ್ಮದಿ ಮತ್ತು ಕನ್ಸರ್‌ವೇಟಿವ್ ಪಾರ್ಟಿಯನ್ನು ಪ್ರತಿನಿಧೀಕರಿಸಿಕೊಂಡು ಪೀರ್ ಪದವಿ ದೊರೆತ 3ನೇ ಮುಸ್ಲಿಂ ತಾರೀಖ್ ಅಹ್ಮದ್ ಆಗಿದ್ದಾರೆ. ಬ್ರಿಟನ್ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಯುವಜನ ಘಟಕದ ರಾಷ್ಟ್ರೀಯ ಉಪಾಧ್ಯಕ್ಷರಾಗಿದ್ದ ಇವರು ಹ್ಯುಮಾನಿಟಿ ಫಸ್ಟ್, ಸೇವ್ ಚಿಲ್ಡ್ರನ್ ಫಂಡ್ ಮುಂತಾದ ಸೇವಕ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಯುನೈಟೆಡ್ ಕಿಂಗ್‌ಡಂ ಅಮೀರ್ ರಫೀಕ್ ಅಹ್ಮದ್ ಹಯಾತ್ ಸಾಹೇಬ್, ಇವರಿಗೆ ಲಭಿಸಿದ ಈ ಸ್ಥಾನದ ಬಗ್ಗೆ ಅಭಿನಂದಿಸಿ, ಇದು ದೇಶ ಸೇವೆ ಮಾಡುವ ಸಂದರ್ಭ ಒದಗಿಸಲಿ ಎಂದು ಹಾರೈಸಿದರು.

## ಅಹ್ಮದಿಯರ ಹಕ್ಕುಗಳನ್ನು ಸಂರಕ್ಷಿಸಿರಿ

– ಆಮ್ನೆಸ್ಟಿ ಇಂಟರ್‌ನೇಶನಲ್

ಇಂಡೋನೇಶ್ಯದ ಅಹ್ಮದಿಯರು ಅನುಭವಿಸುತ್ತಿರುವ ದೌರ್ಜನ್ಯಗಳಿಗೆ ಕೊನೆಗಾಣಿಸಲು ಇಂಡೋನೇಶ್ಯನ್ ಪ್ರೆಸಿಡೆಂಟ್ ಬಲವಾದ ನಿಯಮ ನಡೆವಳಿಕೆಗಳಿಗೆ ಸಿದ್ಧರಾಗಬೇಕೆಂದು ಆಮ್ನೆಸ್ಟಿ ಇಂಟರ್‌ನೇಶನಲ್ ಆಗ್ರಹಪಡಿಸಿದೆ.

ಮತ ಬೇಧಭಾವವಿಲ್ಲದೆ, ಅಹ್ಮದಿಯರ ಸಹಿತ ಎಲ್ಲ ಪೌರರ ಹಕ್ಕುಗಳನ್ನು ಸಂರಕ್ಷಿಸಲಾಗುವುದೆಂದು ಸ್ಪಷ್ಟವಾಗಿಯೂ ಬಹಿರಂಗವಾಗಿಯೂ ಸರಕಾರ ಘೋಷಿಸಬೇಕೆಂದು ಆಮ್ನೆಸ್ಟಿ ಇಂಟರ್‌ನೇಶನಲ್ ಏಶ್ಯಾ–ಪೆಸಿಫಿಕ್ ಡೈರೆಕ್ಟರ್ ಸಾಂ ಸರಿಫಿ ಒತ್ತಾಯಿಸಿದ್ದಾರೆ. 2011 ಫೆಬ್ರವರಿ 6ರಂದು ಸೌತ್ ಬಾಂಟನಿನ ಸಿಕ್ಯೂಬಿಕ್ ಎಂಬಲ್ಲಿ ಸಾವಿರಾರು ಮಂದಿ ಒಟ್ಟು ಸೇರಿ ಮೂವರು ಅಹ್ಮದಿಯರನ್ನು ಹುತಾತ್ಮರನ್ನಾಗಿ ಮಾಡಿದ ಬಳಿಕ ಇಂಡೋನೇಶ್ಯದಲ್ಲಿ ಅಹ್ಮದಿಯಾ ವಿರುದ್ಧ ಪ್ರತಿಭಟನೆಗಳು

ತೀವ್ರಗೊಂಡಾಗ ಆಮ್ನೆಸ್ಟಿ ಇಂಟರ್‌ನೇಶನಲ್ ಮಧ್ಯೆ ಪ್ರವೇಶಿಸಲು ಸಿದ್ಧವಾಯಿತು.


ಇಂದು ಮೂವರಾದರೆ ನಾಳೆ ಅಥವಾ ನಾಡಿದ್ದು ಸಾವಿರಗಟ್ಟಲೆ 'ಕಾಫಿರಾದ' ಅಹ್ಮದಿಯರ ತಲೆಗಳು ಕಡಿಯಲ್ಪಡುವುದು ಎಂಬ ಎಫ್.ಡಿ.ಐ. (ಇಸ್ಲಾಮಿಕ್ ಢಿಫಂಡರ್ಸ್ ಫ್ರಂಟ್) ಚೆಯರ್‌ಮನ್ ಹಬೀಬ್ ರಿಝೀಖ್ ಮಾತುಗಳು ಇಂಡೋನೇಶ್ಯದಲ್ಲಿ ಅಲ್ಪಸಂಖ್ಯಾತರಾದ ಅಹ್ಮದಿಯರು ಎದುರಿಸುವ ಅಪಾಯಕರವೂ ಭಯಾನಕವೂ ಆದ ಜೀವನ ಪರಿಸ್ಥಿತಿಯನ್ನು ಬಹಿರಂಗಗೊಳಿಸುತ್ತದೆ. ಅಹ್ಮದಿಯರನ್ನು ನಿಷೇಧಿಸಬೇಕೆಂದು ಆಗ್ರಹಪಡಿಸಿ ಜಕಾರ್ತದಲ್ಲಿ ಫೆಬ್ರವರಿ 18ರಂದು ಎಫ್.ಡಿ.ಐ. ನೇತೃತ್ವದಲ್ಲಿ ಮತ ಪ್ರದರ್ಶನದ ನಡೆಸಲ್ಪಟ್ಟಿತ್ತು.

## ಸ್ವಾಮಿ ಅಗ್ನಿವೇಶ್‌ಗೆ ಮುಲ್ಲಾ ಬೀಮಾರಿ

ಪಂಜಾಬ್ ಶಾಹಿ ಇಮಾಂ ಮತ್ತು ಮಜ್ಲಿಸ್ ಅಹ್ರಾರ್ ನಾಯಕ ಮೌಲಾನ ಹಬೀಬುರ್ರಹ್ಮಾನ್‌ಸಾನಿ ಲುಧಿಯಾನವಿಯ ಉಗ್ರ ಕೋಪಕ್ಕೆ ಸ್ವಾಮಿ ಅಗ್ನವೇಶ್ ಗುರಿಯಾಗಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ವಾರ್ಷಿಕ ಮಹಾಸಮ್ಮೇಳನದಲ್ಲಿ ಭಾಗವಹಿಸಿ, "ಇಸ್ಲಾಂ ಕುರಿತು ಅಪಾಯಕರವಾದ ಚಿಂತನೆಗಳೊಂದಿಗೆ ನಾನು ಇಲ್ಲಿಗೆ ಬಂದಿದ್ದರೂ ಇಸ್ಲಾಮಿನ ಯಥಾರ್ಥ ಸಂದೇಶ ಮತ್ತು ಅಧ್ಯಾಪನೆ ಇಂದು ನನಗೆ ಇಲ್ಲಿಂದ ಮನವರಿಕೆಮಾಡಲು ಸಾಧ್ಯವಾಯಿತು" ಎಂದು ಸ್ವಾಮಿ ಅಗ್ನಿವೇಶ್ ಹೇಳಿದ್ದು ಮೌಲಾನಕ್ಕೆ ಕೋಪ ಹುಟ್ಟಿಸಿತು. ಅಹ್ಮದಿಯರ ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ಸ್ವಾಮಿ ಓತಿಯ ಹಾಗೆ ಬಣ್ಣ ಬದಲಾಯಿಸಿದ್ದಾರೆಂದೂ ಯಥಾರ್ಥ ಇಸ್ಲಾಮಿನ ಸಂದೇಶವಾಹಕರಾಗಿ ಅಹ್ಮದಿಯರನ್ನು ಚಿತ್ರೀಕರಿಸಿದ ಕಾರಣ ಲೋಕದ ಮುಸ್ಲಿಮರ ಭಾವನೆಗಳಿಗೆ ಘಾಸಿಯಾಗಿದೆಯೆಂದೂ ಸ್ವಾಮಿ ಕ್ಷಮೆ ಯಾಚಿಸಬೇಕೆಂದೂ ರೋಷಾಕುಲರಾಗಿದ್ದ ಮೌಲಾನ ಹೇಳಿದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ

ಮಡಿಕೇರಿ : ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಕಳೆದ ಮಾರ್ಚ್ 27ರಂದು ಸರಕಾರಿ ಬಸ್ ನಿಲ್ದಾಣದ ಸಮೀಪವಿರುವ ಬಾಲಭವನದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು.



ಬಾಲಭವನದ ಸುಮಾರು 80 ಮಕ್ಕಳನ್ನು ಟೈಪ್ - 1 ಡಯಾಬಿಟಿಸ್ ತಪಾಸಣೆಗೆ ಒಳಪಡಿಸಲಾಯಿತು.

ಸುಮಾರು 300 ರೋಗಿಗಳಿಗೆ 50 ಸಾವಿರ ರೂಪಾಯಿ ಬೆಲೆಬಾಳುವ ಉಚಿತ ಔಷಧಿಗಳನ್ನು ನೀಡಲಾಯಿತು ಮತ್ತು ಮಧುಮೇಹ ಕಾಯಿಲೆಯನ್ನು ಪತ್ತೆಹಚ್ಚುವ ಉಪಕರಣಗಳನ್ನು ಒದಗಿಸಲಾಯಿತು.

ಬೆಂಗಳೂರಿನ ಡಾ॥ ಸಯ್ಯದ್ ಎ. ಎ. ಜಾವಝ್ ಎಂ. ಡಿ., ಡಾ। ತಾಹಿರ್ ಅಹ್ಮದ್, ಡಾ। ಹಮೀದುರ್ರಹ್ಮಾನ್ ಮತ್ತು ಡಾ॥ ಕುಸುಮ ಮಾಲ ಶಿಬಿರದಲ್ಲಿ ಭಾಗವಹಿಸಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ "ಶಕ್ತಿ" ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಜಿ. ಅನಂತಶಯನರವರು ಅಹ್ಮದಿಯಾ ಸಂಘಟನೆಯ ನಿಸ್ವಾರ್ಥ ಸೇವೆಯ ಬಗ್ಗೆ ಶ್ಲಾಘಿಸಿದರು.

## ಸರ್ವ ಧರ್ಮ ಶಾಂತಿ ಸಮ್ಮೇಳನ



ಯಲಬುರ್ಗಾ : ಅಹ್ಮದಿಯಾ ಸಂಘಟನೆಯ ವತಿಯಿಂದ ಕಲ್ಲೂರು ಗ್ರಾಮದಲ್ಲಿ 28-2-2011ರಂದು ಸರ್ವ ಧರ್ಮ ಶಾಂತಿ ಸಮ್ಮೇಳನ ವಿಜೃಂಭಣೆಯಿಂದ ಜರುಗಿತು.

ಕರ್ನಾಟಕ ರಾಜ್ಯದ ಉತ್ತರ ವಲಯ ಅಮೀರ್ ಜನಾಬ್ ಅಸದ್ ಸುಲ್ತಾನ್ ಘೋರಿ ಸಾಹೇಬ್ ಅಧ್ಯಕ್ಷತೆ ವಹಿಸಿದ್ದರು.

ಜ। ಉಸ್ಮಾನ್ ಪಾಶಾ ಸಾಹೇಬ್, ಮಿಸ್ಟರ್ ಸಿ.ಕೆ. ಅಬ್ರಹಾಂ, ಶ್ರೀ ಬಸವಲಿಂಗೇಶ್ವರ ಸ್ವಾಮೀಜಿ, ಜ। ಫಝುಲ್ ಹಖ್‌ಖಾನ್ ಸಾಹೇಬ್, ಮುಹಮ್ಮದ್ ಇಸ್ಮಾಈಲ್ ಸಾಹೇಬ್, ಫಹೀಂ ಅಹ್ಮದ್ ನೂರ್ ಸಾಹೇಬ್, ಶ್ರೀಮಾನ್ ಈರಯ್ಯ ಮೊದಲಾದವರು ಲೋಕದಲ್ಲಿ ಶಾಂತಿ ಸ್ಥಾಪನೆಗೆ ವಿವಿಧ ಧರ್ಮಗಳ ಕೊಡುಗೆ ಬಗ್ಗೆ ಮಾತನಾಡಿದರು.

## ಸರ್ವ ಧರ್ಮ ಶಾಂತಿ ಸಮ್ಮೇಳನ

ಹೂವಿನಹಡಗಲಿ ತಾಲೂಕಿನ ಕಾಗನೂರು ಗ್ರಾಮದಲ್ಲಿ ಕಳೆದ ಫೆಬ್ರವರಿ 6 ರಂದು ಸರ್ವ ಧರ್ಮ ಶಾಂತಿ ಸಮ್ಮೇಳನ ಜರಗಿತು. ಬಳ್ಳಾರಿಯ ಅಹ್ಮದಿಯಾ ಘಟಕದ ಅಧ್ಯಕ್ಷರಾದ ಜನಾಬ್ ಅಬೂ ನಯೀಮ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಅಲ್ಲಾಹ್ ಬಕ್ಷ್ ಸಾಹೇಬ್ ಖುರ್‌ಆನ್ ಪಠಿಸಿ ಕನ್ನಡ ಅನುವಾದ ಹೇಳಿದರು. ಉಸ್ಮಾನ್ ಪಾಶಾ ಸಾಹೇಬ್ ನಝುಮ್ ಹಾಡಿದರು. ಜ। ಬಶೀರ್ ಅಹ್ಮದ್ ಸಾಹೇಬ್ (ಶಿವಮೊಗ್ಗ) ಮಾತನಾಡುತ್ತಾ ಧರ್ಮ ಸಾಮರಸ್ಯ ಮತ್ತು ಶಾಂತಿ ಸ್ಥಾಪನೆಗೋಸ್ಕರ ಅಹ್ಮದಿಯಾ ಮುಸ್ಲಿಂ ಸಂಘಟನೆ ಲೋಕದಲ್ಲೆಲ್ಲೂ ಮಾಡುತ್ತಿರುವ ಪ್ರಯತ್ನದ ಬಗ್ಗೆ ವಿವರಿಸಿದರು.

ಧರ್ಮ ಮನುಷ್ಯನಿಗೆ ಬದುಕನ್ನು ಕಲಿಸುತ್ತದೆ ವಿನಾ ಜಾತಿ ಕಂದಕಗಳನ್ನಲ್ಲ. ಮನೆ ಕುಸಿದರೆ ಕಟ್ಟಬಹುದು. ಆದರೆ ಮನಸ್ಸು ಕುಸಿದರೆ ಕಟ್ಟಲು ಸಾಧ್ಯವಿಲ್ಲ. ಮನುಷ್ಯನಿಗೆ ಇನ್ನೊಬ್ಬ ಮನುಷ್ಯನನ್ನು ಪ್ರೀತಿಸುವ ಮನಸ್ಸು ಬೇಕಾಗಿದೆ. ವಿದ್ಯಾವಂತರಲ್ಲಿ ಹೆಚ್ಚು ಕೋಮು ಭಾವನೆಗೆ ಬೆಳೆಯುತ್ತಿರುವುದು ದೇಶದ ಐಕ್ಯತೆಗೆ ಧಕ್ಕೆ ತರುತ್ತದೆ. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಜಾತಿ-ಜಾತಿ ಮಧ್ಯೆ ಸಂಘರ್ಷ ಉಂಟುಮಾಡುತ್ತಿದ್ದಾರೆ. ವಿದ್ಯಾವಂತರಾದವರು ಎಚ್ಚರಿಕೆಯಿಂದಿರಬೇಕು. ಎಲ್ಲ ಧರ್ಮದ ಸಾರ ಒಂದೇ, ಅದು ಸತ್ಯದ ಪ್ರತೀಕ. ವಾತ್ಸಲ್ಯವಿಲ್ಲದ ಹೃದಯ ಸ್ಮಶಾನವಿದ್ದಂತೆ ಎಂದು ರಾಜ್ಯ ಉಣ್ಣೆ ನಿಗಮದ ಮಾಜಿ ಅಧ್ಯಕ್ಷ ವೈ. ಎನ್. ಗೌಡರ್ ಅಭಿಪ್ರಾಯಪಟ್ಟರು.

ಜಿ. ಬಿ. ಆರ್. ಕಾಲೇಜಿನ ಪ್ರಾಚಾರ್ಯರಾದ ಎಫ್.ಸಿ. ಕಾಲವಾಡ್ ಮಠ್ ಮಾತನಾಡಿ, ವ್ಯಕ್ತಿ ವ್ಯಕ್ತಿಗಳ ನಡುವೆ ಮಾನವೀಯ ಸಂಬಂಧ ಹೊಂದಿ, ನಾವು ಸೌಹಾರ್ದ ವಾತಾವರಣಕ್ಕಾಗಿ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು. ಬಸವಣ್ಣ, ಮುಹಮ್ಮದ್ ಪೈಗಂಬರ್, ಯೇಸು ಕ್ರಿಸ್ತರ ಆದರ್ಶ ತತ್ವಗಳನ್ನು ರೂಢಿಸಿಕೊಂಡು ಸರ್ವ ಧರ್ಮಗಳ ಬಗ್ಗೆ ವಿಚಾರ ಸಂಕಿರಣಗಳು ನಡೆಯುವ ಆವಶ್ಯವಿದೆ ಎಂದರು.

ಪ್ರೊ ಶಾಂತಮೂರ್ತಿ ಕುಲಕರ್ಣಿ, ಮೌಲಾನ ಫಝುಲ್ ಹಖ್ ಖಾನ್ ಸಾಹೇಬ್, ಶ್ರೀ ಬೆಲ್ಲದ ಕೊಟ್ರಪ್ಪ (ಹೆಡ್‌ಮಾಸ್ಟರ್), ಫಾ। ಎಲಿಯಾಸ್ ಡಿ'ಸೋಜಾ, ಶ್ರೀ .ಒಡೆಯರ್ ಚಂದ್ರಶೇಖರ ಶಿವಾಚಾರ್ಯ, ಶ್ರೀ ಎಂ.ಪಿ.ಎಂ. ಮಂಜುನಾಥ (ಪ್ರಿನ್ಸಿಪಾಲ್), ಜ। ಡಿ.ವಿ. ವಿಮಾ ನಾಯಕ (ಎಚ್.ಎಂ.), ಮೌಲಾನ ಶೈಖ್ ಬುರ್ಹಾನ್ ಅಹ್ಮದ್ ಸಾಹೇಬ್ ಮೊದಲಾದವರು ಧರ್ಮ ಸಾಮರಸ್ಯ, ಕೋಮು ಸೌಹಾರ್ದ ಮತ್ತು ಶಾಂತಿ-ಸಮಾಧಾನ ಸ್ಥಾಪನೆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಶಿಕ್ಷಕರಾದ ಎಂ. ನಾಗರಾಜ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಸರ್ವ ಧರ್ಮ ಸಮ್ಮೇಳನದ ಅಂಗವಾಗಿ ಶಿವಮೊಗ್ಗದ ಡೆಂಟಲ್ ಆಸ್ಪತ್ರೆಯ ಡಾ॥ ಹಸಿಬಾ ಉಚಿತ ದಂತ ತಪಾಸಣೆ ನಡೆಸಿದರು.

# ಸತ್ಯ ಸಂಘ

*– ಕೆ. ಎಂ. ಉಮರ್, ಮಡಿಕೇರಿ*

ಮಹ್‌ದಿ ಮಸೀಹರ ದೌತ್ಯವನ್ನು
ಹೊತ್ತು ತಂದಾ ಅಹ್ಮದ್ ನಬಿ
ಚದುರಿ ಹೋದ ಮನುಜರೆಲ್ಲನು
ಬಳಿಗೆ ಕರೆದರು ದೇವರ.

ಹಿಂದು ಮುಸ್ಲಿಮರೆಲ್ಲ ಬನ್ನಿರಿ
ಕ್ರೈಸ್ತ ಮತದ ಜನರು ಬನ್ನಿರಿ
ದೇವರಿಂದಾ ಲಭಿಸಿದಂಥಾ
ಸ್ವರ್ಗದಾ ಈ ತೋಪಿಗೆ

ಲೋಕದಲ್ಲಿರೊ ಮುಸ್ಲಿಮರೆಲ್ಲರು
ಆಲಿಸಿರಿ ಅತಿ ಶ್ರದ್ಧೆಯಿಂದ
ದೂರ ಮಡಿರಿ ಹಗೆತನವಾ
ಬಂದು ಸೇರಿರಿ ಸಾಲಲಿ

ಮುತ್ತು ನಬಿಯರಲಿರುವ ಪ್ರೀತಿ
ಮಾತ್ರ ನಿಮ್ಮ ಮನದಲ್ಲಿಟ್ಟು
ಅಣ್ಣ ತಮ್ಮರೆಂಬ ಭಾವದಿ
ಬಂದು ಸೇರಿರಿ ಸಾಲಲಿ

ಮುತ್ತು ಮುಸ್ತಫ ನಮ್ಮ ರಕ್ಷೆಗೆ
ಮುತ್ತು ರತ್ನದ ರಾಶಿಯನ್ನೇ
ರಕ್ತ ಸುರಿಸಿ ಕ್ಲೇಶ ಸಹಿಸಿ
ರಕ್ಷಿಸಿದ ಘನ ನಿಧಿಯಿದು

ಇದರ ಘನತೆಯನರಿತು ನಾವು
ಇತರ ಕಶ್ಮಲ ದೂರ ಮಾಡಿ
ಇನ್ನು ಮುಂದೆ ನಾವು ಉತ್ತಮ
ಶಿಷ್ಯರಾಗುವ ಬನ್ನಿರಿ

ತನ್ನ ಶಿಷ್ಯೆಯನಿರಿದು ಕೊಂದರು
ತನ್ನ ಹಲ್ಲನ್ನು ಜಜ್ಜಿ ಮುರಿದರು
ತನ್ನ ಚಾಚನ ಸೀಳಿಕೊಂದರು
ಮಕ್ಕದಾ ಕಟು ಕ್ರೂರರು

ಸಹಿಸಲಾರದೆ ಅವರ ಕ್ರೂರತೆ
ಪ್ರೀತಿ ಪತ್ನಿ ಖದೀಜ ಬೀಬಿ
ತನ್ನ ಪತಿ ಪುತ್ರಿಯರನ್ನು
ಅಗಲಿ ಹೋದರು ಸ್ವರ್ಗದಿ

ತನ್ನ ಮನೆಯ ಆಸ್ತಿ ಎಲ್ಲವ
ತ್ಯಜಿಸಿ ತಾನು ಶಿಷ್ಯರೊಂದಿಗೆ
ಪುಣ್ಯ ದೀನಿನ ರಕ್ಷಣೆಗೆ
ಗಣ್ಯರಾ ಸ್ಥಳ ಬಿಟ್ಟರು

ಸರ್ವ ಶಕ್ತನು ಬಳಿಕ ಅವರಿಗೆ
ವಿಜಯದಾ ಹೊಳೆ ಹರಿಸಿ ಕೊಟ್ಟನು
ತಮ್ಮ ದಾಯಿತರೇಬ್ಯವೆಲ್ಲವು
ತನ್ನ ಜೀವನ ಕಾಲದಿ

ಕ್ರೂರ ಜನರಿಗೆ ಕ್ಷಮೆಯ ನೀಡಿ
ಶಾಂತಿಯಿಂದ ಬಾಳಿರೆಂದು
ಸರಳ ಜೀವನ ತನ್ನದಾಗಿಸಿ
ದಾರಿದೀಪವನಿತ್ತರು.

ಪ್ರೀತಿ ನಿಮಗೆ ನಬಿಯಲಿದ್ದರೆ
ಎಲ್ಲ ಸಂಗವ ಬಿಟ್ಟು ನೀವು
ಬಂದು ಸೇರಿರಿ ಮಹ್‌ದಿ ತನ್ನಯ
ಸಂಘದಾ ಈ ಸಾಲಲಿ

ಮುತ್ತು ನಬಿಯರ ವಚನವನ್ನು
ವ್ಯರ್ಥ ಮಾಡದೆ ಮನದಲಿಟ್ಟು
ಪುಣ್ಯ ದೀನಿನ ಸೇವೆ ಮಾಡಲು
ಬಂದು ಸೇರಿರಿ ಸಾಲಲಿ

ಮಹ್‌ದಿ ಬಂದಾ ವಾರ್ತೆ ನಿಮ್ಮ
ಗಮನದಲ್ಲಿ ಬಂದ ಕೂಡಲೆ
ಮಂಜುಗಡ್ಡೆ ಮೇಲೆ ತೆವಳಿ
ಅವರ ಸಂಘವ ಸೇರಿರಿ

ಮುಸ್ಲಿಂ ಸಂಖ್ಯೆಯು ಕಡಿಮೆ ಇಲ್ಲ
ಕೊರತೆ ಇರುವುದು ಐಕ್ಯದಲ್ಲಿ
ನಾಶದಾ ಈ ಭಿನ್ನತೆಯ
ನೀವು ಎಲ್ಲರೂ ತ್ಯಜಿಸಿರಿ

ಎಪ್ಪತ್ತೆರಡು ಸಂಖ್ಯೆಧರೆಯಿಂ
ದೆತ್ತಲ್ಪಟ್ಟು ಮಾಯವಾಗಲಿ
ಸ್ವರ್ಗ ವಾಸಿಗರ ಸಂಖ್ಯೆ ಒಂದೇ
ಬಾಳಲೀ ಚಿರ ದೇಶದಿ

ಮೂಢ ನಂಬಿಕೆಯಲ್ಲಿ ಸಾಗುವ
ಮುಸ್ಲಿಂ ಬಾಂಧವರಲ್ಲಿ ಭಿನ್ನಹ
ಗಗನದಲ್ಲಿ ಮನುಜನಿಲ್ಲ
ಕಾಯುದ್ಯಾರನು ಸುಮ್ಮನೆ

ಈಸ ಬಂದರು ಕದ್‌ಅದಲ್ಲಿ
ಇವರ ಸತ್ಯವನರಿತು ಎಲ್ಲರು
ಮುತ್ತು ನಬಿಯರ ಸತ್ಯದೀನಿನ
ರತ್ನವಾಗಿರಿ ಬೇಗನೆ

ಬಾಬುಲುದ್ದಲಿ ವಧೆಯು ನಡೆಯಿತು
ಒಂಟಿ ಕಣ್ಣಿನ ನಾಶಕಾರಿಯ
ಉಪ್ಪು ನೀರಲಿ ಕರಗಿದಂತೆ
ಕರಗಿ ಹೋದನಾ ಕ್ರೂರನು

ಮುಸ್ತಫ ನಬಿ ತಂದ ದೀನಿನ
ಮುತ್ತು ರತ್ನದ ರಾಶಿಯಿಂದ
ಬಾಚಿ ದಾನವ ಮಾಡಿದರು
ಸತ್ಯದಾ ಮಸೀಹರು

ದೊರೆತ ಭಾಗ್ಯವ ವ್ಯರ್ಥ ಮಾಡದೆ
ಬಾಚಿಕೊಳ್ಳಿರಿ ಭಾಗ್ಯದಾ ನಿಧಿ
ಮತ್ತೆ ದೊರೆಯದು ಈಗ ಬಿಟ್ಟರೆ
ದೊರೆತ ಈ ಸೌಭಾಗ್ಯವು ★

# ಹಿಂದಿನ ಸಂಚಿಕೆಗಳನ್ನು ತಿರುವಿಹಾಕಿದಾಗ....



## ಸಂಪಾದಕರಿಗೆ ಪತ್ರ

ಪ್ರಿಯ ಸಂಪಾದಕರೇ.

ತಾವು ಕೃಪೆಯಿಟ್ಟು ಕಳುಹಿಸಿದ 'ಯುಗರಶ್ಮಿ'ಯ ಪ್ರತಿ ದೊರಕಿತು. ಕೃತಜ್ಞತೆಗಳು.

ಇಪ್ಪತ್ತನೇ ಶತಮಾನದ ಈ ಉತ್ತರಾರ್ಧದಲ್ಲೂ ಜಾತೀಯತೆ. ಧರ್ಮಾಂಧತೆ, ವಿದ್ವೇಷಗಳು ಮನುಷ್ಯನ ಬದುಕನ್ನೇ ಕಲಕುತ್ತಿರುವುದು ನಿಷ್ಠುರ ಸತ್ಯ. ಭಾವೈಕ್ಯದ. ಮತೀಯ ಸಾಮರಸ್ಯದ ಮಾತಾಡುತ್ತಾ ಅದರ ಹಿಂದೆ ತದ್ವಿರುದ್ಧವಾಗಿ ನಾವು ವರ್ತಿಸುತ್ತಿರುವುದು ಮನುಷ್ಯ ಜನಾಂಗದ ದುರಂತಗಳಲ್ಲೊಂದು. ಬಹುಶಃ ಇದಕ್ಕೆಲ್ಲ ಕಾರಣ ಪರಸ್ಪರ ತಿಳುವಳಿಕೆಯ ಅಭಾವ.

'ಯುಗರಶ್ಮಿ' ಇವನ್ನೆಲ್ಲಾ ಹೊಡೆದೋಡಿಸಿ ರಾಷ್ಟ್ರೀಯ ಭಾವೈಕ್ಯಕ್ಕೆ ಕಾರಣವಾಗುತ್ತದೆ ಎಂಬ ಭ್ರಮೆಯೇನೂ ನನಗಿಲ್ಲ. ಆದರೆ ಇದು ಆ ನಿಟ್ಟಿನಲ್ಲಿ ಕೈಕೊಂಡ ಒಂದು ಪುಟ್ಟ ಪ್ರಯತ್ನ ಎಂಬುದಂತೂ ಖಂಡಿತ. ಆದ್ದರಿಂದಲೇ ಇಂತಹ ಪತ್ರಿಕೆಗಳು ಸ್ವಾಗತಾರ್ಹ. ನಿಮ್ಮ ಇತಿಮಿತಿಯೊಳಗೆ ಅಚ್ಚುಕಟ್ಟಾಗಿ ಮಾಡಿದ ಈ ಕಾರ್ಯ ಖಂಡಿತ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗುತ್ತದೆ. ಮುಸ್ಲಿಂ ಬಂಧುಗಳ. ಅವರ ನಂಬುಗೆ. ಶ್ರದ್ಧೆ ವಿಶ್ವಾಸಗಳ ಕುರಿತು ಸ್ಪಷ್ಟ ಅರಿವನ್ನು 'ಯುಗರಶ್ಮಿ' ಇತರರಲ್ಲಿ ಮೂಡಿಸಲಿ. ಅದರೊಂದಿಗೇ ಮುಸ್ಲಿಮ್ ಜನಾಂಗದ ಏಳಿಗೆಗೂ ಕಾರಣವಾಗಲಿ ಎಂದು ಹಾರೈಸುತ್ತೇನೆ.

ಸಂಪೂರ್ಣ ಸಹಕಾರದ ಭರವಸೆಯೊಂದಿಗೆ -

ನಿಮ್ಮ ಬಂಧು
**ಬಿ. ವೇಣುಗೋಪಾಲ ಭಟ್,** ಎಂ. ಎ.
ಕನ್ನಡ ಉಪನ್ಯಾಸಕರು, ಕಾಸರಗೋಡು,
(ಕವಿತೆಗಾಗಿ **1973**ರ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇತ)

**(ಯುಗರಶ್ಮಿ, ಸಪ್ಟಂಬರ 1976)**

ಅಲ್ಲಾಹೊ ಅಕ್‌ಬರ್

ಜನಾಬ್ ಮುಹಮ್ಮದ್ ಯೂಸುಫ್. ಸಂಪಾದಕ 'ಯುಗರಶ್ಮಿ' ಇವರಿಗೆ ಸಲಾಂ ಅಲೈಕುಂ.

ನೀವು ಪ್ರೀತಿಪೂರ್ವಕವಾಗಿ ಕಳಿಸಿದ ಯುಗರಶ್ಮಿಯ ಎರಡು ಸಂಚಿಕೆಗಳು ನಿನ್ನೆ ಕೈ ಸೇರಿದವು. ಉಳಿದೆಲ್ಲ ಕೆಲಸಗಳನ್ನು ಬಿಟ್ಟು ಅವುಗಳನ್ನು ಅಮೂಲಾಗ್ರವಾಗಿ ಓದಿದೆ.

ನಿಮ್ಮ ಪ್ರಯತ್ನ ಸ್ತುತ್ಯ ಹಾಗೂ ಸ್ವಾಗತಾರ್ಹ. ನಿಮ್ಮ ತ್ರೈಮಾಸಿಕದಲ್ಲಿ ಪ್ರಕಟವಾಗುವ ಇಸ್ಲಾಮ್ ಧರ್ಮದ ತತ್ವಗಳನ್ನು ಮುಸ್ಲಿಮ್ ಸಮಾಜವು ಆಚರಣೆಯಲ್ಲಿ ತಂದದ್ದೇ ಆದರೆ ಹಿಂದು ಮುಸ್ಲಿಮರಲ್ಲಿ ಮೇಲಿಂದ ಮೇಲೆ ಕಂಡುಬರುವ ಘರ್ಷಣೆಗಳು ಮಾಯವಾಗಿ ನಿಜವಾದ ರಾಷ್ಟ್ರೀಯ ಏಕಾತ್ಮತೆಯು ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ.

ನಿಮ್ಮ ಪ್ರಯತ್ನ ಯಶಸ್ವಿಯಾಗಲೆಂದೂ ಮುಸ್ಲಿಮ್ ಜನತೆ ನಿಮಗೆ ಪ್ರೋತ್ಸಾಹ. ಸಹಕಾರಗಳನ್ನು ನೀಡಲೆಂದೂ ಸರ್ವಶಕ್ತನಾದ ಅಲ್ಲಾನಲ್ಲಿ ಪ್ರಾರ್ಥಿಸುತ್ತೇನೆ.

**ರಂಗರಾವ್ ತಲಚೇರಕರ,** ವಕೀಲರು. ಬೆಳಗಾವಿ

**(ಯುಗರಶ್ಮಿ, ಸಪ್ಟಂಬರ 1976)**

'ಯುಗರಶ್ಮಿ'ಯ ಎಲ್ಲ ಸಂಚಿಕೆಯನ್ನೂ ನೋಡಿದೆ: ತುಂಬಾ ಸಂತೋಷವಾಯಿತು.

ಮುಹಮ್ಮದ್ ಪೈಗಂಬರರು ಜಗತ್ತಿಗೆ ಶಾಂತಿಯ ಸಂದೇಶವನ್ನು ಬೀರಿದರು. ಶಾಂತಿದೂತರಾದ ಮುಹಮ್ಮದ್ ಪೈಗಂಬರರು ಆಗಿನ ಕಾಲದಲ್ಲಿ ಸಮಾಜದಲ್ಲಿ ರೂಢವಾಗಿದ್ದ ಅಜ್ಞಾನ. ಅಂಧಶ್ರದ್ಧೆ ಹಾಗೂ ಬಡತನಗಳನ್ನು ನಿವಾರಿಸಲು ಇಸ್ಲಾಮ ಧರ್ಮದ ಮೂಲಕ ಒಂದು ಕಾರ್ಯಕ್ರಮ ಇಟ್ಟರು. ಅದರ ಫಲವಾಗಿ ಜಗತ್ತಿನಲ್ಲೆಲ್ಲ ಇಸ್ಲಾಮವು ಹರಡಿತು. ಇಂದು ಸಹ ಇಸ್ಲಾಮ ಧರ್ಮವು ಸಮಾಜದ ರೋಗಕ್ಕೆ ಸರಿಯಾದ ಔಷಧ ನೀಡುತ್ತದೆ. ಇದನ್ನೇ ನಾವು ಮರೆತಿದ್ದೇವೆ. ಹಾಗೂ ಇಸ್ಲಾಮ ಧರ್ಮದ ತಿರುಳನ್ನು ಕಡೆಗಣಿಸಿ ಕೇವಲ ಪರಾಂಪರಾಗತ ವಿಧಿಗಳನ್ನು ಆಚರಿಸುತ್ತಿದ್ದೇವೆ. ಇದರಿಂದ ಮುಸ್ಲಿಮರು ಎಲ್ಲೆಲ್ಲಿಯೂ ದುಃಖದಲ್ಲಿದ್ದಾರೆ.

ಮುಹಮ್ಮದ್ ಪೈಗಂಬರರು ನಮಗೆಲ್ಲ ದುಡಿಯಲು ಹೇಳಿದ್ದಾರೆ. ಅದನ್ನು ನಾವು ಮಾಡುತ್ತಿಲ್ಲ. ಸಾದಾ ಜೀವನ ನಡೆಸಲು-ಸ್ವಾವಲಂಬಿಗಳಾಗಲು ಕಲಿಸಿದರು. ಇದನ್ನು ನಾವು ಕಲಿಯಲಿಲ್ಲ. ಸಂಗ್ರಹ ವೃತ್ತಿ ಬೇಡವೆಂದರು. ಹಾಗೂ ಈ ಪ್ರಕಾರ ಸಮತೆಯ ಸಂದೇಶ ನೀಡಿದರು.

ಇದನ್ನು ನಾವು ಕಡೆಗಣಿಸಿದ್ದೇವೆ. ಮುಹಮ್ಮದ್ ಪೈಗಂಬರರು ಜಗತ್ತಿಗೆ ಸಾರಿದ ಸಂದೇಶದ ಸಾರವೇ ಇದಾಗಿರುತ್ತದೆ. ಇದರ ಪಾಲನೆ ಮಾಡಿದರೆ ನಮ್ಮ ದುಃಖ. ನೋವು ಹಾಗೂ ಬಡತನ ಹಿಂಗಲಾರವೇ? ಈ ಬಗ್ಗೆ ನಾವೆಲ್ಲ ವಿಚಾರ ಮಾಡಬೇಕಾಗಿದೆ. ಹಾಗೂ ನಿಜ ಅರ್ಥದಲ್ಲಿ ಮುಸಲ್ಮಾನರಾಗಿ ಜಗತ್ತಿನಲ್ಲಿ ಬಡತನದ ನಿವಾರಣೆ ಮಾಡಿ ಸಮತೆಯ ಬಾವುಟವನ್ನು ಹಾರಿಸುವಾ.

ಈ ದಿಶೆಯಲ್ಲಿ 'ಯುಗರಶ್ಮಿ' ಮುನ್ನಡೆಯುವುದೆಂದು ನಂಬಿದ್ದೇನೆ.

**ಶಹೀದ ಧಾರವಾಡಕರ**
ಸಂಪಾದಕರು, ಸಮದರ್ಶಿ ಕನ್ನಡ ವಾರಪತ್ರಿಕೆ, ಗೋಕಾಕ

**(ಯುಗರಶ್ಮಿ, ದಶಂಬರ 1976)**

**Statement about ownership and other particulars about the Newspaper**
**Yugarashmi Quarterly**

(Form IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarterly |
| 3. Printer's Name | : | Muhanmmad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 4. Publisher's Name | : | Muhanmmad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 5. Editor's Name | : | Muhanmmad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : | Jamath Ahmadiyya "Darussalam" Near Railway Crossing , Pandeshwar, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Date : 1-4-2011

**Sd/-**
**Muhammad Yusuf**


# ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ
ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

*ಈ ಕೆಳಗಿನ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :*

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ : ರೂ. 25/-

# ಸನ್ಮಾರ್ಗ ದರ್ಶಕ

ಗ್ರಂಥಕರ್ತ
ಹಝ್ರತ್ ಮಿರ್ಝಾ ಬಶೀರ್ ಅಹ್ಮದ್


ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.

ಬೆಲೆ : ರೂ. 65/-

ಮೇಲಿನ ಎರಡೂ ಪುಸ್ತಕಗಳಿಗಾಗಿ ಸಂಪರ್ಕಿಸಿರಿ :
**Ahmadiyya Muslim Mission, No. 1, 3rd Cross Road, Wilson Garden, Bangalore - 560 027**

## ನಿಧನ ವಾರ್ತೆ

### ಡಾ॥ ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್



ಖಾದಿಯಾನ್ : ಅಹ್ಮದಿಯಾ ಮುಸ್ಲಿಂ ಜಮಾಅತಿನ ಅಖಿಲ ಭಾರತ ಅಧ್ಯಕ್ಷರಾದ ಡಾ॥ ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್ ಸಾಹೇಬ್ ತನ್ನ 79ನೇ ವರ್ಷ ಪ್ರಾಯದಲ್ಲಿ 20–03–2011ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅವರು ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳ ಶಾಸ್ತ್ರ ಮುಖ್ಯಸ್ಥ ಮತ್ತು ಹೈದರಾಬಾದ್ ನಿಝಾಮಿಯಾ ನಿರೀಕ್ಷಣಾಲಯದ ನಿರ್ದೇಶಕರಾಗಿದ್ದರು. ಅವರು ವಿಶ್ರುತ ಖಗೋಳ ವಿಜ್ಞಾನಿಯಾಗಿದ್ದರು. ವಿದೇಶಗಳ ಹಲವು ವಿಶ್ವವಿದ್ಯಾಲಯಗಳಲ್ಲಿ ಅವರು ಪ್ರಬಂಧ ಮಂಡಿಸಿದ್ದಾರೆ. ಅವರು ಖಗೋಳ ಶಾಸ್ತ್ರದಲ್ಲಿ ಅನೇಕ ವೈಜ್ಞಾನಿಕ ಪ್ರಬಂಧಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. 1981ರಲ್ಲಿ ಮೇಘ್‌ನಾಥ್ ಸಾಹ ಪದವಿಯನ್ನು ಗಳಿಸಿದ್ದಾರೆ. ಅವರು ಖುರ್‌ಆನ್ ಕಂಠಪಾಠ ಮಾಡಿದ ಹಾಫಿಝ್ ಕೂಡ ಆಗಿದ್ದಾರೆ.

ಅಲ್ಲಾಹು ದಿವಂಗತರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ. ಆಮೀನ್.

~~~~~~~~~*~~~~~~~~

### ಹಿದಾಯತುಲ್ಲಾ ಖುಬ್ಸ್ ಸಾಹೇಬ್



ಫ್ರಾಂಕ್‌ಫರ್ಟ್: ಜರ್ಮನಿಯ ಅಹ್ಮದಿಯಾ ಮುಸ್ಲಿಂ ಜಮಾಅತಿನ ಗಣ್ಯ ಸದಸ್ಯ, ಪ್ರಸಿದ್ಧ ಲೇಖಕ, ಕವಿ ಮತ್ತು ಜರ್ಮನಿಯ ಜಾಮಿಅ ಅಹ್ಮದಿಯಾದ ಅಧ್ಯಾಪಕ ಆಗಿದ್ದ ಹಿದಾಯತುಲ್ಲಾ ಖುಬ್ಸ್ ಸಾಹೇಬ್ ತನ್ನ 65ನೇ ವರ್ಷ ಪ್ರಾಯದಲ್ಲಿ 4–1–2011ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

1960ರಲ್ಲಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದ ಅವರು ಸಮರ್ಪಿತನಾದ ಅಹ್ಮದಿಯಾಗಿದ್ದರು. ಅವರು ಇಸ್ಲಾಮಿನ ವಿರುದ್ಧದ ಆರೋಪಗಳನ್ನು ಖಂಡಿಸುತ್ತಾ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಹಝ್ರತ್ ಪೈಗಂಬರರ(ಸ) ಕುರಿತು ಎರಡು ಸಂಪುಟಗಳ ಪುಸ್ತಕ ಮತ್ತು ಇಸ್ಲಾಮಿನ ಬಗ್ಗೆ 99 ಪ್ರಶ್ನೆಗಳಿಗೆ ಉತ್ತರ, ಇಸ್ಲಾಮಿನಲ್ಲಿ ಸ್ತ್ರೀಯರ ಸ್ಥಾನ, ಇಸ್ಲಾಮಿನ ಸ್ವರ್ಗ ನರಕ ಇತ್ಯಾದಿ ವಿಷಯಗಳಲ್ಲಿ ಅವರು ಪುಸ್ತಕಗಳನ್ನು ಬರೆದಿದ್ದಾರೆ. ಇದಲ್ಲದೆ 12 ಸಾಹಿತ್ಯ ಪುಸ್ತಕಗಳನ್ನು ಅವರು ಜರ್ಮನ್ ಭಾಷೆಯಲ್ಲಿ ಬರೆದಿದ್ದಾರೆ.

ನೊಬೆಲ್ ಪದವಿ ಪಡೆದ ವಿಶ್ವ ಸಾಹಿತಿ ಗುಂತರ್ ಗ್ರಾಸ್, ಹಿದಾಯತುಲ್ಲಾ ಸಾಹೇಬರ ನಿಧನದಲ್ಲಿ ಸಂತಾಪ ಸೂಚಿಸಿ 1960ರ ದಶಕದ ಜರ್ಮನಿಯ ಅತಿ ನಿಪುಣ ಬರಹಗಾರ ಅವರಾಗಿದ್ದರೆಂದು ಸ್ಮರಿಸಿದರು. ಜರ್ಮನಿಯ 16 ರಾಷ್ಟ್ರಮಟ್ಟದ ಪತ್ರಿಕೆಗಳು ಅವರ ನಿಧನ ವಾರ್ತೆಯನ್ನು ಪ್ರಮುಖ ಸುದ್ದಿಯಾಗಿ ಪ್ರಕಟಿಸಿವೆ. ದೇಶ ವಿದೇಶದ ಮುಖಂಡರೂ ಜರ್ಮನ್ ಸಾಹಿತ್ಯ ಸಾಂಸ್ಕೃತಿಕ ರಂಗದ ಪ್ರಮುಖರೂ ಸಹಿತ ವಿಶಾಲವಾದೊಂದು ಸ್ನೇಹ ವಲಯ ಅವರಿಗಿತ್ತು. ಅತಿ ಭಕ್ತನಾದ ಹಿದಾಯತುಲ್ಲಾ ಸಾಹೇಬ್ ಜಮಾಅತಿನಲ್ಲಿ ಸಂಪೂರ್ಣ ಸೇವಾನಿರತನೂ ಸಮರ್ಪಿತನೂ ಮಾದರಿ ಪುರುಷನೂ ಆಗಿ ಜೀವನ ನಡೆಸಿದ್ದರು.

ಅಲ್ಲಾಹು ದಿವಂಗತರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ. ಆಮೀನ್.
~~~~~~~~~

Registered with the Registrar of Newspapers for India No. R.N. 27354/75
Yugarashmi Kannada Quarterly, April - 2011. Price : Rs. 10/-

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟಿಲಿವಿಷನ್ ಅಹ್ಮದಿಯಾ
ಇಂಟರ್‌ನೇಶನಲ್

THE FIRST ISLAMIC SATELLITE CHANNEL

Broadcasting Round the clock

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.50 EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-MAIL : INFO@ALISLAM.ORG WEBSITE : HTTP:WWW.ALISLAM.ORG/MTA.TV




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

ಪವಿತ್ರ ಖುರ್‌ಆನ್
ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001